ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 23 ಗುರುವಾರ 2023

ಸಂಪುಟ: 44 | ಸಂಚಿಕೆ: 216 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಜಾತಿ ಗಣತಿ ವರದಿಗೆ ಒಕ್ಕಲಿಗರು, ವೀರಶೈವ ಲಿಂಗಾಯತರ ತೀವ್ರ ವಿರೋಧದ ಹಿನ್ನೆಲೆ

ಕೆಲವು ಮಾರ್ಪಾಡಿಗೆ ನಿರ್ಧಾರ

ಇದಕ್ಕೆ ಪೂರಕವಾಗಿ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷರ ಅವಧಿ ತಿಂಗಳ ಕಾಲ ವಿಸ್ತರಣೆ



ಬೆಂಗಳೂರು, ನ.22(ಕೆಎಂಶಿ)– ಜಾತಿ ಗಣತಿಗೆ ವೀರಶೈವ–ಲಿಂಗಾಯತ, ಒಕ್ಕಲಿಗ ಸಮುದಾಯಗಳ ವಿರೋಧಕ್ಕೆ ತಲೆಬಾಗಿರುವ ರಾಜ್ಯ ಸರ್ಕಾರ ಆಂತರಿಕವಾಗಿ ಕೆಲವು ಬದಲಾವಣೆ ಮಾಡಲು ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗಡೆ ಅವರ ಅಧಿಕಾರಾವಧಿಯನ್ನು ಒಂದು ತಿಂಗಳ ಮಟ್ಟಿಗೆ ವಿಸ್ತರಿಸಿ ಆದೇಶಿಸಿದೆ.

ಕಾಂತರಾಜ್ ನೀಡಿರುವ ವರದಿಯಲ್ಲಿ ಲಿಂಗಾಯತ, ಒಕ್ಕಲಿಗ ಸೇರಿದಂತೆ ಮುಂದುವರೆದ ಜಾತಿಗಳನ್ನು ಆಂತರಿಕವಾಗಿ ವಿಭಜಿಸಿ ಸಮುದಾಯಗಳನ್ನು ಗುಂಪುಗಳಾಗಿ ಒಡೆಯಲಾಗಿತ್ತು. ಇದರಿಂದ ಈ ಎರಡೂ ಸಮುದಾಯಗಳು ಇತರ ಸಮುದಾಯಗಳಿಗಿಂತ ಅಂಕಿ–ಸಂಖ್ಯೆಯಲ್ಲಿ ಕೆಳಮಟ್ಟಕ್ಕೆ ಹೋಗಿದ್ದವು. ಶಾಶ್ವತ ಆಯೋಗ ನೀಡಿರುವ ವರದಿಯ ಅಂಕಿ–ಅಂಶಗಳಲ್ಲಿ ಯಾವುದೇ ಬದಲಾವಣೆ ಇಲ್ಲ. ಆದರೆ, ಸಮುದಾಯಗಳ ಆಂತರಿಕ ವಿಂಗಡಣೆಯನ್ನು ತಪ್ಪಿಸಿ ಸಮುದಾಯವನ್ನು ಒಟ್ಟಾಗಿ ಪರಿಗಣಿಸಲಾಗುವುದು.


ಕಳೆದ ಎಂಟು ವರ್ಷಗಳ ಹಿಂದೆಯೇ ವರದಿ ಸೋರಿಕೆಯಾಗಿ ಈ ಸಮುದಾಯಗಳ ಕೆಂಗಣ್ಣಿಗೆ ಗುರಿಯಾಗಿತ್ತು ಮತ್ತೆ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ, ● 6ನೇ ಪುಟಕ್ಕೆ

ಜಾತಿ ಗಣತಿ ವರದಿ ಕೈಸೇರಿದ ನಂತರ ತೀರ್ಮಾನ



ಬೆಂಗಳೂರು, ನ.22(ಕೆಎಂಶಿ)– ಜಾತಿ ಜನಗಣತಿ ವರದಿ ಇನ್ನೂ ನಮ್ಮ ಕೈಸೇರಿಲ್ಲ. ಕೊಟ್ಟ ಮೇಲೆ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಾತಿ ಜನಗಣತಿ ವರದಿ ಕೊಡುವ ಮುನ್ನವೇ ಏಕೆ ವಿರೋಧ ಎಂದರು. ಮೂಲಪ್ರತಿ ಕಾಣೆಯಾಗಿದೆ ಎಂಬ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಹೇಳಿಕೆ ಬಗ್ಗೆ ನನಗೆ ತಿಳಿದಿಲ್ಲ, ನನ್ನನ್ನು ಭೇಟಿಯಾಗಿ ವರದಿ ಸಲ್ಲಿಸುತ್ತಾರೆ, ಅಲ್ಲಿಯವರೆಗೆ ಅವಧಿ ವಿಸ್ತರಣೆ ಮಾಡಿ ಎಂದು ಮನವಿ ಮಾಡಿದ್ದರು, ವರದಿ ಯಾವಾಗ ಕೊಡುತ್ತಾರೋ ಅಲ್ಲಿಯವರೆಗೆ ● 6ನೇ ಪುಟಕ್ಕೆ

ಅಧಿಕೃತ ಮಾಹಿತಿ ಬಂದಿಲ್ಲ



ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗದ ಅವಧಿ ವಿಸ್ತರಣೆ ಬಗ್ಗೆ ಇನ್ನೂ ಅಧಿಕೃತ ಮಾಹಿತಿ ಬಂದಿಲ್ಲ ಎಂದು ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿಗಳೇ ಹೇಳಿದ್ದಾರೆ ಎಂದರೆ ಅವಧಿ ವಿಸ್ತರಣೆ ಆಗಬಹುದು. ಇದುವರೆಗೂ ಈ ಬಗ್ಗೆ ನಮಗೆ ಅಧಿಕೃತ ಮಾಹಿತಿ ಬಂದಿಲ್ಲ. ನಮಗೆ ಸಮಯಕೊಟ್ಟರೆ ಕ್ರಾಸ್ ಚೆಕ್ ಮಾಡಿ ವರದಿ ಕೊಡುತ್ತೇವೆ. ಮುಖ್ಯಮಂತ್ರಿಗಳೇ ಆಯೋಗದ ಅವಧಿ ಬಗ್ಗೆ ಹೇಳಿದ ಮೇಲೆ ಒಳ್ಳೆಯದಾಯ್ತು, ಇನ್ನೂ ಸಮಯ ಸಿಗುತ್ತದೆ. ಜನವರಿಯಷ್ಟು ಸಮಯ ಬೇಕಾಗಿಲ್ಲ ಬೇಗನೆ ವರದಿ ಕೊಡುತ್ತೇವೆ. ವರದಿ ಕೊನೆಯ ಹಂತದಲ್ಲಿದೆ. ಡಿಸೆಂಬರ್‌ನಲ್ಲಿ ವರದಿ ಕೊಡುತ್ತೇವೆ ಎಂದಿದ್ದಾರೆ. ಪೂರ್ತಿ ಆಯೋಗವೇ ಮುಂದುವರಿಯಲಿದೆ. ಮುಖ್ಯಮಂತ್ರಿಗಳು ಇದರ ಬಗ್ಗೆ ತೀರ್ಮಾನ ಮಾಡುತ್ತಾರೆ. ಈ ವರದಿ ಆಯೋಗದ ವರದಿ ಆಗಿರುತ್ತದೆಯೇ ಹೊರತು ಕಾಂತರಾಜು, ಜಯಪ್ರಕಾಶ್ ಮುಖ್ಯ ಅಲ್ಲ. ವರದಿ ಯಾವುದೇ ರೀತಿಯಲ್ಲಿಯೂ ಲೀಕ್ ಆಗಿಲ್ಲ ಎಂದಿದ್ದಾರೆ.

ರೈಲಿಗೆ ತಲೆಯೊಡ್ಡಿ ರೈಲ್ವೇ ಇಂಜಿನಿಯರ್ ಆತ್ಮಹತ್ಯೆ

ಮೈಸೂರು ರೈಲು ನಿಲ್ದಾಣದ 6ನೇ ಪ್ಲಾಟ್‌ಫಾರಂನಲ್ಲಿ ಬುಧವಾರ ಮಧ್ಯಾಹ್ನ ಘಟನೆ

ಮೈಸೂರು,ನ.22(ಆರ್‌ಕೆ)– ಚಲಿಸುತ್ತಿದ್ದ ರೈಲಿಗೆ ತಲೆಯೊಡ್ಡಿ ರೈಲ್ವೇ ಇಂಜಿನಿಯರ್ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರು ರೈಲು ನಿಲ್ದಾಣದಲ್ಲಿ ಇಂದು ಮಧ್ಯಾಹ್ನ ಸಂಭವಿಸಿದೆ.

ಮೈಸೂರು ರೈಲ್ವೇ ಸ್ಟೇಷನ್ ಮೆಕ್ಯಾನಿಕಲ್ ವಿಭಾಗದ ಸೀನಿಯರ್ ಸೆಕ್ಷನ್ ಇಂಜಿನಿಯರ್ ಆಗಿದ್ದ ಪ್ರಭು(45) ಆತ್ಮಹತ್ಯೆಗೆ ಶರಣಾದವರು. ಮೂಲತಃ ಚಿತ್ರದುರ್ಗ ಜಿಲ್ಲೆ, ಚಿಕ್ಕಜಾಜೂರು ಗ್ರಾಮದವರಾದ ಅವರು, ಮೈಸೂರಿನ ಗೋಕುಲಂನಲ್ಲಿ ವಾಸಿಸುತ್ತಿದ್ದರು. ಇಂದು ಮಧ್ಯಾಹ್ನ 1.30 ಗಂಟೆ ವೇಳೆಗೆ ಮೈಸೂರಿಂದ ಬಾಗಲಕೋಟೆಗೆ ಹೋಗುತ್ತಿದ್ದ ರೈಲಿಗೆ ರೈಲ್ವೇ ನಿಲ್ದಾಣದ 6ನೇ ಪ್ಲಾಟ್‌ಫಾರಂ ಬಳಿ ತಲೆಕೊಟ್ಟು ಸಾವನ್ನಪ್ಪಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ರೈಲ್ವೇ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಅಶೋಕ ಮತ್ತು ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಪ್ರಕರಣ ದಾಖಲಿಸಿಕೊಂಡು, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ದೇಹವನ್ನು ವಾರಸುದಾರರಿಗೆ ಒಪ್ಪಿಸಿದರು.

ತಾಯಿ, ಇಬ್ಬರು ಸಹೋದರಿಯರು, ಸಂಬಂಧಿಕರೊಂದಿಗೆ ಬಂದು ಪ್ರಭು ಅವರ ಮೃತದೇಹವನ್ನು ತಮ್ಮ ಗ್ರಾಮಕ್ಕೆ ಕೊಂಡೊಯ್ದರು. ಅವಿವಾಹಿತರಾದ ಅವರು, ರೈಲ್ವೇ ಇಲಾಖೆಯಲ್ಲಿ ಖಾಯಂ ಸೀನಿಯರ್ ಸೆಕ್ಷನ್ ಇಂಜಿನಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಮೆಕ್ಯಾನಿಕಲ್ ವಿಭಾಗದಲ್ಲಿ ಸಹೋದ್ಯೋಗಿಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದ ಪ್ರಭು, ಚೆನ್ನಾಗಿಯೇ ಕೆಲಸ ಮಾಡುತ್ತಿದ್ದರು ಎಂದು ರೈಲ್ವೇ ಅಧಿಕಾರಿಗಳು ಹಾಗೂ ಸಿಬ್ಬಂದಿ ತಿಳಿಸಿದ್ದಾರೆ. ಆದರೆ, ಆತ್ಮಹತ್ಯೆಗೆ ಕಾರಣ ಏನು ಎಂಬುದು ಮನೆಯವರಿಗಾಗಲೀ, ಸಹೋದ್ಯೋಗಿಗಳಿಗಾಗಲೀ ತಿಳಿದಿಲ್ಲ ಎಂದು ಪ್ರಕರಣ ದಾಖಲಿಸಿಕೊಂಡಿರುವ ರೈಲ್ವೇ ಪೊಲೀಸರು ತಿಳಿಸಿದ್ದಾರೆ.

ಮೇಲುಕೋಟೆಯಲ್ಲಿ ಹೆಜ್ಜೇನು ದಾಳಿ; 30ಕ್ಕೂ ಅಧಿಕ ಭಕ್ತರಿಗೆ ಗಾಯ

ಎಂಟು ಮಂದಿ ಸ್ಥಿತಿ ಗಂಭೀರ



ಮೇಲುಕೋಟೆ, ನ.22–ಮೇಲುಕೋಟೆಯ ಅಷ್ಟತೀರ್ಥ ಪೂಜೆ ವೇಳೆ ಹೆಜ್ಜೇನು ದಾಳಿ ಮಾಡಿದ ಪರಿಣಾಮ 30ಕ್ಕೂ ಹೆಚ್ಚು ಮಂದಿ ಭಕ್ತರು ಗಾಯಗೊಂಡಿದ್ದು, ಅವರಲ್ಲಿ ತೀವ್ರವಾಗಿ ಗಾಯಗೊಂಡ 8 ಮಂದಿ ಪಾಂಡವಪುರ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆಂಧ್ರಪ್ರದೇಶದ ಜಯಶ್ರೀ, ರವಿಶಂಕರ್, ವಿಜಯಲಕ್ಷ್ಮಿ, ನಾರಾಯಣಂ, ತಮಿಳುನಾಡಿನ ಬಾಲಾಜಿರಾವ್, ಮೋಹನ್ ಕುಮಾರ್, ಬೆಂಗಳೂರಿನ ರಾಜವರ್ಧನ್, ಶ್ರೀರಾಂ ತೀವ್ರವಾಗಿ ಗಾಯಗೊಂಡವರಾಗಿದ್ದಾರೆ.

ವಿವರ: ಅಷ್ಟತೀರ್ಥ ಪೂಜೆ ವೇಳೆ ಭಕ್ತಾದಿಗಳು ಮೇಲುಕೋಟೆ ದೇವಾಲಯದಿಂದ ಕಡಿದಾದ ಅರಣ್ಯಕ್ಕೆ ಕಾಲ್ನಡಿಗೆ ಮೂಲಕ ಕ್ರಮಿಸಿ 8 ಕೊಳಗಳಲ್ಲಿ ಸ್ನಾನ ಮಾಡಿ ಪೂಜೆ ಸಲ್ಲಿಸುವುದು ವಾಡಿಕೆ. ಇಂದು ಅದೇ ರೀತಿ ಭಕ್ತರು ಅಷ್ಟತೀರ್ಥ ಪೂಜೆಗಾಗಿ ತೆರಳಿದ ವೇಳೆ ಯಾದವ ತೀರ್ಥದ ಸಮೀಪವಿರುವ ಜೇನುಗಲ್ಲಿ ಮಂಟಿ ಎಂಬ ಸ್ಥಳದಲ್ಲಿ ಬಂಡೆಗಳು ಮತ್ತು ಮರಗಳಲ್ಲಿ ಯಥೇಚ್ಛವಾಗಿ ಜೇನು ಕಟ್ಟಿರುತ್ತದೆ. ಇದನ್ನು ಅರಿಯದ ಯಾರೋ ಭಕ್ತರು ಕರ್ಪೂರ ಹಚ್ಚಿದ ಪರಿಣಾಮ ಅದರ ಶಾಖಕ್ಕೆ ಹೆಜ್ಜೇನುಗಳು ಚದುರಿ ಭಕ್ತರ ಮೇಲೆ ದಾಳಿ ನಡೆಸಿದೆ.

ಹೆಜ್ಜೇನು ದಾಳಿಯಾಗುತ್ತಿದ್ದಂತೆಯೇ ನೂರಾರು ಭಕ್ತರು ಸ್ಥಳದಿಂದ ಓಡಲಾರಂಭಿಸಿದರು. ಈ ಪ್ರದೇಶದಲ್ಲಿ ರಸ್ತೆ ಇಲ್ಲದ ಕಾರಣ ಕೆಲವರು ಗಾಬರಿಯಿಂದ ಓಡುವಾಗ ಬಿದ್ದದ್ದೂ ಉಂಟು. ಸಾಕಷ್ಟು ದೂರ ಓಡಲಾಗದೇ ಸಿಲುಕಿಕೊಂಡ ಸುಮಾರು 30 ಮಂದಿ ಹೆಜ್ಜೇನಿನ ದಾಳಿಗೆ ಒಳಗಾಗಿದ್ದಾರೆ. ಈ ಘಟನೆ ನಡೆಯುತ್ತಿದ್ದಾಗ ಪಾಲಾಶರ ತೀರ್ಥದ ಬಳಿ ಉತ್ಸವ ಮೂರ್ತಿ ಜೊತೆ ಇದ್ದ ಪಾರುಪತ್ತೆದಾರರಾದ ಶ್ರೀನಿವಾಸ ನರಸಿಂಹನ್ ಗುರೂಜಿ ಮತ್ತು ಎಂ.ಎನ್.ಪಾರ್ಥಸಾರಥಿ ಅವರು ತಕ್ಷಣವೇ ಮೇಲುಕೋಟೆ ಸಮುದಾಯ ಆರೋಗ್ಯ ಕೇಂದ್ರದ ಸಿಬ್ಬಂದಿಯನ್ನು ಸಂಪರ್ಕಿಸಿ ಚಿಕಿತ್ಸೆಗೆ ಸಿದ್ಧತೆ ಮಾಡಿಕೊಳ್ಳುವಂತೆ ಸೂಚಿಸಿದ್ದಾರೆ. ಗಾಯಗೊಂಡವರು ಸಮುದಾಯ ಆರೋಗ್ಯ ಕೇಂದ್ರಕ್ಕೆ ಆಗಮಿಸಿದಾಗ ವೈದ್ಯರಿಲ್ಲದ ● 6ನೇ ಪುಟಕ್ಕೆ





ಬೆಸ್ಕಾಂ ನಿರ್ಲಕ್ಷ್ಯದಿಂದ ಬೆಂಗಳೂರಲ್ಲಿ ತಾಯಿ ಮಗು ವಿದ್ಯುತ್ ಸ್ಪರ್ಶದಿಂದ ದುರಂತ ಸಾವಿಗೀಡಾದ ಹಿನ್ನೆಲೆಯಲ್ಲಿ ಮೈಸೂರಲ್ಲೂ ಅಗತ್ಯ ಮುನ್ನೆಚ್ಚರಿಕೆ ಸಂಬಂಧ 'ಮೈಸೂರು ಮಿತ್ರ' ಶಿಥಿಲಗೊಂಡಿರುವ ವಿದ್ಯುತ್ ಕಂಬಗಳು, ಜೋತು ಬಿದ್ದಿರುವ ತಂತಿಗಳು, ಮುಚ್ಚಳವೇ ಇಲ್ಲದ ಬಾಕ್ಸ್‌ಗಳು, ಸುರಕ್ಷತಾ ಕ್ರಮವಿಲ್ಲದ ಟ್ರಾನ್ಸ್ ಫಾರ್ಮರ್‌ಗಳ ಬಗ್ಗೆ ಬುಧವಾರ ಬೆಳಗ್ಗಿನ ಸಂಚಿಕೆಯಲ್ಲಿ ವರದಿ ಪ್ರಕಟಿಸಿತ್ತು. ಎಚ್ಚೆತ್ತ ಚೆಸ್ಕಾಂ ಅಧಿಕಾರಿಗಳು ಅವ್ಯವಸ್ಥೆಗಳನ್ನು ಸರಿಪಡಿಸುವ ಕಾರ್ಯವನ್ನು ಕೈಗೆತ್ತಿಕೊಂಡಿದ್ದಾರೆ.

ಕೆಆರ್ ಆಸ್ಪತ್ರೆ ಸುತ್ತ ಆಂಬುಲೆನ್ಸ್, ಸರಕು ಸಾಗಣೆ ವಾಹನ ನಿಲುಗಡೆ

ಧನ್ವಂತರಿ ರಸ್ತೆಯ ಜನತಾ ಬಜಾರ್‌ನಿಂದ ಸಯ್ಯಾಜಿರಾವ್ ರಸ್ತೆ ಜಂಕ್ಷನ್‌ವರೆಗೆ; ಕೆಆರ್ ಆಸ್ಪತ್ರೆ ಪೂರ್ವ ಗೇಟ್‌ನಿಂದ ಆಯುರ್ವೇದ ಕಾಲೇಜು ಜಂಕ್ಷನ್‌ವರೆಗೆ ಗೊತ್ತುಗುರಿ ಇಲ್ಲದಂತೆ ವಾಹನ ನಿಲುಗಡೆ





ಮೈಸೂರು, ನ. 22(ಆರ್‌ಕೆ)– ಕೆಆರ್ ಆಸ್ಪತ್ರೆ ಸುತ್ತಲಿನ ಧನ್ವಂತರಿ ರಸ್ತೆ ಹಾಗೂ ಸಯ್ಯಾಜಿರಾವ್ ರಸ್ತೆಗಳಲ್ಲಿ ಸರಕು ಸಾಗಣೆ ವಾಹನಗಳು ಹಾಗೂ ಆಂಬುಲೆನ್ಸ್‌ಗಳನ್ನು ದಿನವಿಡೀ ಅಡ್ಡಾದಿಡ್ಡಿ ನಿಲ್ಲಿಸುತ್ತಿದ್ದು, ಸಾರ್ವಜನಿಕರು ಅವಶ್ಯಕತೆಗನುಗುಣವಾಗಿ ತಮ್ಮ ವಾಹನಗಳನ್ನು ನಿಲ್ಲಿಸಲು ಜಾಗ ಸಿಗದಂತಾಗಿದೆ.

ಧನ್ವಂತರಿ ರಸ್ತೆಯ ಜನತಾ ಬಜಾರ್ ಔಷಧಿ ಅಂಗಡಿಯಿಂದ ಸಯ್ಯಾಜಿರಾವ್ ರಸ್ತೆ ಜಂಕ್ಷನ್‌ವರೆಗೆ ಕಾರುಗಳನ್ನು ನಿಲುಗಡೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಆದರೆ, ಕೆಆರ್ ಆಸ್ಪತ್ರೆ ದಕ್ಷಿಣ ಭಾಗದ ಕಾಂಪೌಂಡ್ ಉದ್ದಕ್ಕೂ ರಸ್ತೆಬದಿ ಪ್ರಯಾಣಿಕರ ಆಟೋ ಹಾಗೂ ಸರಕು ಸಾಗಣೆ ವಾಹನಗಳನ್ನು ಅಡ್ಡಲಾಗಿ ನಿಲ್ಲಿಸುತ್ತಿರುವುದರಿಂದ ನಾನಾ ಕೆಲಸ ಕಾರ್ಯಕ್ಕೆ ಬರುವ ಸಾರ್ವಜನಿಕರ ವಾಹನಗಳನ್ನು ನಿಲ್ಲಿಸಲು ಸ್ಥಳ ಸಿಗದೇ ಪರದಾಡುವಂತಾಗಿದೆ.

ಪರಿಣಾಮ ಪಾದಚಾರಿಗಳಿಗೂ ಓಡಾಡಲು ತೀವ್ರ ತೊಂದರೆಯಾಗುತ್ತಿದೆ. ಧನ್ವಂತರಿ ರಸ್ತೆಯ ಅಂಗಡಿ ಮಳಿಗೆದಾರರು, ವಕೀಲರು, ದೇವರಾಜ ಮಾರುಕಟ್ಟೆಗೆ ಬರುವ ಗ್ರಾಹಕರು ತಮ್ಮ ವಾಹನಗಳ ನಿಲುಗಡೆಗೆ ಪರದಾಡುತ್ತಿದ್ದು, ದೂರದಲ್ಲಿ ಕಾರುಗಳನ್ನು ನಿಲ್ಲಿಸಿ ಸರಕು–ಸರಂಜಾಮುಗಳನ್ನು ತೆಗೆದುಕೊಂಡು ಹೋಗುವ ಪರಿಸ್ಥಿತಿ ಉಂಟಾಗಿದೆ.

ಕೆಲ ಆಟೋಗಳು, ಗೂಡ್ಸ್ ವಾಹನಗಳು ಅಡ್ಡಲಾಗಿ ನಿಲ್ಲಿಸಿ ಗಂಟೆಗಟ್ಟಲೆ ತೆಗೆಯುತ್ತಿಲ್ಲ ಎಂದು ಧನ್ವಂತರಿ ರಸ್ತೆಯ ಅಂಗಡಿ ಮಳಿಗೆದಾರರು ಹಾಗೂ ಬಾಡಿಗೆದಾರರು ಆರೋಪಿಸುತ್ತಿದ್ದಾರೆ. ಅದೇ ರೀತಿ ಸಯ್ಯಾಜಿರಾವ್ ರಸ್ತೆಯ ಕೆಆರ್ ಆಸ್ಪತ್ರೆ ಪೂರ್ವ ಭಾಗದ ಕಾಂಪೌಂಡ್ ಪಕ್ಕದಲ್ಲಿ ಸರ್ಕಾರಿ ಆಯುರ್ವೇದ ಕಾಲೇಜು ಸರ್ಕಲ್‌ವರೆಗೆ ನಿತ್ಯ 10ರಿಂದ 15 ಆಂಬುಲೆನ್ಸ್‌ಗಳು ಬೆಳಗ್ಗೆಯಿಂದ ರಾತ್ರಿವರೆಗೂ ನಿಂತಿರುತ್ತವೆ.

ರೋಗಿಗಳನ್ನು ಕರೆದೊಯ್ಯಲು ಅಥವಾ ಮೃತದೇಹಗಳನ್ನು ಸಾಗಿಸಲು ಸಾರ್ವಜನಿಕರಿಂದ ಕರೆ ಬರುವವರೆಗೂ ಆಂಬುಲೆನ್ಸ್‌ಗಳನ್ನು ಚಾಲಕರು ಅಲ್ಲಿ ನಿಲ್ಲಿಸಿಕೊಂಡಿರುತ್ತಾರೆ. ಅವರು ವಾಹನ ತೆಗೆಯುವವರೆಗೂ ನಾನಾ ಕೆಲಸ ಕಾರ್ಯ, ಖರೀದಿಗೆ ಬರುವ ಸಾರ್ವಜನಿಕರಿಗೆ ಸಯ್ಯಾಜಿರಾವ್ ರಸ್ತೆಯಲ್ಲಿ ಜಾಗ ಸಿಗುತ್ತಿಲ್ಲ.

ಈ ಹಿಂದೆ ಕೆಆರ್, ಚೆಲುವಾಂಬ ಆಸ್ಪತ್ರೆಗಳ ಆವರಣ ಮತ್ತು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಆವರಣದ ಶವಾಗಾರದ ಬಳಿ ಖಾಸಗಿ ಆಂಬುಲೆನ್ಸ್ ವಾಹನಗಳನ್ನು ನಿಲ್ಲಿಸಿಕೊಂಡು ಚಾಲಕರು ಕಾಯುತ್ತಿದ್ದರು. ಅಲ್ಲಿ ಸಂಚಾರಕ್ಕೆ ತೀವ್ರ ತೊಂದರೆ ಉಂಟಾದ ಪರಿಣಾಮ ಅಧಿಕಾರಿಗಳು ಖಾಸಗಿ ಆಂಬುಲೆನ್ಸ್‌ಗಳನ್ನು ನಿಲ್ಲಿಸದಂತೆ ತಡೆದ ಬಳಿಕ ರಸ್ತೆಯ ಹಳೇ ಕಾವಾ ಕಟ್ಟಡದ ಎದುರು, ಕೆಆರ್ ಆಸ್ಪತ್ರೆ ಕಡೆಗೆ ಉದ್ದಕ್ಕೂ ನಿಲ್ಲಿಸುತ್ತಿದ್ದಾರೆ. ಆಸ್ಪತ್ರೆಗೆ ಬರುವವರು, ಅಂಗಡಿ–ಮುಂಗಟ್ಟುಗಳಲ್ಲಿ ಸರಕು ಖರೀದಿಸುವವರು ವಾಹನಗಳನ್ನು ನಿಲುಗಡೆ ಮಾಡಲು ಸ್ಥಳ ಸಿಗದ ಕಾರಣ ಸುತ್ತಲಿನ ರಸ್ತೆಗಳಲ್ಲಿ ಜಾಗ ಹುಡುಕಬೇಕಾಗಿದೆ. ಆಂಬುಲೆನ್ಸ್‌ಗಳನ್ನು ಸಾಲಾಗಿ ನಿಲ್ಲಿಸಿಕೊಂಡು ದಿನಗಟ್ಟಲೇ ಕಾಯುತ್ತಾ ನಿಂತರೆ, ಸಾರ್ವಜನಿಕರಿಗೆ ಕಾರುಗಳನ್ನು ನಿಲ್ಲಿಸಲು ತೀವ್ರ ತೊಂದರೆ ಉಂಟಾಗುತ್ತಿದೆ.

ಖಾಸಗಿ ಆಂಬುಲೆನ್ಸ್ ನಿಲುಗಡೆಗೆ ಜಿಲ್ಲಾಡಳಿತ ನಿಗದಿತ ಸ್ಥಳ ಒದಗಿಸಿದಲ್ಲಿ ಸಾರ್ವಜನಿಕರಿಗೂ ಅನುಕೂಲವಾಗಲಿದ್ದು, ಚಾಲಕರೂ ಸಹ ರೋಗಿಗಳ ಕಡೆಯವರಿಂದ ಕೋರಿಕೆ ಬರುವವರೆಗೆ ಅಲ್ಲಿ ಕಾಯಲು ಅವಕಾಶವಾಗುತ್ತದೆ ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ.

ಪರಿಶೀಲಿಸಿ ಅಗತ್ಯ ಕ್ರಮ: ಸಂಚಾರ ಎಸಿಪಿ

ಮೈಸೂರು,ನ.22(ಆರ್‌ಕೆ)–ಧನ್ವಂತರಿ ರಸ್ತೆ ಮತ್ತು ಸಯ್ಯಾಜಿರಾವ್ ರಸ್ತೆಗಳಲ್ಲಿ ಸರಕು ಸಾಗಣೆ ಮತ್ತು ಆಂಬುಲೆನ್ಸ್ ವಾಹನಗಳನ್ನು ಅಡ್ಡಾದಿಡ್ಡಿಯಾಗಿ ನಿಲುಗಡೆ ಮಾಡುತ್ತಿರುವ ಬಗ್ಗೆ ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುತ್ತೇವೆ ಎಂದು ಮೈಸೂರು ನಗರ ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ತಿಳಿಸಿದ್ದಾರೆ.

ಕೆಆರ್ ಆಸ್ಪತ್ರೆ ಎದುರು ಸಯ್ಯಾಜಿರಾವ್ ರಸ್ತೆಯ ಸರ್ಕಾರಿ ಆಯುರ್ವೇದ ಕಾಲೇಜು ಸರ್ಕಲ್‌ವರೆಗೆ ಖಾಸಗಿ ಆಂಬುಲೆನ್ಸ್ ನಿಲ್ಲಿಸುತ್ತಿರುವುದರಿಂದ ಬೇರೆ ವಾಹನ ನಿಲುಗಡೆಗೆ ಸ್ಥಳ ಸಿಗುತ್ತಿಲ್ಲವೆಂಬ ದೂರುಗಳು ಕೇಳಿ ಬರುತ್ತಿದ್ದವು. ಇದೀಗ ಧನ್ವಂತರಿ ರಸ್ತೆಯಲ್ಲಿ ಗೂಡ್ಸ್ ವಾಹನಗಳು ಅಡ್ಡಲಾಗಿ ನಿಲ್ಲುತ್ತಿವೆ ಎಂಬ ಮಾಹಿತಿ ಲಭ್ಯವಾಗಿದೆ ಎಂದರು. ನಾವು ಸ್ಥಳಕ್ಕೆ ತೆರಳಿ ಪರಿಶೀಲಿಸಿ ಕೆಲ ದಿನಗಳವರೆಗೆ ಸಂಚಾರ ಪೊಲೀಸರನ್ನು ನಿಯೋಜಿಸಿ ಸಮಸ್ಯೆ ಇತ್ಯರ್ಥಪಡಿಸುತ್ತೇವೆ. ಅವಕಾಶವಿಲ್ಲದ ವಾಹನಗಳಿಗೆ ಅಲ್ಲಿ ನಿಲ್ಲಿಸದಂತೆ ಎಚ್ಚರ ವಹಿಸುತ್ತೇವೆ ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಏಳು ಕೋಟಿ ಕನ್ನಡಿಗರ ಸ್ವತ್ತು



ಮೈಸೂರು, ನ. 22– ಕನ್ನಡ ಸಾಹಿತ್ಯ ಪರಿಷತ್ತು ಕೇವಲ ಸಾಹಿತಿಗಳಿಗಷ್ಟೆ ಸೀಮಿತವಲ್ಲ. ಇದು ಏಳು ಕೋಟಿ ಕನ್ನಡಿಗರ ಸ್ವತ್ತು. ಹಾಗಾಗಿ ಪ್ರತಿಯೊಬ್ಬ ಕನ್ನಡಿಗರು ಹೆಮ್ಮೆಯಿಂದ ಕನ್ನಡ ಭಾಷೆಯನ್ನು ಪ್ರತಿ ದಿನ ಬಳಸಬೇಕು. ಆ ಮೂಲಕ ಮಾತ್ರ ಕನ್ನಡ ಉಳಿಸಲು ಸಾಧ್ಯ ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಅಭಿಪ್ರಾಯಪಟ್ಟರು.

ಜೆಎಸ್‌ಎಸ್ ರೇಡಿಯೋ 91.2 ಎಫ್‌ಎಂ ಕೇಂದ್ರದ ಮೂಲಕ ಸಂದರ್ಶನದಲ್ಲಿ ಮಾತನಾಡಿದ ಅವರು, ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾಗಿರುವ ಪ್ರಮುಖ ಗುರಿ ಉದ್ದೇಶಗಳು ಹಾಗೂ ಅದರ ದೂರದೃಷ್ಟಿತ್ವದ ಬಗ್ಗೆ ವಿವರಿಸಿದರು.

ಸಾಹಿತಿಗಳು ಬರೆದ ಪುಸ್ತಕಗಳನ್ನು ಗ್ರಂಥಾಲಯಗಳಿಗೆ ಕನಿಷ್ಠ 300ರಿಂದ 500 ಪುಸ್ತಕಗಳನ್ನು ಪಡೆದು ಅದಕ್ಕೆ ಹಣ ಸಂದಾಯಿಸುವಂತೆ ಇಲಾಖೆ ಯೋಜಿಸಿದೆ. ಆದರೆ ಇದು ಸರಿಯಾದ ರೀತಿಯಲ್ಲಿ ಆಗುತ್ತಿಲ್ಲಾ ಹಾಗೂ ಪಡೆದ ಪುಸ್ತಕಗಳಿಗೆ ಸಕಾಲದಲ್ಲಿ ಹಣವನ್ನು ನೀಡುತ್ತಿಲ್ಲ ಎಂದು ಕೆಲವರು ಕರೆ ಮಾಡಿ ಅಭಿಪ್ರಾಯಪಟ್ಟರು.

ಕನ್ನಡ ಸಾಹಿತ್ಯ ಅಭಿವೃದ್ಧಿಯಾಗಬೇಕೆಂದರೆ ಕನ್ನಡ ಶಾಲೆಗಳ ಅಭಿವೃದ್ಧಿಯಾಗಬೇಕು. ಈ ಕುರಿತು ಸರ್ಕಾರ ಮತ್ತು ಸಾಹಿತ್ಯ ಪರಿಷತ್ತು ಸಮನ್ವಯವಾಗಿ ಕಾರ್ಯನಿರ್ವಹಿಸಬೇಕು. ಉನ್ನತ ಶಿಕ್ಷಣಕ್ಕಾಗಿ ಕನ್ನಡದಲ್ಲಿ ಆಕರ ಗ್ರಂಥಗಳ ಕೊರತೆ ನೀಗಿಸುವಲ್ಲಿ ಇಲಾಖೆಯ ಪ್ರಯತ್ನ ತ್ವರಿತವಾಗಬೇಕು ಮತ್ತು ಕನ್ನಡವನ್ನು ಮಾಧ್ಯಮ ಭಾಷೆಯನ್ನಾಗಿ ಅನುಷ್ಠಾನಗೊಳಿಸಬೇಕು ಎಂದು ಹಲವರು ಸಲಹೆ ನೀಡಿದರು.

ಜ್ಞಾನ, ವಿಜ್ಞಾನ, ತಂತ್ರಜ್ಞಾನ ಕ್ಷೇತ್ರಗಳಲ್ಲಿ ಕನ್ನಡ ಬಳಕೆ ಮತ್ತು ಅಳವಡಿಕೆಗೆ ಹೆಚ್ಚು ಒತ್ತು ನೀಡಬೇಕು. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಬಂದು 15ವರ್ಷ ಕಳೆದರು ಇದುವರೆಗೂ ಇದಕ್ಕೆ ಅಂತ ಯಾವುದೇ ಕೇಂದ್ರಸ್ಥಾನ ಇಲ್ಲ. ಹಾಗಾಗಿ ಈ ಕುರಿತು ಸರ್ಕಾರ ಗಮನಹರಿಸಬೇಕು ಎಂದು ಇನ್ನು ಕೆಲವರು ಕರೆ ಮಾಡಿ ಸಲಹೆ ಇತ್ತರು. ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ. ಸಾಂಬಶಿವಯ್ಯ, ಜೆಎಸ್‌ಎಸ್ ರೇಡಿಯೋ ಕೇಂದ್ರದ ಇನ್‌ಚಾರ್ಜ್ ಆದ ಡಾ.ವಿಜಯ ಮಂಜುನಾಥ ಗುರು, ಜೆಎಸ್‌ಎಸ್ ರೇಡಿಯೋ ಕೇಂದ್ರದ ಕಾರ್ಯಕ್ರಮ ಸಹಾಯಕ ರಮೇಶ, ಕನ್ಯಾಕುಮಾರಿ ಇದ್ದರು. ಕಾರ್ಯಕ್ರಮವನ್ನು ಜೆಎಸ್‌ಎಸ್ ರೇಡಿಯೋ ಕೇಂದ್ರದ ಸಂಯೋಜಕ ಶಿವಕುಮಾರ ನಡೆಸಿಕೊಟ್ಟರು.



ಮೈಸೂರಿನ ಪಡುವಾರಹಳ್ಳಿಯ ಗಣಪತಿ ದೇವಸ್ಥಾನದ ಬಳಿ ಶ್ರೀ ವಿದ್ಯಾಗಣಪತಿ ಮತ್ತು ಶ್ರೀ ಮಹಾಲಕ್ಷ್ಮಿ ದೇವಸ್ಥಾನ ಹಾಗೂ ಕನ್ನಡ ಕಲಾಭಿಮಾನಿಗಳ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿತ್ತು. ಶಾಸಕ ಕೆ.ಹರೀಶ್‌ಗೌಡ ಶಿಬಿರಕ್ಕೆ ಚಾಲನೆ ನೀಡಿದರು. ಸುಯೋಗ್ ಆಸ್ಪತ್ರೆ, ಗೋಪಾಲಗೌಡ ಆಸ್ಪತ್ರೆ ಹಾಗೂ ಎಎಸ್‌ಜಿ ಕಣ್ಣಿನ ಆಸ್ಪತ್ರೆ ವೈದ್ಯರಿಂದ ಆರೋಗ್ಯ ತಪಾಸಣೆ ನಡೆಯಿತು. ಈ ಸಂದರ್ಭದಲ್ಲಿ ನಗರಪಾಲಿಕೆ ಮಾಜಿ ಸದಸ್ಯೆ ಭಾಗ್ಯ ಮಾದೇಶ್, ಗೋಪಾಲಗೌಡ ಆಸ್ಪತ್ರೆಯ ಡಾ.ಸುಶ್ರುತ, ಸಂಘದ ಅಧ್ಯಕ್ಷ ರಾಮಚಂದ್ರ, ಮುಖಂಡರಾದ ಪಡುವಾರಹಳ್ಳಿ ಪಾಪಣ್ಣ, ಕೃಷ್ಣ, ಹೇಮಂತ್, ಕೃಪಾನಂದ, ಮಹದೇವಸ್ವಾಮಿ, ಶ್ರೀನಿವಾಸ್, ಸೋಮಶೇಖರ್, ಯೋಗೇಶ್, ನರೇಂದ್ರಕುಮಾರ್, ಮಾದೇಶ್, ಆಕಾಶ್ ಇನ್ನಿತರರಿದ್ದರು. ಇದೇ ವೇಳೆ ಶಾಸಕ ಕೆ.ಹರೀಶ್‌ಗೌಡ ಹಾಗೂ ಪಾಲಿಕೆ ಮಾಜಿ ಸದಸ್ಯೆ ಶ್ರೀಮತಿ ಭಾಗ್ಯ ಮಾದೇಶ್ ಹಾಗೂ ಇತರ ಗಣ್ಯರನ್ನು ಸಂಘದ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು.

ನಾಳೆಯಿಂದ ಚಿತ್ರಕಲಾ ಪ್ರದರ್ಶನ



ಮೈಸೂರು,ನ.22(ಜಿಎ)–ವಾಸ್ತವವಾದ ಪರಿಕಲ್ಪನೆಯಲ್ಲಿ ರಚಿಸಿದ ಮೂರ್ತ ಅಮೂರ್ತವಾಗುವ ವಿಷಯ ಆಧರಿಸಿದ ಎನ್ಚಾಂಟೆಡ್ ರಾಕ್ಸ್ ಚಿತ್ರಕಲಾ ಪ್ರದರ್ಶನವನ್ನು ನ.24ರಿಂದ ಡಿ.4ರವರೆಗೆ ವಿಜಯನಗರ 2ನೇ ಹಂತದ ಅಂಬರೀಷ್ ರಸ್ತೆಯಲ್ಲಿರುವ ನೆರಳು ಬೆಳಕು ಗ್ಯಾಲರಿ–ಕಾಫಿ ಸಿಟಿಯಲ್ಲಿ ನಡೆಯಲಿದೆ ಎಂದು ಕಲಾವಿದ ವಿನೂತನ್ ಬೋರಲಿಂಗಯ್ಯ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ.24ರಂದು ಸಂಜೆ 6ಕ್ಕೆ ಹಿರಿಯ ಬರಹಗಾರ ಪ್ರೊ.ಓ.ಎಲ್.ನಾಗಭೂಷಣಸ್ವಾಮಿ ಉದ್ಘಾಟಿಸುವರು. ಚಿತ್ರಕಲೆಯಲ್ಲಿ ಐಚ್ಛಿಕ ಅಧ್ಯಯನದೊಂದಿಗೆ, ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ 2007ರಲ್ಲಿ ಪದವಿ ಪಡೆದಿದ್ದೇನೆ. ಅಮೂರ್ತತೆಯನ್ನೇ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಕಂಡುಕೊಂಡು ಬೆಂಗಳೂರಿನಲ್ಲಿ ನೆಲೆಸಿರುವ ಕಲಾವಿದರಾಗಿದ್ದು, ಖ್ಯಾತ ಬರಹಗಾರ ಮತ್ತು ಜಾನಪದ ವಿದ್ವಾಂಸರಾದ ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರ ಪುತ್ರ.

ಪ್ರಾಚೀನ ಕಾಲದಿಂದ ಹಂಪಿಯಲ್ಲಿ ಸೃಷ್ಟಿಗೊಂಡಿರುವ ವೈವಿಧ್ಯಮಯ ಬಂಡೆಗಳು ತಮ್ಮ ಕಲಾ ರಚನೆಗೆ ಸ್ಫೂರ್ತಿ. ಆ ಬಂಡೆಗಳ ಪದರುಗಳಲ್ಲಿನ ಸೂಕ್ಷ್ಮ ವಿನ್ಯಾಸಗಳು ಸ್ತ್ರೀಯ ನಗ್ನ ಸೌಂದರ್ಯದೊಡನೆ ವಿಲೀನಗೊಂಡು ಮರು ರೂಪ ಪಡೆಯುವುದು ಇಲ್ಲಿನ ವಿಶೇಷವಾಗಿದೆ ಎಂದರು. ಗೋಷ್ಠಿಯಲ್ಲಿ ಛಾಯಾಗ್ರಹಕ ಗಿರೀಶ್ ಇದ್ದರು.

ಡಿ.8ರಿಂದ ಯುವ ರೈತರ ವಿವಾಹಕ್ಕಾಗಿ ಆದಿಚುಂಚನಗಿರಿ ಪಾದಯಾತ್ರೆ



ಮೈಸೂರು, ನ.22(ಜಿಎ)–ಅವಿವಾಹಿತ ಯುವ ರೈತರ ವಿವಾಹ ಬೇಡಿಕೆ ಸೇರಿದಂತೆ ವಿವಿಧ ವಿಷಯಗಳ ಹರಕೆ ಹೊತ್ತು ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ವತಿಯಿಂದ ಬರುವ ಡಿ.8, 9 ಮತ್ತು 10ರಂದು ಆದಿಚುಂಚನಗಿರಿ ಕ್ಷೇತ್ರಕ್ಕೆ ಪಾದಯಾತ್ರೆ ಹಮ್ಮಿಕೊಂಡಿರುವುದಾಗಿ ಸಂಸ್ಥಾಪಕ ಅಧ್ಯಕ್ಷೆ ಎಚ್.ಎಲ್.ಯಮುನಾ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಾದಯಾತ್ರೆ ಡಿ.8ರಂದು ಬೆಳಗ್ಗೆ 7ಕ್ಕೆ ಕೆಂಪೇಗೌಡರ ವೃತ್ತ(ಮಣಿಪಾಲ್ ಆಸ್ಪತ್ರೆ ಜಂಕ್ಷನ್)ದಿಂದ ಪ್ರಾರಂಭವಾಗಿ ಡಿ.10ರಂದು ಬೆಳಗ್ಗೆ 10ಕ್ಕೆ ಆದಿಚುಂಚನಗಿರಿ ದೇವಾಲಯದಲ್ಲಿ ಹರಕೆಯ ಪೂಜೆಯೊಂದಿಗೆ ಮುಕ್ತಾಯಗೊಳ್ಳಲಿದೆ. ಅಲ್ಲಿ, ಕಾಲಭೈರವೇಶ್ವರ, ಕಂಬದಮ್ಮ (ಸ್ಥಂಭಾಂಬಿಕೆ) ಗಂಗಾಧರೇಶ್ವರ ದೇವರುಗಳಲ್ಲಿ ಅವಿವಾಹಿತ ಯುವ ರೈತರ ವಿವಾಹ ಬೇಡಿಕೆ ಈಡೇರಿಕೆ, ನಾಡಿನಲ್ಲಿ ಮಳೆ ಬೆಳೆ ಚೆನ್ನಾಗಿ ಬಂದು ಜನರ ಜೀವನ ಸಮೃದ್ಧಿಗಾಗಿ, 12 ವರ್ಷಗಳ ಹಿಂದೆ ಧರ್ಮಸ್ಥಳ ಪಾಂಗಳ ಗ್ರಾಮದಲ್ಲಿ ನಡೆದಿರುವ ಒಕ್ಕಲಿಗ ಕುಟುಂಬದ ಅಪ್ರಾಪ್ತ ಬಾಲಕಿ ಸೌಜನ್ಯಳ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ಸೌಜನ್ಯ ಕುಟುಂಬಕ್ಕೆ ನ್ಯಾಯ ಕೋರಿ ಹರಕೆ ಹೊರಲಾಗುತ್ತಿದ್ದು, ಯಾವ ಸಮುದಾಯದವರಾದರೂ ಪಾದಯಾತ್ರೆಯಲ್ಲಿ ಪಾಲ್ಗೊಳ್ಳಬಹುದು. ಹೆಚ್ಚಿನ ಮಾಹಿತಿಗೆ ದೂ. 99026 98623 ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಸದಸ್ಯೆ ಸುಶೀಲ ನಂಜಪ್ಪ ಉಪಸ್ಥಿತರಿದ್ದರು.

ನ.25ರಂದು ಜಾನಪದ, ಭಾವಗೀತೆ ಸ್ಪರ್ಧೆಗಳು

ಮೈಸೂರು,ನ.22–ಮೈಸೂರಿನ ದಟ್ಟಗಳ್ಳಿಯಲ್ಲಿರುವ ವಿಶ್ವಪ್ರಜ್ಞ ವಿದ್ಯಾಸಂಸ್ಥೆಯಲ್ಲಿ ಶ್ರೀಮತಿ ಲಕ್ಷ್ಮೀದೇವಮ್ಮನವರ ಸ್ಮರಣಾರ್ಥವಾಗಿ ಪ್ರಾಥಮಿಕ, ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಜಾನಪದಗೀತೆ ಮತ್ತು ಭಾವಗೀತೆ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ನ.25ರಂದು ಬೆಳಗ್ಗೆ 9ಕ್ಕೆ ಸಂಸ್ಥೆ ಆವರಣದಲ್ಲಿ ಸ್ಪರ್ಧೆ ನಡೆಯಲಿದೆ. ವಿಜೇತರಿಗೆ ರೂ.1,000, ರೂ.750, ರೂ.500, ರೂ.250 ನಗದು ಬಹುಮಾನ ನೀಡಲಾಗುವುದು. ಪ್ರಥಮ, ದ್ವಿತೀಯ ಸ್ಥಾನ ಗಳಿಸುವ ಶಾಲೆಗೆ ಪರ್ಯಾಯ ಪಾರಿತೋಷಕ ಹಾಗೂ ಸ್ಮರಣಿಕೆ ನೀಡಲಾಗುವುದು. ವಿವರಗಳಿಗಾಗಿ ಅಶ್ವಿನಿ ಕೆ.ಎಸ್–6362666705 ಸಂಪರ್ಕಿಸಬಹುದು.

ನ.27ರಿಂದ ನೃತ್ಯ ಕಾರ್ಯಾಗಾರ

ಮೈಸೂರು,ನ.22–ಮೈಸೂರಿನ ಅಭಿವ್ಯಕ್ತಿ ಕಲಾ ಮತ್ತು ಸಾಂಸ್ಕೃತಿಕ ಕೇಂದ್ರವು ನ.27ರಿಂದ 29ರವರೆಗೆ ರಾಮಕೃಷ್ಣನಗರದ ಜಯಲಕ್ಷ್ಮಿ ದೇವಿ ಪಿಯು ಕಾಲೇಜಿನಲ್ಲಿ ನೃತ್ಯ ಕಾರ್ಯಾಗಾರ ಏರ್ಪಡಿಸಿದೆ. ವೈಭವ್ ಅರೇಕರ್ ಅವರು ಮರಾಠಿ ಭಾಷೆಯ ಅಭಂಗ್‌ಗಳನ್ನು ಕೇಂದ್ರವಾಗಿಟ್ಟುಕೊಂಡು ನೃತ್ಯ ಕಾರ್ಯಾಗಾರ ನಡೆಸಿಕೊಡಲಿದ್ದಾರೆ. ಆಸಕ್ತರು ಸುಹಾಸಿನಿ ಕೌಲಗಿ ಮೊ. 7406056096 ಸಂಪರ್ಕಿಸಬಹುದು.

ಕನ್ನಡ ವಿಕಾಸ ರತ್ನ ಪ್ರಶಸ್ತಿಗೆ ಆಯ್ಕೆ



ಮೈಸೂರು,ನ.22–ಕರ್ನಾಟಕ ರಾಜ್ಯ ಒಕ್ಕಲಿಗರ ವೇದಿಕೆ ರಾಜ್ಯ ಉಪಾಧ್ಯಕ್ಷ ಟಿ.ರವಿಗೌಡ ಅವರನ್ನು ರಾಜ್ಯ ಮಟ್ಟದ ಪ್ರತಿಷ್ಠಿತ ಕನ್ನಡ ವಿಕಾಸ ರತ್ನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ನ.30ರಂದು ಕಲಾಮಂದಿರದ ಕಿರುರಂಗಮಂದಿರದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಜಾತಿ ಗಣತಿ ವರದಿ ಬಿಡುಗಡೆಗೆ ಒತ್ತಾಯ

ಮೈಸೂರು, ನ. 22– ರಾಜ್ಯ ಸರ್ಕಾರ ನಡೆಸಿರುವ ಜಾತಿ ಗಣತಿ ವರದಿಯನ್ನು ಮುಂಬರುವ ಬೆಳಗಾವಿ ಅಧಿವೇಶನದಲ್ಲಿ ಅಂಗೀಕರಿಸಿ ಬಿಡುಗಡೆ ಮಾಡುವ ಮೂಲಕ ಅಹಿಂದ ವರ್ಗಗಳಿಗೆ ಆಗುತ್ತಿರುವ ಅನ್ಯಾಯ ಸರಿಪಡಿಸಬೇಕು ಎಂದು ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ ಆಗ್ರಹಿಸಿದ್ದಾರೆ.


ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯನವರೇ ಸುಮಾರು 180 ಕೋಟಿ ರೂ. ವೆಚ್ಚ ಮಾಡಿ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ಒಳಗೊಂಡ ಜಾತಿ ಸಮೀಕ್ಷೆ ನಡೆಸಿದ್ದರು. ಆದರೆ ಸಮೀಕ್ಷೆ ನಡೆಸಿ ಐದಾರೂ ವರ್ಷ ಕಳೆದರೂ ಸರ್ಕಾರ ಜಾತಿ ಗಣತಿ ವರದಿ ಬಿಡುಗಡೆ ಮಾಡುತ್ತಿಲ್ಲ. ಅಲ್ಲದೇ ಈ ವರದಿ ಬಿಡುಗಡೆಗೆ ಕೆಲವರು ವಿರೋಧ ವ್ಯಕ್ತಪಡಿಸುತ್ತಿರುವುದು ವಿಪರ್ಯಾಸದ ಸಂಗತಿ. ರಾಜ್ಯದಲ್ಲಿ ನಡೆಸಿರುವ ಜಾತಿ ಗಣತಿಯ ವರದಿ ಬಿಡುಗಡೆ ಮಾಡುವುದರಿಂದ ಜಾತಿಗಳ ಜನಸಂಖ್ಯೆ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗತಿಗಳ ಬಗ್ಗೆ ಜನರಿಗೆ ಮನವರಿಕೆಯಾಗುತ್ತದೆ ಎಂದು ತಿಳಿಸಿದ್ದಾರೆ.

ಮರೀಗೌಡ ನಿಧನ



ಮೈಸೂರು,ನ.22–ಕೆ.ಆರ್.ನಗರ ತಾಲೂಕು, ಕಗ್ಗೆರೆ ಗ್ರಾಮದ ನಿವಾಸಿ ಮರೀಗೌಡ(76) ಅವರು ಇಂದು ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ ಪದ್ಮ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು–ವರ್ಗ ಅಗಲಿದ್ದಾರೆ. ಇಂದು ಸಂಜೆ ಕಗ್ಗೆರೆ ಅವರ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.11.2023 ಗುರುವಾರ, ಮಳೆ ನಕ್ಷತ್ರ: ಅನುರಾಧ, 20.11.2023ರಿಂದ 02.12.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಉಭಾ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ–ಮೈಸೂರಿನ ಎನ್.ರವಿಶಂಕರ್, 6.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 6.45 ಕಲ್ಯಾಣ ಕರೆದಿದೆ ಕಲ್ಯಾಣ–ಪ್ರಾಯೋಜಿತ ಕಾರ್ಯಕ್ರಮ, 6.50 ರೈತರಿಗೆ ಸಲಹೆ, 8.30 ಆರೋಗ್ಯಾಮೃತ–ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖಾ ಪ್ರಾಯೋಜಿತ ಕಾರ್ಯಕ್ರಮ, 10.00 ಜಯ ವಿಜಯ–ಯುಗಳ ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 1.20 ಭಾವಗೀತೆ–ಪ್ರಚೇತ್ ಕುಲಕರ್ಣಿ, 4.00 ಜನಪದ ಸಂಗೀತ–ಮಳವಳ್ಳಿ ಮಹದೇವಸ್ವಾಮಿ ಮತು ಸಂಗಡಿಗರು, 6.50 ಕೃಷಿರಂಗ Fruits ID ತಂತ್ರಜ್ಞಾನದಲ್ಲಿ ನೋಂದಣಿ ಹಾಗೂ ಇ–KYS ಯೋಜನೆ ಕುರಿತು ಸಂವಾದ, 8.00 ಯುವವಾಣಿ–ಹಲೋ ಯುವವಾಣಿ–ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಕುರಿತ ರಸಪ್ರಶ್ನೆ ಕಾರ್ಯಕ್ರಮ, 10.00 ಪಶು ಸಂಪತ್ತು ಮಾಲಿಕೆಯಲ್ಲಿ ನಾಟಕ 'ಕೊಂಡೇನಾಳಿ ನಾಟಿ ಕೋಳಿ ನಂಜಮ್ಮ', ರಚನೆ–ಡಾ.ಜಿ.ವಿ.ಮುರಳಿಕೃಷ್ಣ, ನಿರ್ದೇಶನ ಹಾಗೂ ನಿರ್ಮಾಣ–ಪ್ರಭುಸ್ವಾಮಿ ಮಳಿಮಠ, 10.30 ಸವಿನೆನಪು

- **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ ಸಂಜೆ 7 ಗಂಟೆವರೆಗೆ
- **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ :** ಅಂತರ ಕಾಲೇಜು ಇಂಜಿನಿಯರಿಂಗ್ ಕ್ರೀಡಾಕೂಟ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ವಿಶ್ರಾಂತ ನಿರ್ದೇಶಕ ಡಾ. ಸಿ. ಕೃಷ್ಣ, ಅಧ್ಯಕ್ಷತೆ : ಜೆಎಸ್‌ಎಸ್ ವಿವಿ ಕುಲಪತಿ ಡಾ. ಎ.ಎನ್. ಸಂತೋಷ್‌ಕುಮಾರ್, ಉಪಸ್ಥಿತರು : ಕಾಲೇಜು ಪ್ರಿನ್ಸಿಪಾಲ್ ಡಾ. ಸಿ. ನಟರಾಜು, ಕುಲಸಚಿವ ಪ್ರೊ. ಎಸ್.ಎ. ಧನರಾಜ್, ಸ್ಥಳ: ಎಸ್‌ಜೆಸಿಇ ಫುಟ್‌ಬಾಲ್ ಮೈದಾನ, ಬೆಳಗ್ಗೆ 9.30ಕ್ಕೆ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸಂಧಿವಾತ, ಮಂಡಿ ನೋವು, ಕೀಲು ನೋವು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.
- **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ :** ಕನ್ನಡ ರಾಜ್ಯೋತ್ಸವ ಆಚರಣೆ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ವಿಶೇಷ ಅತಿಥಿಗಳು: ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ಎನ್.ಕೆ. ತಳವಾರ, ಉಪಸ್ಥಿತರು : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಡಾ. ವಿಜಯಕುಮಾರಿ ಎಸ್. ಕರಿಕಲ್, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಬೆಳಗ್ಗೆ 10.30ಕ್ಕೆ.
- **ಶೇಷಾದ್ರಿಪುರಂ ಪದವಿ ಕಾಲೇಜು:** ಕನ್ನಡ ರಾಜ್ಯೋತ್ಸವ ಸಮಾರಂಭ, ಮುಖ್ಯ ಅತಿಥಿಗಳು: ಹಿರಿಯ ವಿದ್ವಾಂಸ ಡಾ.ರಾಮೇಗೌಡ, ಅಧ್ಯಕ್ಷತೆ: ಸಂಸ್ಥೆ ಗೌರವ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ. ವೂಡೇ ಪಿ.ಕೃಷ್ಣ, ಉಪಸ್ಥಿತರು: ಕಾಲೇಜು ಪ್ರಿನ್ಸಿಪಾಲ್ ಅರ್ಚನಾ ಸ್ವಾಮಿ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 11ಕ್ಕೆ.
- **ಶ್ರೀ ಸತ್ಯಸಾಯಿಬಾಬಾ ಶಾಲೆ ಮತ್ತು ಪದವಿಪೂರ್ವ ಕಾಲೇಜು :** ಭಗವಾನ್ ಶ್ರೀ ಸತ್ಯ ಸಾಯಿಬಾಬಾರ 98ನೇ ಜನ್ಮ ದಿನಾಚರಣೆ ಮತ್ತು ಪಾದುಕಾ ಪ್ರತಿಷ್ಠಾಪನಾ ಮಹೋತ್ಸವ, ಉದ್ಘಾಟನೆ: ಭಗವಾನ್ ಶ್ರೀ ಸತ್ಯ ಸಾಯಿಬಾಬಾ ಮಹಿಳಾ ಮತ್ತು ಮಕ್ಕಳ ಕೂಟ ಟ್ರಸ್ಟ್ ಗೌರವ ಅಧ್ಯಕ್ಷ ಪ್ರೊ.ಕೆ.ಬಿ.ಪ್ರಭುಪ್ರಸಾದ್, ಮುಖ್ಯ ಅತಿಥಿಗಳು: ವಿಜ್ಞಾನಿ ಜಿ.ಉಷಾ, ಅಧ್ಯಕ್ಷತೆ: ಭಗವಾನ್ ಶ್ರೀ ಸತ್ಯ ಸಾಯಿಬಾಬಾ ಮಹಿಳಾ ಮತ್ತು ಮಕ್ಕಳ ಕೂಟ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಎನ್.ಸುಂದರೇಶನ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.
- **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಕನ್ನಡ ರಾಜ್ಯೋತ್ಸವ ಸಮಾರಂಭ, ಅಧ್ಯಕ್ಷತೆ : **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ** ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಉದ್ಘಾಟನೆ : ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಪದ್ಮಾಶೇಖರ್, ಉಪಸ್ಥಿತರು : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಸಚಿವ ಪ್ರೊ. ಕೆ.ಎಲ್.ಎನ್. ಮೂರ್ತಿ, ಪ್ರಾಸ್ತಾವಿಕ ನುಡಿ : ಸಂಯೋಜನಾಧಿಕಾರಿ ಡಾ. ಎನ್.ಆರ್. ಚಂದ್ರೇಗೌಡ, ಸ್ಥಳ: ಘಟಿಕೋತ್ಸವ ಭವನ, ಕರಾಮುವಿವಿ, ಬೆಳಗ್ಗೆ 11.30ಕ್ಕೆ.
- **ಚಿನ್ಮಯ ಮಿಷನ್ :** ಪಂಡಿತ್ ಕೃಷ್ಣರಾವ್ ಪ್ರಕಾಶ್ ಅವರಿಂದ ಪತಾಂಜಲಿಯ ಯೋಗ ಸೂತ್ರಗಳು–ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಮೈಸೂರು ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಶ್ರೀ ರಾಘವೇಂದ್ರ ಸ್ವಾಮಿ ಸೇವಾ ಸಮಿತಿ :** ವಿದ್ವಾನ್ ಶ್ರೀ ಖೇಡ ವೇದ ವ್ಯಾಸಚಾರ್ಯ ಅವರಿಂದ ಉಪನಿಷದ್‌ಗಳ ಬಗ್ಗೆ ಪ್ರವಚನ, ಸ್ಥಳ: ಮಠದ ಆವರಣ, ಸಂಜೆ 5ರಿಂದ 6.30 ರವರೆಗೆ.
- **ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ :** 46ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರಸ್ವಾಮಿ ಪೂಜಾ ಮಹೋತ್ಸವ, ಸಂಜೆ 7 ಗಂಟೆಗೆ ಶ್ರೀ ಹೇಮಾದ್ರಿ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, ಲಷ್ಕರ್ ಮೊಹಲ್ಲಾ
- **ಸಂಚಲನ ಮೈಸೂರು, ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ :** ಹೃದಯರಂಗ ರಂಗ ತಂಡದ ಕಲಾವಿದರಿಂದ ಷೇಕ್ಸ್‌ಪಿಯರ್ ಬರೆದ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್ ನಾಟಕ ಪ್ರದರ್ಶನ, ನಿರ್ದೇಶನ : ಜೀವನ್ ಕುಮಾರ್ ಬಿ. ಹೆಗ್ಗೋಡು, ಸ್ಥಳ: ಕಿರುರಂಗಮಂದಿರ, ಸಂಜೆ 6.30ಕ್ಕೆ.

ಸುತ್ತೂರು ಶ್ರೀ ಕ್ಷೇತ್ರದಲ್ಲಿಂದು, ನಂಜನಗೂಡು ತಾಲೂಕು

- **ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ :** ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಸ್ಥಳ: ಸುತ್ತೂರು ಶ್ರೀಕ್ಷೇತ್ರ.

ಅಂದಗೆಟ್ಟ ಪಾರಂಪರಿಕ 'ಸ್ವಾಗತ ಕಮಾನು'; ಈಗ ಗೋಡೆಗೆ ಹಾನಿ

● ಉದುರಿ ಬಿದ್ದಿರುವ ಇಟ್ಟಿಗೆಗಳು ● ಇದರ ಕಬ್ಬಿಣದ ಬೇಲಿ ಕದ್ದೊಯ್ಯಲು ಕಿಡಿಗೇಡಿಗಳು ಕೃತ್ಯ ನಡೆಸಿರುವ ಶಂಕೆ



ಮೈಸೂರಿನ ಲಲಿತ ಮಹಲ್ ರಸ್ತೆಯಲ್ಲಿರುವ ಪಾರಂಪರಿಕ 'ಸ್ವಾಗತ ಕಮಾನು' ಗೋಡೆಗೆ ಹಾನಿಯಾಗಿರುವುದು. ಹಾನಿಯಾಗಿರುವ ಗೋಡೆ ಮೇಲ್ಭಾಗದಲ್ಲಿ ಇರುವ ಕಬ್ಬಿಣದ ಬೇಲಿಯನ್ನೂ ಚಿತ್ರದಲ್ಲಿ ಕಾಣಬಹುದು.



ಈಗ ಹಾನಿಗೆ ಒಳಗಾಗಿರುವ ಭಾಗ 2019ರಲ್ಲಿ ಸುಸ್ಥಿತಿಯಲ್ಲಿ ಇರುವುದನ್ನು ಕಾಣಬಹುದು.

ಮೈಸೂರು,ನ.22(ಪಿಎಂ)- ಮೈಸೂರಿನ ತಿ.ನರಸೀಪುರ ರಸ್ತೆಯಲ್ಲಿರುವ (ಲಲಿತ ಮಹಲ್ ರಸ್ತೆ) ಪಾರಂಪರಿಕ 'ಸ್ವಾಗತ ಕಮಾನು' ಎಷ್ಟೋ ವರ್ಷಗಳಿಂದ ಸೂಕ್ತ ನಿರ್ವಹಣೆ ಇಲ್ಲದೇ ಸೊರಗುತ್ತಿದ್ದು, ಇದೀಗ ಅದರ ಗೋಡೆಗೆ ಹಾನಿ ಆಗಿದೆ.

ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ನಿರ್ಮಿಸಿರುವ ಈ ಸ್ವಾಗತ ಕಮಾನಿನ ದುಸ್ಥಿತಿ ಹೇಳತೀರದು. ಈ ನಡುವೆ ಇದೀಗ ಇದರ ಒಂದು ಭಾಗದ ಗೋಡೆಯ ಇಟ್ಟಿಗೆಗಳು ಕಳಚಿ ಬಿದ್ದಿವೆ. ಹೀಗೆ ಕುಸಿದು ಉದುರಿರುವ ಈ ಭಾಗದ ಮೇಲೆ ಅಳವಡಿಸಿರುವ ಕಬ್ಬಿಣದ ಬೇಲಿ ಕಿತ್ತು ಕದ್ದೊಯ್ಯಲು ಯಾರೋ ಕಿಡಿಗೇಡಿಗಳು ಈ ರೀತಿಯಲ್ಲಿ ಹಾನಿ ಉಂಟು ಮಾಡಿ ರುವ ಶಂಕೆ ವ್ಯಕ್ತವಾಗಿದೆ.

ಚೌಕಾಕಾರದಲ್ಲಿ ನಾಲ್ಕು ಕಂಬಗಳನ್ನು ಗೋಡೆ ಮಾದರಿಯಲ್ಲಿ ಕಟ್ಟಿರುವ ಪಾರಂಪರಿಕ ನಿರ್ಮಾಣ ಇದಾಗಿದೆ. ಸುಣ್ಣ ಬಣ್ಣಗಳಿಂದ ಕಂಗೊಳಿಸಬೇಕಿದ್ದ ಈ ಕಮಾನು ಹಲವು ವರ್ಷಗಳಿಂದ ಸೂಕ್ತ ನಿರ್ವಹಣೆ ಇಲ್ಲದೇ ಅಂದಗೆಟ್ಟು ನಿಂತಿದೆ. ಚೌಕಾ ಕಾರದ ನಾಲ್ಕು ಕಂಬಗಳ ನಿರ್ಮಾಣ ದೊಂದಿಗೆ ಅವುಗಳ ನಡುವೆ ಕಬ್ಬಿಣದ ಬೇಲಿ ಅಳವಡಿಸಿದ್ದು, ಇದಕ್ಕೆ ಅಂತಹ ಹಾನಿ ಉಂಟಾಗಿಲ್ಲವಾದರೂ ಕಮಾನಿನ ಮುಖ್ಯ ಭಾಗವಾದ ಕಬ್ಬಿಣದ ಗೇಟುಗಳು ಜಖಂಗೊಂಡು ಎಷ್ಟೋ ವರ್ಷಗಳೇ ಕಳೆದಿವೆ.

ಕಮಾನಿನ ಎರಡು ಬದಿಯಲ್ಲಿಯೂ ಒಂದೊಂದು ಕೊಠಡಿಗಳೂ ಇದಕ್ಕಿವೆ. ಕಮಾನಿನ ಕಂಬಗಳಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಸಲಾಗಿದ್ದು, ಅವು ಬೆಳಗಿ ಎಷ್ಟೋ ವರ್ಷಗಳು ಕಳೆದಿವೆ ಎಂಬುದನ್ನು ಅಲ್ಲೊಮ್ಮೆ ನೋಡಿದರೆ ಯಾರೂ ಬೇಕಾದರೂ ಊಹಿಸಬಹುದು.

ಕಮಾನಿನ ಬಲಭಾಗದ (ಮೈಸೂರು ನಗರದಿಂದ ನಿರ್ಗಮಿಸುವತ್ತ ಮುಖ ಮಾಡಿ ನಿಂತರೆ ಕಾಣುವ ಭಾಗ/ಲಲಿತ ಮಹಲ್ ಕಡೆ ಸಾಗುವತ್ತ) ಮುಖ್ಯ ಕಂಬ ಹಾಗೂ ಅದರ ನಡುವೆ ಇರುವ ಮತ್ತೊಂದು ಕಂಬದ ಮಧ್ಯೆ ಅಳವಡಿಸಿರುವ ಕಬ್ಬಿಣದ ಬೇಲಿಯ ಕೆಳಭಾಗದ ನಿರ್ಮಾಣಕ್ಕೆ ಇತ್ತೀಚೆಗೆ ಹಾನಿ ಉಂಟು ಮಾಡಲಾಗಿದೆ ಎಂದು ಅಲ್ಲಿ ನೋಡಿದ ಯಾರೂ ಬೇಕಾದರೂ ಅಂದಾಜಿಸಬಹುದು. ಇಲ್ಲಿ ನೆಲಮಟ್ಟದಿಂದ ಕಬ್ಬಿಣದ ಬೇಲಿಯ ಬುಡದವರೆಗೂ (ಇಲ್ಲಿನ ಸಂಪೂರ್ಣ ಗೋಡೆ) ಇರುವ ಗೋಡೆಯು (2ರಿಂದ 3 ಅಡಿ ಎತ್ತರ ಹೊಂದಿರುವ ಗೋಡೆ) ಪೂರ್ಣ ಪ್ರಮಾಣದಲ್ಲಿ ಉದುರಿ ಹೋಗಿದ್ದು, ಇಟ್ಟಿಗೆಗಳು ಕಳಚಿ ಬಿದ್ದಿವೆ. ಈ ಕಬ್ಬಿಣದ ಬೇಲಿ ಕದಿಯಲು ಖದೀಮರು ಮಾಡಿರುವ ಕೃತ್ಯವಿದು ಎಂಬ ಶಂಕೆ ವ್ಯಕ್ತವಾಗಿದೆ. ಮಳೆಯಿಂದ ಕುಸಿದು ಬೀಳುವಷ್ಟು ಎತ್ತರದ ಗೋಡೆ ಅದಾಗಿಲ್ಲದೇ ಇರುವ ಹಿನ್ನೆಲೆಯಲ್ಲಿ ಇದು ಕಿಡಿಗೇಡಿಗಳ ಕೃತ್ಯ ಎಂಬುದನ್ನು ಊಹಿಸುವುದು ಕಷ್ಟ ಸಾಧ್ಯವೇನಿಲ್ಲ ಎನ್ನಲಾಗಿದೆ. ಅದಾಗ್ಯೂ ವಾಸ್ತವದಲ್ಲಿ ಏನಾಗಿದೆ ಎಂಬ ಕಾರಣವನ್ನು ಪರಿಶೀಲಿಸಿ, ವಿಚಾರಣೆ ನಡೆಸಿಯೇ ದೃಢೀಕರಿಸಬೇಕಿದೆ.

2019ರ ಜು.11ರ 'ಮೈಸೂರು ಮಿತ್ರ' ಸಂಚಿಕೆಯಲ್ಲಿಯೂ (ಪುಟ 9) ಈ ಕಮಾನು ದುಸ್ಥಿತಿಯಲ್ಲಿರುವುದನ್ನು ಪ್ರಕಟಿಸಿ, ಗಮನ ಸೆಳೆಯಲಾಗಿತ್ತು. ಹಾಗಾಗಿ ಇತ್ತೀಚೆಗಿನ ವರ್ಷಗಳಿಂದಾದರೂ ಈ ಕಮಾನಿನ ಸೂಕ್ತ ನಿರ್ವಹಣೆಗೆ ಕಾಳಜಿ ತೋರಿದ್ದರೆ ಅದರ ಸುಸ್ಥಿತಿಯನ್ನು ಆದಷ್ಟು ಕಾಪಾಡಿಕೊಳ್ಳಬಹುದಿತ್ತು. ಆದರೂ ಅದೇಕೋ ಸ್ಥಳೀಯ ಆಡಳಿತ ಈ ಕಮಾನಿನ ಸೂಕ್ತ ನಿರ್ವ ಹಣೆಗೆ ಕ್ರಮ ವಹಿಸಿ, ಸಂರಕ್ಷಣೆ ಮಾಡುವ ಗೋಜಿಗೆ ಹೋಗದೇ ಇರುವುದು ಬೇಸರದ ಸಂಗತಿ.

ಯಾವ್ಯಾವುದೋ ಕಾರ್ಯಕ್ರಮ, ಸಮಾವೇಶದ ಪ್ರಕಟಣೆಯ ಪೋಸ್ಟರ್‌ಗಳನ್ನು ಕಮಾನಿನ ಅಲ್ಲಲ್ಲಿ ಅಂಟಿಸಿ ಅಂದ ಗೆಡಿಸಲಾಗಿದೆ. ಎಷ್ಟು ವರ್ಷಗಳಿಂದ ಇದು ನಿರಂತರವಾಗಿ ನಡೆಯುತ್ತಲೇ ಇದ್ದರೂ ಸಂಬಂಧಿಸಿದವರು ಮಾತ್ರ ಅದೇಕೋ ಗಮನ ನೀಡುತ್ತಿಲ್ಲ. ಈಗ ಹಾನಿಗೆ ಒಳಗಾಗಿರುವ ಭಾಗದ ಮಾದರಿಯಲ್ಲೇ ಇರುವ ಕಮಾನಿನ ಮತ್ತೊಂದು ಬದಿಯ ಗೋಡೆಗೆ ಒಂದಿಷ್ಟು ಹಾನಿಯಾಗಿದ್ದು, ನಿರ್ವಹಣೆ ಇಲ್ಲದೇ ಉಂಟಾಗಿರುವ ಈ ಹಾನಿಗೆ ಈಗಲಾದರೂ ಪರಿಹಾರ ಕಂಡುಕೊಂಡರೆ, ಮುಂದೆ ಈ ಭಾಗಕ್ಕೆ ಆಗಬಹುದಾದ ನಷ್ಟವನ್ನು ತಡೆಯಬಹುದಾಗಿದೆ.

ಈ ಪಾರಂಪರಿಕ ನಿರ್ಮಾಣ ಸಂರಕ್ಷಣೆಗೆ ಕಾಳಜಿ ವಹಿಸಿ, ಸುತ್ತಲು ಉದ್ಯಾನವನ ಹಾಗೂ ಕಾರಂಜಿ ಹೊಮ್ಮಿಸಿದ್ದರೆ, ಅದರ ಅಂದ ಇಮ್ಮಡಿಗೊಳ್ಳುತ್ತಿತ್ತು. ದುರಾದೃಷ್ಟವಶಾತ್ ಆ ಬಗ್ಗೆ ಸಂಬಂಧಿಸಿದವರು ತಲೆ ಕೆಡಿಸಿಕೊಂಡಿಲ್ಲ. ಈ ಕಮಾನಿನ ಕೊಠಡಿಗಳ ಹೊರಭಾಗದ ಮೂಲೆಗಳು ಮೂತ್ರ ವಿಸರ್ಜನೆ ತಾಣವಾಗಿ ಮಾರ್ಪಟ್ಟಿದ್ದು, ಅಲ್ಲಲ್ಲಿ ತ್ಯಾಜ್ಯಗಳನ್ನು ಬಿಸಾಡಲಾಗಿದೆ.

ಕಮಾನಿನ ಒಂದು ಕಂಬದ ಮೇಲ್ಭಾಗದಲ್ಲಿ ಅರಳಿ ಗಿಡವೇ ಬೆಳೆಯುತ್ತಿದ್ದು, ಎಷ್ಟರ ಮಟ್ಟಿಗೆ ಇದನ್ನು ನಿರ್ಲಕ್ಷ್ಯ ಮಾಡಲಾಗಿದೆ ಎಂಬುದಕ್ಕೆ ಇದಕ್ಕಿಂತಲೂ ಬೇರೆ ಸಾಕ್ಷಿ ಬೇಕೇ ಎಂಬ ಪ್ರಶ್ನೆ ನಾಗರಿಕ ವಲಯದಿಂದ ವ್ಯಕ್ತವಾಗಿದೆ.

ಮಳೆ-ಗಾಳಿಯ ನಡುವೆಯೂ ಸುದೀರ್ಘ ಸಂದರ್ಭದಲ್ಲೂ ಸಾಕಷ್ಟು ಸದೃಢವಾಗಿ ಇರುವ ಈ ಕಮಾನಿನ ಸಂರಕ್ಷಣೆಗೆ ಯಾವಾಗ ಕಾಲಕೂಡಿ ಬರುತ್ತದೋ ಗೊತ್ತಿಲ್ಲ. ನೋಡು ನೋಡುತ್ತಲೇ ಈ ಪಾರಂಪರಿಕ ನಿರ್ಮಾಣವು ಸೂಕ್ತ ನಿರ್ವಹಣೆ ಮಾಡದ ತಪ್ಪಿನಿಂದಾಗಿ ಅಳಿವಿನತ್ತ ಸಾಗುತ್ತಿದೆ ಎಂಬುದು ಪ್ರಜ್ಞಾವಂತ ನಾಗರಿಕರ ಅಳಲು. ಈಗಲಾದರೂ ಈ ಕಮಾನಿನ ದುಸ್ಥಿತಿ ತಪ್ಪಿಸಿ, ಸುಸ್ಥಿತಿಗೆ ತರುವ ಪ್ರಯತ್ನ ನಡೆಯುವುದೇ ಎಂಬುದನ್ನು ಕಾದು ನೋಡಬೇಕಿದೆ.



'ಸ್ವಾಗತ ಕಮಾನು' ಕಂಬದಲ್ಲಿರುವ ಗಂಡಭೇರುಂಡದ ಉಬ್ಬು ಚಿತ್ರ.

ಆಕರ್ಷಕ ಗಂಡಭೇರುಂಡ ಉಬ್ಬು ಚಿತ್ರ

ಕಮಾನಿನ ಎರಡು ಪ್ರಧಾನ ಕಂಬಗಳಲ್ಲಿ ತಲಾ ಒಂದು ಗಂಡಭೇರುಂಡವನ್ನು ಉಬ್ಬು ಚಿತ್ರ ಮಾದರಿಯಲ್ಲಿ ಮೂಡಿಸಲಾಗಿದೆ (ಲಲಿತ ಮಹಲ್‌ನತ್ತ ಸಾಗುವಾಗ ಈ ಚಿತ್ರಗಳನ್ನು ಕಾಣಬಹುದು). ಮೈಸೂರು ಮಹಾರಾಜರ ಲಾಂಛನವಾದ ಇವುಗಳನ್ನು ನೋಡುವುದೇ ಒಂದು ಸೊಗಸು ಎನ್ನುವಷ್ಟು ಆಕರ್ಷಣೆ ಹೊಂದಿವೆ. ಆದರೆ ನಿರ್ವಹಣೆ ಕೊರತೆಯಿಂದ ಅವುಗಳ ಅಂದವೂ ಕುಂದಿ ಹೋಗಿದ್ದು, ಅವುಗಳನ್ನು ಮೂಡಿಸಲು ನಿರ್ಮಿಸಿರುವ ಗಾರೆ ಕೆಲವು ಭಾಗದಲ್ಲಿ ಉದುರಿ ಹೋಗಿದೆ.



ಕಮಾನಿನ ಗೋಡೆಯ ಮೇಲೆ ಗಿಡಗಂಟಿಗಳು ಬೆಳೆದಿರುವುದು.

ಕಮಿಷನ್, ಪಾರ್ಟ್‌ಟೈಂ ಕೆಲಸದ ಆಮಿಷ ತೋರಿ ಆನ್‌ಲೈನ್‌ನಲ್ಲಿ ಲಕ್ಷ ಲಕ್ಷ ವಂಚನೆ

ಮೈಸೂರು,ನ.22-ಹೆಚ್ಚಿನ ಕಮಿಷನ್ ಆಮಿಷವೊಡ್ಡಿ ಮೈಸೂರಿನ ಮೂವರಿಗೆ ಆನ್‌ಲೈನ್ ಮೂಲಕ ಲಕ್ಷಾಂತರ ರೂ. ವಂಚಿಸಲಾಗಿದೆ.

ಮೈಸೂರಿನ ರಾಜೀವ್‌ನಗರ ನಿವಾಸಿ ಉಮೆ ಸಾನಿಯಾ (24) ಎಂಬುವರನ್ನು 9794213963 ಸಂಖ್ಯೆಯಿಂದ ವಾಟ್ಸಾಪ್ ಮೂಲಕ ಸಂಪರ್ಕಿಸಿದ ವಂಚಕರು, ರೀಲ್ಸ್‌ಗಳಿಗೆ ಲೈಕ್ ಮಾಡಿದರೆ ಹೆಚ್ಚಿನ ಕಮಿಷನ್ ಸಿಗುತ್ತದೆ ಎಂದು ನಂಬಿಸಿ 81 ಸಾವಿರ ರೂ. ವರ್ಗಾಯಿಸಿಕೊಂಡು ವಂಚಿಸಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ವಿಜಯನಗರ 4ನೇ ಹಂತದ ನಿವಾಸಿ ರಾಜ ದೊರ್ಯೆ(28) ಅವರಿಗೆ ಪಾರ್ಟ್‌ಟೈಂ ವರ್ಕ್ ಬಗ್ಗೆ ಟೆಲಿಗ್ರಾಂನಲ್ಲಿ ಮೆಸೇಜ್ ರವಾನೆಯಾಗಿದೆ. ಏರ್‌ಲೈನ್ ಬುಕ್ಕಿಂಗ್ ವೆಬ್‌ಸೈಟ್ ಅನ್ನು ಪ್ರಮೋಟ್ ಮಾಡಿದರೆ, ಕಮಿಷನ್ ನೀಡುವುದಾಗಿ ಆಮಿಷ ವೊಡ್ಡಲಾಗಿದೆ. ಮೊದಲ ಹಂತದಲ್ಲಿ ಅವರಿಗೆ 1100 ರೂ. ಕಮಿಷನ್ ನೀಡಲಾಗಿದೆ. ನಂತರ ಅವರು 10 ಸಾವಿರ ರೂ. ಹೂಡಿಕೆ ಮಾಡಿದಾಗ ಎರಡು ಸಾವಿರ ರೂ. ಬೋನಸ್ ಮತ್ತು 5100 ರೂ. ಕಮಿಷನ್ ನೀಡಲಾಗಿದೆ. ನಂತರ ಹಂತ ಹಂತವಾಗಿ 4,96,854 ರೂ. ಹೂಡಿಕೆ ಮಾಡಿಸಿಕೊಂಡು ವಂಚಿಸಲಾಗಿದೆ.

ಇನ್ನೊಂದು ಪ್ರಕರಣದಲ್ಲಿ ಜೆಪಿನಗರ 1ನೇ ಹಂತದ ಸಿದ್ದಲಿಂಗೇಶ್ವರ ಬಡಾವಣೆ ನಿವಾಸಿ ಹೆಚ್.ಆರ್. ಸುಷ್ಮಾ(25) ಅವರ ವಾಟ್ಸಾಪ್‌ಗೆ 9837094668 ಸಂಖ್ಯೆಯಿಂದ ಪ್ರೀಪೇಯ್ಡ್ ಟಾಸ್ಕ್ ಕಂಪ್ಲೀಟ್ ಮಾಡಿದರೆ ಕಮಿಷನ್ ಸಿಗುತ್ತದೆ ಎಂದು ಮೆಸೇಜ್ ರವಾನೆಯಾಗಿದೆ. ಮೊದಲಿಗೆ ಅವರಿಗೆ ಸಾವಿರ ರೂ. ವರ್ಗಾಯಿಸಿ ಟಾಸ್ಕ್ ಮಾಡಿದಾಗ ಅವರ ಖಾತೆಗೆ 1300 ರೂ. ಜಮೆ ಮಾಡಲಾಗಿದೆ. ನಂತರ 1.18 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಈ ಮೂರು ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಪ್ರತ್ಯೇಕ ಅಪಘಾತ; ಇಬ್ಬರು ಬೈಕ್ ಸವಾರರ ಸಾವು

ಮೈಸೂರು,ನ.22-ಮೈಸೂರು ನಗರದಲ್ಲಿ ಪ್ರತ್ಯೇಕ ಅಪಘಾತಗಳಲ್ಲಿ ಇಬ್ಬರು ಬೈಕ್ ಸವಾರರು ಸಾವನ್ನಪ್ಪಿದ್ದಾರೆ.

ಮೈಸೂರಿನ ಆಲನಹಳ್ಳಿ ಗ್ರಾಮದ ಪಿ.ಹೇಮಂತ್‌ಕುಮಾರ್(23) ಎಂಬುವರು ನವೆಂಬರ್ 19ರಂದು ರಾತ್ರಿ 8 ಗಂಟೆ ಸುಮಾರಿನಲ್ಲಿ ಬಜಾಜ್ ಪಲ್ಸರ್ ಬೈಕ್‌ನಲ್ಲಿ (ಕೆಎ 55-ಇಬಿ 9559) ಹಳೆ ಬೋಗಾದಿ ರಿಂಗ್ ರಸ್ತೆ ಸಿಗ್ನಲ್‌ನಿಂದ ರಾಜರಾಜೇಶ್ವರಿನಗರದ ರಿಂಗ್ ರಸ್ತೆ ಜಂಕ್ಷನ್ ಕಡೆಗೆ ಸರ್ವೀಸ್ ರೋಡ್‌ನಲ್ಲಿ ತೆರಳುತ್ತಿದ್ದ ವೇಳೆ ನಾಗಲಿಂಗೇಶ್ವರ ಮತ್ತು ಬೋಗಲಿಂಗೇಶ್ವರ ದೇವಸ್ಥಾನದ ಎದುರು ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿಯಾದ ಪರಿಣಾಮ ತೀವ್ರವಾಗಿ ಗಾಯಗೊಂಡಿದ್ದಾರೆ. ವಿಷಯ ತಿಳಿದು ಕೆಆರ್ ಸಂಚಾರ ಪೊಲೀಸರು ಅವರನ್ನು ಆಂಬುಲೆನ್ಸ್ ಮೂಲಕ ಕೆಆರ್ ಆಸ್ಪತ್ರೆಗೆ ಕರೆದೊಯ್ಯುವದಾರಿ ಮಾರ್ಗಮಧ್ಯೆಯೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಕೆಆರ್ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಮೇಟಗಳ್ಳಿ ನಿವಾಸಿ ವೆಂಕಟೇಶ್ ಎಂಬುವರು ಡುಯೆಟ್ ಸ್ಕೂಟರ್‌ನಲ್ಲಿ (ಕೆಎ 55-ಇಎ 6957) ಬನ್ನಿಮಂಟಪದ ಈದ್ಗಾ ಮೈದಾನ ಮುಖ್ಯ ರಸ್ತೆಯಲ್ಲಿ ಹೈವೇ ಸರ್ಕಲ್ ಕಡೆಯಿಂದ ಆರ್.ಕೆ. ಫಂಕ್ಷನ್ ಹಾಲ್ ಕಡೆಗೆ ತೆರಳುತ್ತಿದ್ದಾಗ ಮೈತ್ರಾಕ್ ಕಚೇರಿ ಮುಂದೆ ವಿರುದ್ಧ ದಿಕ್ಕಿನಲ್ಲಿ ಡಿಸ್ಕವರಿ ಬೈಕ್‌ನಲ್ಲಿ ಬಂದ ಮೊಹಮ್ಮದ್ ಜುಬೇರ್ ಎಂಬುವರು ಇವರ ಸ್ಕೂಟರ್‌ಗೆ ಡಿಕ್ಕಿ ಹೊಡೆದ ಪರಿಣಾಮ ತೀವ್ರವಾಗಿ ಗಾಯಗೊಂಡ ವೆಂಕಟೇಶ್ ಅವರನ್ನು ಕೆಆರ್ ಆಸ್ಪತ್ರೆಗೆ ಕರೆದೊಯ್ಯುವಾಗ ಸಾವನ್ನಪ್ಪಿದ್ದಾರೆ. ಎನ್‌ಆರ್ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಳಸಂತೆಯಲ್ಲಿ ರೈಲ್ವೆ ಟಿಕೆಟ್ ಮಾರಾಟ

ಓರ್ವನ ಸೆರೆ: 4.80 ಲಕ್ಷ ರೂ. ಮೌಲ್ಯದ ರೈಲ್ವೇ ಟಿಕೆಟ್ ವಶ

ಮೈಸೂರು, ನ.22(ಆರ್‌ಕೆ)-ಅನಧಿಕೃತವಾಗಿ ಹೆಚ್ಚಿನ ಬೆಲೆಗೆ ರೈಲ್ವೆ ಟಿಕೆಟ್‌ಗಳನ್ನು ಮಾರುತ್ತಿದ್ದ ಓರ್ವನನ್ನು ರೈಲ್ವೆ ಪ್ರೊಟೆಕ್ಷನ್ ಫೋರ್ಸ್ (RPF) ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಹೆಬ್ಬಾಳು ನಿವಾಸಿ ಓಂ ಪ್ರಕಾಶ್ ಪಾಟೀಲ್ ಬಂಧಿತ ಆರೋಪಿ. ಆತನಿಂದ 4.80 ಲಕ್ಷ ರೂ. ಮೌಲ್ಯದ ರೈಲ್ವೆ ಪ್ರಯಾಣಿಕರ ಟಿಕೆಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ತಮಗೆ ದೊರೆತ ಮಾಹಿತಿಯನ್ವಯ ಕಾರ್ಯಾಚರಣೆ ನಡೆಸಿದ ಆರ್‌ಪಿಎಫ್ ಅಧಿಕಾರಿಗಳು, 4,349 ರೂ. ಮೌಲ್ಯದ ಪ್ರಸಕ್ತ ಟಿಕೆಟ್‌ಗಳು, 3,87,770 ರೂ. ಬೆಲೆಯ ಪಾಸ್ಟ್ ಟಿಕೆಟ್‌ಗಳು ಹಾಗೂ 88,000 ರೂ. ಮೌಲ್ಯದ ಕಂಪ್ಯೂಟರ್ ಸಿಸ್ಟಂ ಅನ್ನು ವಶಪಡಿಸಿಕೊಂಡಿದ್ದಾರೆ.

ಟಿಕೆಟ್ ಬುಕ್ಕಿಂಗ್ ಏಜೆನ್ಸಿಗಳಿಂದ ಅಧಿಕ ಸಂಖ್ಯೆಯ ರೈಲ್ವೆ ಟಿಕೆಟ್‌ಗಳನ್ನು ಬುಕ್ ಮಾಡಿ ಖರೀದಿಸುತ್ತಿದ್ದ ಪ್ರಕಾಶ್ ಪಾಟೀಲ್, ಟಿಕೆಟ್ ಸಿಗದೇ ಪರದಾಡುವ ಪ್ರಯಾಣಿಕರಿಗೆ ಹೆಚ್ಚಿನ ಬೆಲೆಗೆ ಕಾಳ ಸಂತೆಯಲ್ಲಿ ಈತ ಟಿಕೆಟ್ ಮಾರಾಟ ಮಾಡುತ್ತಿದ್ದ. ಆತನ ವಿರುದ್ಧ ಪ್ರಕರಣ ದಾಖಲಿಸಿ ನೋಟಿಸ್ ಜಾರಿ ಮಾಡಿ ಬಿಡುಗಡೆ ಮಾಡಲಾಗಿದೆ ಎಂದು ಆರ್‌ಪಿಎಫ್ ಅಧಿಕಾರಿಗಳು ತಿಳಿಸಿದ್ದಾರೆ.

ಹಣಕಾಸು ವಿಚಾರವಾಗಿ ನಿಂದನೆ: ಆಟೋ ಚಾಲಕ ನೇಣಿಗೆ ಶರಣು

ಮೈಸೂರು,ನ.22-ಹಣಕಾಸು ವಿಚಾರವಾಗಿ ನಿಂದಿಸಿದ್ದರಿಂದ ಮನನೊಂದು ಆಟೋಚಾಲಕನೋರ್ವ ಐವರ ವಿರುದ್ಧ ಇನ್‌ಸ್ಟಾಗ್ರಾಂ ಮೂಲಕ ಆರೋಪ ಮಾಡಿ ನೇಣಿಗೆ ಶರಣಾದ ಘಟನೆ ಮೈಸೂರಿನ ವಸಂತನಗರದಲ್ಲಿ ನಡೆದಿದೆ.

ಅಲ್ಲಿನ ನಿವಾಸಿ ಜೀವಿತ್(25) ನೇಣಿಗೆ ಶರಣಾದ ಆಟೋಚಾಲಕನಾಗಿದ್ದು, ಈತ ನ.20ರಂದು ರಾತ್ರಿ ಇನ್‌ಸ್ಟಾಗ್ರಾಂನಲ್ಲಿ ಹಣಕಾಸು ವಿಚಾರವಾಗಿ ಮಹೇಶ್, ಅಮ್ಮು ಅಲಿಯಾಸ್ ಸ್ನೇಹ, ಶಿಲ್ಪ, ಮೋಹನ, ಚಂದು ಅವರುಗಳು ತನ್ನನ್ನು ಬಾಯಿಗೆ ಬಂದಂತೆ ಬೈದು ಮಾನಸಿಕ ಕಿರುಕುಳ ನೀಡಿದ್ದರಿಂದ ಮನನೊಂದು ತಾನು ನೇಣು ಹಾಕಿಕೊಳ್ಳುತ್ತಿದ್ದೇನೆ ಎಂದು ವಿಡಿಯೋ ಮಾಡಿ ನಂತರ ನೇಣಿಗೆ ಶರಣಾಗಿದ್ದಾನೆ. ಈ ಸಂಬಂಧ ಈತನ ತಾಯಿ ಸೋಣು ನೀಡಿದ ದೂರಿನನ್ವಯ ಆಲನಹಳ್ಳಿ ಠಾಣೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮನೆಗೆ ನುಗ್ಗಿ ಚಿನ್ನಾಭರಣ ಕಳವು

ಬಸರಾಳು,ನ.22-ಖದೀಮರು ಮನೆಗೆ ನುಗ್ಗಿ ಚಿನ್ನಾಭರಣ ಕಳವು ಮಾಡಿದ ಘಟನೆ ಮಂಡ್ಯ ತಾಲೂಕು ಬೆಸ್ತಟ್ಟಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ರೈತ ಮಹಿಳೆ ಪುಟ್ಟಮ್ಮ(53) ಅವರು ನ.21ರಂದು ಬೆಳಿಗ್ಗೆ 9.45ರ ಸುಮಾರಿನಲ್ಲಿ ಮನೆಗೆ ಬೀಗ ಹಾಕಿಕೊಂಡು ಕೀಯನ್ನು ಮನೆಗೆ ಹೊಂದಿಕೊಂಡಂತಿರುವ ದನದ ಕೊಟ್ಟಿಗೆಯ ಕೋಳಿ ಕೂಡಿ ಹಾಕುವ ಕಟ್ಟಡದ ಮೇಲಿಟ್ಟು ಅದರ ಮೇಲೆ ಪ್ಲಾಸ್ಟಿಕ್ ಚೀಲ ಹೊದಿಸಿ ಎಮ್ಮೆ ಮೇಯಿಸಲು ಹೋಗಿದ್ದಾರೆ. ಮಧ್ಯಾಹ್ನ ಅವರ ಪತಿ ರಮೇಶ್ ಮನೆಗೆ ಬಂದು ಬೀಗ ತೆಗೆದು ನೋಡಿದಾಗ ರೂಂನಲ್ಲಿದ್ದ ವಾರ್ಡ್‌ರೋಬ್‌ನ ಡ್ರಾಯರ್ ಲಾಕ್‌ಗಳನ್ನು ಮುರಿದು 60 ಗ್ರಾಂ ಚಿನ್ನಾಭರಣ ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಬಸರಾಳು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಬ್ಬು ನಾರುತ್ತಿರುವ ಮಂಡಿ ಮೊಹಲ್ಲಾ ರಸ್ತೆ



ಮೈಸೂರು ಮಂಡಿ ಮೊಹಲ್ಲಾದ ಮಿಷನ್ ಆಸ್ಪತ್ರೆ ರಸ್ತೆಯ ಯಲ್ಲಮ್ಮ ದೇವಸ್ಥಾನದ ಬಳಿ ಒಳ ಚರಂಡಿ ನೀರು ರಸ್ತೆಯಲ್ಲೇ ನಿಂತಿದ್ದು, ದುರ್ವಾಸನೆ ಬೀರುತ್ತಿದೆ. ರಸ್ತೆಯಲ್ಲಿ ಜನರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಬಂದಿದೆ. ಕಲುಷಿತ ನೀರು ರಸ್ತೆಯಲ್ಲಿ ನಿಂತಿರುವ ಕಾರಣ ಯಾರೂ ಅತ್ತ ಓಡಾಡದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ವ್ಯಾಪಾರಕ್ಕೆ ತೊಂದರೆ ಆಗಬಾರದೆಂದು ವ್ಯಾಪಾರಸ್ಥರು ಬ್ಲೀಚಿಂಗ್ ಪೌಡರ್ ಸಿಂಪಡಣೆ ಮಾಡಿದ್ದಾರೆ. ರಸ್ತೆ ಉದ್ದಕ್ಕೂ ಕಲ್ಲು ಚಪ್ಪಡಿಗಳನ್ನು ಅಡ್ಡದಿಡ್ಡಿ ಜೋಡಿಸಿದ್ದು, ಹಳ್ಳ-ಕೊಳ್ಳ ಉಂಟಾಗಿದೆ. ಇದರಿಂದ ಅಪಘಾತಗಳಾಗುವ ಸಾಧ್ಯತೆಯೂ ಇದೆ.

ಗಾಂಜಾ ಮಾರುತ್ತಿದ್ದ ಇಬ್ಬರು ಪರಾರಿ

ಬೈಕ್ ಸೇರಿ 110 ಗ್ರಾಂ ಗಾಂಜಾ ಅಬಕಾರಿ ಪೊಲೀಸ್ ವಶಕ್ಕೆ

ಮೈಸೂರು,ನ.22(ಪಿಎಂ)- ಅಬಕಾರಿ ಇಲಾಖೆ ದಾಳಿ ವೇಳೆ ಗಾಂಜಾ ಮಾರಾಟ ಮಾಡುತ್ತಿದ್ದ ವ್ಯಕ್ತಿಗಳಿಬ್ಬರು ಪರಾರಿಯಾದ ಘಟನೆ ಬುಧವಾರ ಸಂಜೆ ನಡೆದಿದೆ. ಈ ವೇಳೆ ಬೈಕ್‌ನೊಂದಿಗೆ 110 ಗ್ರಾಂ ಗಾಂಜಾವನ್ನು ಅಬಕಾರಿ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಮೈಸೂರು ಕೇಂದ್ರ ಕಾರಾಗೃಹದ ಹಿಂಭಾಗ ಬೈಕ್‌ನಲ್ಲಿ ಸಂಗ್ರಹಿಸಿಟ್ಟುಕೊಂಡು ಗಾಂಜಾ ಮಾರಾಟ ಮಾಡುತ್ತಿರುವ ಮಾಹಿತಿ ಮೇರೆಗೆ ಅಬಕಾರಿ ಎಸ್‌ಪಿ ಪಿ.ಮಹೇಶ್‌ಕುಮಾರ್ ಮಾರ್ಗದರ್ಶನದಲ್ಲಿ ಸಬ್ ಇನ್ಸ್‌ಪೆಕ್ಟರ್ ರವಿಕುಮಾರ್ ನೇತ್ರತ್ವದ ತಂಡ ದಾಳಿ ನಡೆಸಿತು. ಈ ವೇಳೆ ಆರೋಪಿಗಳು ಗಾಂಜಾ ಸಂಗ್ರಹಿಸಿದ್ದ ಬೈಕ್‌ವನ್ನು ಸ್ಥಳದಲ್ಲೇ ಬಿಟ್ಟು ಪಕ್ಕದ ಸ್ಮಶಾಸಕ್ಕೆ ಹಾರಿ, ತಪ್ಪಿಸಿಕೊಂಡಿದ್ದಾರೆ. ಇಲಾಖೆಯ ಸಿಬ್ಬಂದಿ ಸುರೇಶ್, ಲೋಕೇಶ್, ಮಂಜು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದು, ಆರೋಪಿ ಗಳ ಬಂಧನಕ್ಕೆ ಕಾರ್ಯಾಚರಣೆ ರೂಪಿಸಲಾಗಿದೆ. ವಶಕ್ಕೆ ಪಡೆದಿರುವ ಬೈಕ್ ಮಾಲೀಕರ ಮಾಹಿತಿ ಕಲೆ ಹಾಕಿ, ಆರೋಪಗಳನ್ನು ಬಂಧಿಸಲಾಗುವುದು ಎಂದು ಸಬ್ ಇನ್ಸ್‌ಪೆಕ್ಟರ್ ರವಿಕುಮಾರ್ ತಿಳಿಸಿದರು.

ಬೈಕ್, ಸ್ಕೂಟರ್ ನೋಂದಣಿ ಸಂಖ್ಯೆ ಬದಲಿಸಿ ವಂಚನೆ ಸಂಚು

ಇಬ್ಬರ ವಿರುದ್ಧ ಪ್ರಕರಣ ದಾಖಲು

ಮೈಸೂರು,ನ.22(ಎಂಕೆ)-ಬೈಕ್ ನಂಬರ್ ಪ್ಲೇಟ್‌ಗೆ ಸ್ಟಿಕ್ಕರ್ ಅಂಟಿಸಿಕೊಂಡು ಅಡ್ಡಾಡುತ್ತಿದ್ದ ಇಬ್ಬರನ್ನು ವಶಕ್ಕೆ ಪಡೆದಿರುವ ಮೈಸೂರಿನ ವಿವಿಪುರಂ ಸಂಚಾರ ಪೊಲೀಸರು, ಜಯಲಕ್ಷ್ಮಿಪುರಂ ಠಾಣೆಯಲ್ಲಿ ವಂಚನೆ ಪ್ರಕರಣ ದಾಖಲಿಸಿದ್ದಾರೆ. ಪಡುವಾರಹಳ್ಳಿ ಜಂಕ್ಷನ್ ಬಳಿ ಬಜಾಜ್ ಪಲ್ಸರ್ ಬೈಕ್‌ನ ರಿಜಿಸ್ಟರ್ ನಂಬರ್ ಕೆಎ-45-ಎಕ್ಸ್-9933 ಅನ್ನು ಕೆಎ-45-ಎಕ್ಸ್-993 ಎಂದು ಬದಲಾಯಿಸಿಕೊಂಡು ನೋಂದಣಿ ಸಂಖ್ಯೆಯನ್ನು ಮರೆಮಾಚಿ ಸಂಚಾರ ನಿಯಮ ಉಲ್ಲಂಘನೆ ಮಾಡುತ್ತಿದ್ದ ಸವಾರನ ವಿರುದ್ಧ ವಂಚನೆ ಪ್ರಕರಣ ದಾಖಲಿಸಲಾಗಿದೆ.

ಹಾಗೆಯೇ ಟೆಂಪಲ್ ರಸ್ತೆಯಲ್ಲಿ ಸುಜುಕಿ ಆಕ್ಸಿಸ್ ಸ್ಕೂಟರ್ ರಿಜಿಸ್ಟರ್ ನಂಬರ್ ಸ್ಟಿಕ್ಕರ್ ಅಂಟಿಸಿಕೊಂಡು(ಕೆಎ-55-ಇಎ-6661 ಬದಲಿಗೆ ಕೆಎ-55-ಇಎ-661) ನೋಂದಣಿ ಸಂಖ್ಯೆಯನ್ನು ಮರೆಮಾಚಿ ಸಂಚಾರ ನಿಯಮ ಉಲ್ಲಂಘನೆ ಮಾಡುತ್ತಿದ್ದ ಮತ್ತೊರ್ವ ಸವಾರನ ವಿರುದ್ಧವೂ ಜಯಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಸಾಲ ಮರುಪಾವತಿಸದ ಮಹಿಳೆ; ದಯಾಮರಣಕ್ಕೆ ವ್ಯಕ್ತಿ ಮನವಿ

ಮೈಸೂರು, ನ. 22- ಮಹಿಳೆಯೊಬ್ಬರು ತನ್ನಿಂದ ಪಡೆದಿದ್ದ ಸಾಲವನ್ನು ಹಿಂತಿರುಗಿಸದೇ ಇರುವ ಕಾರಣದಿಂದ ತನಗೆ ದಯಾಮರಣಕ್ಕೆ ಅನುಮತಿ ನೀಡಬೇಕೆಂದು ವ್ಯಕ್ತಿಯೊಬ್ಬರು ಮೈಸೂರು ನಗರ ಪೊಲೀಸ್ ಆಯುಕ್ತರಿಗೆ ಮನವಿ ಸಲ್ಲಿಸಿದ್ದಾರೆ. ಮೈಸೂರಿನ ರಾಮಕೃಷ್ಣನಗರ ಇ ಅಂಡ್ ಎಫ್ ಬ್ಲಾಕ್ ನಿವಾಸಿ ಜಿ.ಕೆ.ಗುರುಬಸವರಾಜಯ್ಯ(58), ದಯಾಮರಣಕ್ಕೆ ಅರ್ಜಿ ಸಲ್ಲಿಸಿದವರಾಗಿದ್ದು, ತನ್ನಿಂದ ಲಕ್ಷ್ಮಿ ಎಂಬಾಕೆ 2022ರ ಫೆಬ್ರವರಿ ತಿಂಗಳಿನಲ್ಲಿ 50 ಸಾವಿರ ರೂ. ಸಾಲ ಪಡೆದು ಚೆಕ್ ನೀಡಿದ್ದಳು. ಆಕೆ ಸಾಲ ಹಿಂತಿರುಗಿಸದಿದ್ದಾಗ ನಾನು ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದು, ಈ ಹಿನ್ನೆಲೆಯಲ್ಲಿ ಅಲ್ಲಿಗೆ ಆಗಮಿಸಿದ ಚಿರಂಜೀವಿ ಎಂಬಾತ, ತನ್ನ ಚಿಕ್ಕಮ್ಮ ಲಕ್ಷ್ಮಿ ತನ್ನ ಚೆಕ್ ಅನ್ನು ನೀಡಿ ಸಾಲ ಪಡೆದಿದ್ದಾಳೆ. ಆಕೆಯ ಸಾಲವನ್ನು ನಾನು ತೀರಿಸುತ್ತೇನೆ ಎಂದು 2 ತಿಂಗಳ ಕಾಲಾವಕಾಶ ಕೇಳಿ ಹೊಸ ಚೆಕ್ ಅನ್ನು ಕೊಟ್ಟು ಹೋಗಿದ್ದ. ಆದರೆ ಈವರೆಗೂ ತನಗೆ ಸಾಲ ಮರುಪಾವತಿಯಾಗದ ಕಾರಣ ದಯಾಮರಣಕ್ಕೆ ಅನುಮತಿ ನೀಡಬೇಕೆಂದು ಪೊಲೀಸ್ ಆಯುಕ್ತರಿಗೆ ಸಲ್ಲಿಸಿರುವ ಮನವಿಯಲ್ಲಿ ಕೋರಿದ್ದಾರೆ.

ಗಂಭೀರ ಅಪರಾಧ ಹಿನ್ನೆಲೆ

ಕಾಂಗ್ರೆಸ್ ಮುಖಂಡ ಎಂ.ಕೆ.ಅಶೋಕ್‌ಗೆ ನೀಡಲಾಗಿದ್ದ ಕನ್ನಡ ರಾಜ್ಯೋತ್ಸವ ಪುರಸ್ಕಾರ ವಾಪಸ್ ಪಡೆದ ಮೈಸೂರು ಜಿಲ್ಲಾಡಳಿತ



ಮೈಸೂರು, ನ.22-ಕಾಂಗ್ರೆಸ್ ಮುಖಂಡ ಹಾಗೂ ಜನನಿ ಸೇವಾ ಟ್ರಸ್ಟ್‌ನ ಎಂ.ಕೆ.ಅಶೋಕ್ ಅವರಿಗೆ ಸಮಾಜ ಸೇವಾ ಕ್ಷೇತ್ರದಲ್ಲಿನ ಸಾಧನೆಗಾಗಿ ನೀಡಲಾಗಿದ್ದ ಜಿಲ್ಲಾ ಕನ್ನಡ ರಾಜ್ಯೋತ್ಸವ ಪುರಸ್ಕಾರವನ್ನು ಹಿಂಪಡೆದಿರುವುದಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರೂ ಆದ ಸನ್ಮಾನ ಉಪ ಸಮಿತಿಯ ಸದಸ್ಯ ಕಾರ್ಯದರ್ಶಿ ಡಾ.ಎಂ.ಡಿ.ಸುದರ್ಶನ್ ತಿಳಿಸಿದ್ದಾರೆ.

ಕನ್ನಡ ರಾಜ್ಯೋತ್ಸವದ ಅಂಗವಾಗಿ ಜಿಲ್ಲಾ ಮಟ್ಟದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ 50 ಗೌರವಾನ್ವಿತರನ್ನು ಈ ಬಾರಿ ಪುರಸ್ಕರಿಸಿ ಸನ್ಮಾನಿಸಲು ಅಕ್ಟೋಬರ್ 30ರಂದು ನಡೆದ ಜಿಲ್ಲಾ ಮಟ್ಟದ ಸನ್ಮಾನ ಉಪ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿತ್ತು.

> "ಕೊತ್ವಾಲನ (ಕು)ಖ್ಯಾತಿ ಶಿಷ್ಯರು ಅಧಿಕಾರದಲ್ಲಿದ್ದರೆ ಏನಾಗುತ್ತದೆ ಎಂಬುದಕ್ಕೆ ಈ ಘಟನೆಯೇ ನಿದರ್ಶನ. ಈತ ರೌಡಿಶೀಟರ್ ಎಂದು ಗೊತ್ತಿದ್ದೂ ಸಹ ರಾಜ್ಯೋತ್ಸವ ಕೊಟ್ಟಿದ್ದು ಯಾರ ಒತ್ತಡದ ಮೇರೆಗೆ ಎಂದು ಜಿಲ್ಲಾಡಳಿತ ಬಹಿರಂಗಪಡಿಸಲಿ... ಪ್ರಶಸ್ತಿಯ ಪಾವಿತ್ರ್ಯತೆ ಹಾಳು ಮಾಡಿದ ಜಿಲ್ಲಾಡಳಿತ, ಹಾಗೂ ಕೆಲ ಪಟ್ಟಭದ್ರ ಹಿತಾಸಕ್ತಿಗಳು "ಸಾಂಸ್ಕೃತಿಕ ನಗರಿ"ಯನ್ನು ಅಸಂಸ್ಕೃತರ ತವರೂರಾಗಿ ಮಾಡಲು ಹೊರಟಿರುವುದು ರಾಜ್ಯದ ದುರಂತ.
>
> -ಎಕ್ಸ್‌ನಲ್ಲಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಪೋಸ್ಟ್.

ಆದರೆ ಕಾಲಾವಕಾಶದ ಕೊರತೆಯಿಂದ ಸನ್ಮಾನಿತರ ಅಪರಾಧ ಹಿನ್ನೆಲೆ ಕುರಿತು ಪೊಲೀಸ್ ಇಲಾಖೆಯಿಂದ ಮಾಹಿತಿ ಪಡೆಯಲು ಸಾಧ್ಯವಾಗದೇ ಆಯ್ಕೆ ಪಟ್ಟಿ ಪ್ರಕಟಿಸಿ ಗೌರವಾನ್ವಿತರನ್ನು ನವೆಂಬರ್ 1ರಂದು ಸನ್ಮಾನಿಸಲಾಗಿತ್ತು ಎಂದು ಅವರು ತಿಳಿಸಿದ್ದಾರೆ.

ಈ ಆಯ್ಕೆ ಪಟ್ಟಿಯಂತೆ ಸಮಾಜ ಸೇವಾ ಕ್ಷೇತ್ರದಲ್ಲಿ ಪುರಸ್ಕರಿಸಿ ಸನ್ಮಾನಿಸಲ್ಪಟ್ಟ ಜನನಿ ಸೇವಾ ಟ್ರಸ್ಟ್‌ನ ಎಂ.ಕೆ.ಅಶೋಕ ಅವರ ವಿರುದ್ಧ ಲಷ್ಕರ್ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ 54/16 ಹಾಗೂ ದೇವರಾಜ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ 215/08ರಂತೆ ಅಪರಾಧ ಪ್ರಕರಣಗಳು ದಾಖಲಾಗಿರುವ ಕುರಿತು ಪೊಲೀಸ್ ಇಲಾಖೆಯಿಂದ ಮಾಹಿತಿ ಸ್ವೀಕೃತವಾದ ಹಿನ್ನೆಲೆಯಲ್ಲಿ ಎಂ.ಕೆ.ಅಶೋಕ ಜಿಲ್ಲಾ ಕನ್ನಡ ರಾಜ್ಯೋತ್ಸವ ಪುರಸ್ಕಾರಕ್ಕೆ ಅರ್ಹರಲ್ಲದ ಕಾರಣ ನ.1ರಂದು ಅವರಿಗೆ ಪ್ರದಾನ ಮಾಡಲಾಗಿದ್ದ ಜಿಲ್ಲಾ ಕನ್ನಡ ರಾಜ್ಯೋತ್ಸವ ಪುರಸ್ಕಾರವನ್ನು ಜಿಲ್ಲಾಡಳಿತ ವಾಪಸ್ ಪಡೆದುಕೊಂಡಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ಭಾರತ-ಆಸ್ಟ್ರೇಲಿಯಾ ಟಿ20 ಸರಣಿ

ವಿಶಾಖಪಟ್ಟಣಂ: ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ 5 ಪಂದ್ಯಗಳ ಟಿ20 ಸರಣಿ ಮೊದಲ ಪಂದ್ಯ ನ.23ರಂದು ವಿಶಾಖಪಟ್ಟಣಂ ಮೈದಾನದಲ್ಲಿ ನಡೆಯಲಿದೆ.

2023ರ ಏಕದಿನ ವಿಶ್ವಕಪ್ ಫೈನಲ್ ಬಳಿಕ ಉಭಯ ತಂಡಗಳು ಮುಖಾಮುಖಿಯಾಗಿದ್ದು, ಫೈನಲ್ ಸೋಲಿನ ಸೇಡು ತೀರಿಸಿಕೊಳ್ಳುವ ಇರಾದೆ ಯೊಂದಿಗೆ ಟೀಂ ಇಂಡಿಯಾ ಅಖಾಡಕ್ಕಿಳಿಯಲ್ಲಿದೆ.

ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಮತ್ತು ಜಸ್ಪ್ರೀತ್ ಬುಮ್ರಾ ಅವರಂತಹ ಸ್ಟಾರ್ ಆಟಗಾರರಿಗೆ ಭಾರತ ತಂಡದಿಂದ ವಿಶ್ರಾಂತಿ ನೀಡಲಾಗಿದ್ದು, ಹಲವು ಯುವ ಆಟಗಾರರಿಗೆ ಅವಕಾಶ ಮಾಡಿಕೊಡಲಾಗಿದೆ. ತಂಡದ ನಾಯಕತ್ವವನ್ನು ಸೂರ್ಯಕುಮಾರ್ ಯಾದವ್ ಅವರಿಗೆ ನೀಡಲಾಗಿದ್ದು, ಏಕದಿನ ವಿಶ್ವಕಪ್‌ನಲ್ಲಿ ಅಟ್ಟರ್ ಫ್ಲಾಪ್ ಆಗಿದ್ದ ಸೂರ್ಯ ಯಾವ ರೀತಿ ತಂಡವನ್ನು ಮುನ್ನಡೆಸುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ.

ಬ್ಯಾಟ್ಸ್‌ಮನ್‌ಗಳಿಗೆ ಹೆಚ್ಚು ಸಹಕಾರಿ: ವಿಶಾಖಪಟ್ಟಣಂ ಮೈದಾನದ ಪಿಚ್ ಯಾವಾಗಲೂ ಬ್ಯಾಟ್ಸ್‌ಮನ್‌ಗಳ ಸ್ವರ್ಗ ಎಂದು ಪರಿಗಣಿಸಲ್ಪಟ್ಟಿದೆ. ಇಲ್ಲಿ ಬ್ಯಾಟ್ಸ್‌ಮನ್‌ಗಳು ಸಾಕಷ್ಟು ರನ್ ಗಳಿಸುತ್ತಾರೆ. ಹೀಗಿರುವಾಗ ಭಾರತ-ಆಸ್ಟ್ರೇಲಿಯಾ ನಡುವಿನ ಮೊದಲ ಟಿ20 ಪಂದ್ಯದಲ್ಲಿ ಹೆಚ್ಚಿನ ಸ್ಕೋರಿಂಗ್ ಕಾಣಬಹುದಾಗಿದೆ. ಎರಡೂ ತಂಡಗಳು ಅಂತಹ ಆಟಗಾರರನ್ನು



ಹೊಂದಿದ್ದು, ಕೆಲವೇ ಎಸೆತಗಳಲ್ಲಿ ಪಂದ್ಯದ ಗತಿಯನ್ನೇ ಬದಲಿಸಬಲ್ಲ ಸಾಮರ್ಥ್ಯವನ್ನು ಉಭಯ ತಂಡಗಳ ಆಟಗಾರರು ಹೊಂದಿದ್ದಾರೆ.

ಪ್ರಭಾವ ಬೀರಲಿದೆ ಟಾಸ್: ವಿಶಾಖಪಟ್ಟಣಂ ಮೈದಾನದಲ್ಲಿ ಇದುವರೆಗೆ ಮೂರು ಟಿ20 ಪಂದ್ಯಗಳು ನಡೆದಿದ್ದು, ಅದರಲ್ಲಿ ಭಾರತ 2ರಲ್ಲಿ ಜಯ ಸಾಧಿಸಿದೆ. ಈ ಮೈದಾನದಲ್ಲಿ ಗುರಿ ಬೆನ್ನಟ್ಟಿದ ತಂಡ ಎರಡು ಬಾರಿ ಗೆದ್ದಿದೆ. ಅಂತಹ ಪರಿಸ್ಥಿತಿಯಲ್ಲಿ, ಟಾಸ್ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಯಾವ ನಾಯಕ ಟಾಸ್ ಗೆಲ್ಲುತ್ತಾನೋ ಆತ ಮೊದಲು ಬೌಲ್ ಮಾಡುವ ಸಾಧ್ಯತೆಗಳು ಹೆಚ್ಚಿವೆ. 2016ರಲ್ಲಿ ಭಾರತ ತನ್ನ ಮೊದಲ ಟಿ20ಐ ಪಂದ್ಯವನ್ನು ಇಲ್ಲಿ ಆಡಿತ್ತು. ಆಗ ಭಾರತ ಶ್ರೀಲಂಕಾವನ್ನು 9 ವಿಕೆಟ್‌ಗಳಿಂದ ಸೋಲಿಸಿತ್ತು.

ಮುಖಾಮುಖಿ ವರದಿ: ಇಲ್ಲಿವರೆಗೆ, ಟಿ20 ಕ್ರಿಕೆಟ್‌ನಲ್ಲಿ ಭಾರತ ಮತ್ತು ಆಸ್ಟ್ರೇಲಿಯಾ ನಡುವೆ 26 ಪಂದ್ಯಗಳು ನಡೆದಿವೆ. ಇದರಲ್ಲಿ ಭಾರತ 15 ಪಂದ್ಯಗಳನ್ನು ಗೆದ್ದಿದ್ದರೆ, ಆಸ್ಟ್ರೇಲಿಯಾ 10 ಪಂದ್ಯಗಳನ್ನು ಗೆದ್ದಿದೆ. ಒಂದು ಪಂದ್ಯ ಫಲಿತಾಂಶವಿಲ್ಲದೆ ಕೊನೆಗೊಂಡಿದೆ. ಇನ್ನು ಭಾರತ ತವರಿನಲ್ಲಿ ಆಸ್ಟ್ರೇಲಿಯಾ ವಿರುದ್ಧ 10 ಟಿ20 ಪಂದ್ಯಗಳನ್ನು ಆಡಿದ್ದು, ಅದರಲ್ಲಿ 6 ಪಂದ್ಯಗಳನ್ನು ಗೆದ್ದಿದ್ದರೆ, ಆಸ್ಟ್ರೇಲಿಯಾ 4 ಪಂದ್ಯಗಳನ್ನು ಗೆದ್ದಿದೆ.

ಹವಾಮಾನ ವರದಿ: ಅಕ್ಯುವೆದರ್ ಪ್ರಕಾರ ನವೆಂಬರ್ 23ರಂದು ವಿಶಾಖಪಟ್ಟಣದಲ್ಲಿ ಶೇ.60ರಷ್ಟು ಮಳೆಯಾಗುವ ಸಾಧ್ಯತೆ ಇದೆ. ಸಂಜೆ 7ರಿಂದ 10:30ವರೆಗೆ ಆಟದ ಸಮಯದಲ್ಲಿ ಮೋಡ ಕವಿದ ವಾತಾವರಣವಿರಲಿದ್ದು, ಆಟ ಪ್ರಾರಂಭವಾಗುವ ಮೊದಲು ತುಂತುರು ಮಳೆಯಾಗುವ ನಿರೀಕ್ಷೆಯಿದೆ ಎಂದು ವರದಿಯಾಗಿದೆ.

ಉಭಯ ತಂಡಗಳು

ಆಸ್ಟ್ರೇಲಿಯಾ: ಮ್ಯಾಥ್ಯೂ ವೇಡ್ (ನಾಯಕ), ಆರನ್ ಹಾರ್ಡಿ, ಜೇಸನ್ ಬೆಹ್ರೆನ್‌ಡಾರ್ಫ್, ಸೀನ್ ಅಬಾಟ್, ಟಿಮ್ ಡೇವಿಡ್, ನಾಥನ್ ಎಲ್ಲಿಸ್, ಟ್ರಾವಿಸ್ ಹೆಡ್, ಜೋಶ್ ಇಂಗ್ಲಿಸ್, ಗ್ಲೆನ್ ಮ್ಯಾಕ್ಸ್‌ವೆಲ್, ತನ್ವಿರ್ ಸಂಘ, ಮ್ಯಾಟ್ ಶಾರ್ಟ್, ಸ್ಟೀವ್ ಸ್ಮಿತ್, ಮಾರ್ಕಸ್ ಸ್ಟೊಯಿನಿಸ್, ಕೇನ್ ರಿಚರ್ಡ್‌ಸನ್, ಆಡಮ್ ಝಂಪಾ.

ಭಾರತ: ಸೂರ್ಯಕುಮಾರ್ ಯಾದವ್ (ನಾಯಕ), ರುತುರಾಜ್ ಗಾಯಕ್ವಾಡ್ (ಉಪ ನಾಯಕ), ಇಶಾನ್ ಕಿಶನ್, ಯಶಸ್ವಿ ಜೈಸ್ವಾಲ್, ತಿಲಕ್ ವರ್ಮಾ, ರಿಂಕು ಸಿಂಗ್, ಜಿತೇಶ್ ಶರ್ಮಾ (ವಿಕೆಟ್ ಕೀಪರ್), ವಾಷಿಂಗ್ಟನ್ ಸುಂದರ್, ಅಕ್ಷರ್ ಪಟೇಲ್, ಶಿವಂ ದುಬೆ, ರವಿ ಬಿಷ್ಣೋಯ್, ಅರ್ಷ್ದೀಪ್ ಸಿಂಗ್, ಪ್ರಸಿದ್ ಕೃಷ್ಣ, ಅವೇಶ್ ಖಾನ್, ಮುಖೇಶ್ ಕುಮಾರ್.

ನಕ್ಕರೆ ಅದೇ ಸ್ವರ್ಗ

ಆತ : (ಪರಿಚಯವಿಲ್ಲದ ಹುಡುಗಿಯರೊಂದಿಗೆ ಮಾತನಾಡುವ ಖಯಾಲಿ ಬಸ್ ನಿಲ್ದಾಣದಲ್ಲಿ ಓರ್ವ ಹುಡುಗಿಗೆ) "ನಿಮ್ಮನ್ನು ಎಲ್ಲೋ ನೋಡಿದ ನೆನಪು"

ಆಕೆ : "ಇರಬಹುದು ನಾನು ಮೆಂಟಲ್ ಆಸ್ಪತ್ರೆಯಲ್ಲಿ ನರ್ಸ್"

ಮೈಸೂರು ಮಿತ್ರ

ಗುರುವಾರ, 23 ನವೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಹೃದಯ ವೈಶಾಲ್ಯವೇ ಉನ್ನತಿಯ ಮಾರ್ಗ.

–ಜವಾಹರಲಾಲ್ ನೆಹರೂ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನೀರೊಳಗೆ ಎಮ್ಮೆ ಮುಳುಗಿಸಿ ವ್ಯಾಪಾರ ಮಾಡಿದಂತೆ

ನಿಮ್ಮ ಪತ್ರಗಳು

ಜಾತಿ ಗಣತಿಗೆ ವಿರೋಧ, ಡಿಕೆಶಿ ಮರ್ಮವೇನು?

ಮಾನ್ಯರೆ.

ಕಾಂತರಾಜು ನೇತೃತ್ವದ ಆಯೋಗ ಸಿದ್ಧಪಡಿಸಿರುವ ಜಾತಿ ಗಣತಿಯ ವರದಿಯನ್ನು ಸ್ವೀಕರಿಸಿಯೇ ತೀರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುತ್ತಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನಮ್ಮ ಸರ್ಕಾರ ಬಂದರೆ ಜಾತಿ ಗಣತಿ ಮಾಡುತ್ತೇವೆ. ಜಾತಿ ಗಣತಿ ಎಕ್ಸ್–ರೇ ಇದ್ದಂತೆ ಎನ್ನುತ್ತಾರೆ. ಈ ವಿಷಯವಾಗಿ ಪಕ್ಷದ ನಿಲುವಿಗೆ ವಿರೋಧವಾಗಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಿಂತಿರುವ ಮರ್ಮವಾದರು ಏನು? ಸಮುದಾಯದ ನಿಲುವಿಗೆ ಅಂಟಿಕೊಂಡಿದ್ದಾರೆಯೇ? ಅಥವಾ ಸ್ವಾಮೀಜಿಯವರ ಮಾತಿಗೆ ಮಣೆ ಹಾಕಿದ್ದಾರೆಯೇ ಎಂಬುದೇ ಯಕ್ಷ ಪ್ರಶ್ನೆ. ಒಟ್ಟಾರೆಯಾಗಿ ಸರ್ಕಾರ ಮತ್ತು ಪಕ್ಷದ ನಾಯಕರು ತೆಗೆದುಕೊಂಡಿರುವ ನಿರ್ಧಾರವನ್ನು ಏಕೆ ವಿರೋಧಿಸುತ್ತಿದ್ದಾರೆ ಎಂಬುದನ್ನು ಡಿಕೆಶಿಯವರೇ ಸ್ಪಷ್ಟಪಡಿಸಬೇಕು. ಲಕ್ಷಾಂತರ ರೂಪಾಯಿ ವ್ಯಯಿಸಿ ಸಿದ್ಧಪಡಿಸಿರುವ ವರದಿ ಸ್ವೀಕರಿಸುವ ಮುನ್ನವೇ ಒಂದು ಸಮುದಾಯದ ವಿರೋಧವಾದರೂ ಏಕೆ. ಜಾತಿ ನಿಲುವಿಗೆ ಅಂಟಿಕೊಂಡು ದಲಿತ, ಮುಸ್ಲಿಂ ಸಮುದಾಯದ ವಿರೋಧ ಕಟ್ಟಿ ಕಟ್ಟಿಕೊಳ್ಳುವರೇ ಕಾದು ನೋಡಬೇಕಿದೆ. ಮುಖ್ಯಮಂತ್ರಿ ಕುರ್ಚಿಯ ನಿರೀಕ್ಷೆಯಲ್ಲಿರುವ ಇವರಿಗೆ ವರದಿಯೇ ಮುಳುವಾಗುವುದೇ?

–ದಡದಹಳ್ಳಿ ರಮೇಶ್, ಚಂದಕವಾಡಿ, ಚಾಮರಾಜನಗರ ಜಿಲ್ಲೆ.

ಸಚಿವ ಕೃಷ್ಣಭೈರೇಗೌಡರ ಮಾದರಿ ನಡೆ

ಮಾನ್ಯರೆ,

ಇತ್ತೀಚೆಗೆ ಕಂದಾಯ ಸಚಿವ ಕೃಷ್ಣ ಭೈರೇಗೌಡರು ಬೆಂಗಳೂರು ಮೆಟ್ರೋದಲ್ಲಿ ಸಾರ್ವಜನಿಕರೊಂದಿಗೆ ಪ್ರಯಾಣ ಮಾಡಿದ್ದು ಜನಪ್ರತಿನಿಧಿಯೊಬ್ಬರ ಮಾದರಿ ನಡೆಯಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಕೂಡ ದೆಹಲಿ ಮೆಟ್ರೋದಲ್ಲಿ ಸಾಕಷ್ಟು ಬಾರಿ ಪ್ರಯಾಣ ಮಾಡಿರುವುದನ್ನು ನಾವು ಹಲವು ಬಾರಿ ಓದಿದ್ದೇವೆ. ನಮ್ಮ ದೇಶದಲ್ಲಿ ಇಂದಿಗೂ ವಿಐಪಿ ಸಂಸ್ಕೃತಿ ಜೀವಂತವಾಗಿದೆ. ಈ ನಿಟ್ಟಿನಲ್ಲಿ ಕೃಷ್ಣ ಬೈರೇಗೌಡರ ನಡೆ ಇತರೆ ಜನಪ್ರತಿನಿಧಿಗಳು, ಅಧಿಕಾರಿ ವರ್ಗದವರೂ ಅನುಸರಿಸುವಂತಾಗಲಿ. ನೆದರ್‌ಲ್ಯಾಂಡ್ ಪ್ರಧಾನಿ, ಕಚೇರಿಗೆ ಹೋಗುವಾಗಲು ಬೈಸಿಕಲ್ ಬಳಸುತ್ತಾರೆ. ಈ ಹಿಂದೆ ಮೈಸೂರು ಜಿಲ್ಲಾಧಿಕಾರಿಯಾಗಿದ್ದ ಪಿ.ಎಸ್. ವಸ್ತ್ರದ್ ಅವರು ವಾರದಲ್ಲಿ ಒಂದು ದಿನ ಬೈಸಿಕಲ್‌ನಲ್ಲಿ ಕಚೇರಿಗೆ ಬರುತ್ತಿದ್ದರು ಹಾಗೂ ಇತರರೂ ಅನುಸರಿಸುವಂತೆ ಸೂಚಿಸಿದ್ದರು. ಇತ್ತೀಚಿನ ದಿನಗಳಲ್ಲಿ ಅತಿಯಾದ ವಾಹನಗಳ ಬಳಕೆಯಿಂದಾಗಿ ಬೆಂಗಳೂರು ಸೇರಿದಂತೆ ಇತರೆ ನಗರಗಳಲ್ಲಿ ವಾಹನ ದಟ್ಟಣೆ, ಸುಗಮ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಮತ್ತು ವಾಯು ಮಾಲಿನ್ಯವೂ ಉಂಟಾಗುತ್ತಿದೆ. ಈ ನಿಟ್ಟಿನಲ್ಲಿ ಸಾರ್ವಜನಿಕ ಸಾರಿಗೆ, ಮೆಟ್ರೋ ಹಾಗೂ ಬೈಸಿಕಲ್ ಬಳಕೆಯಿಂದ ಹಲವು ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ.

–ಪ್ರಸಾದ್ ಜಿ.ಎಂ, ಮೈಸೂರು

ಪೇಪರ್ ಸುಬ್ಬಣ್ಣ–ಒಂದು ನೆನಪು

ಮಾನ್ಯರೆ,



ನಮ್ಮ ಐದು ದಶಕಗಳ ಕಾಲದ ಆಪ್ತ ಸ್ನೇಹಿತರಾದ (ಪೇಪರ್ ಸುಬ್ಬಣ್ಣ) ಎಂ.ಆರ್. ಸುಬ್ರಹ್ಮಣ್ಯನವರು ನಿಧನರಾದ ಸುದ್ದಿ ತಿಳಿದು ತುಂಬಾ ದುಃಖವಾಯಿತು. ಲ್ಯಾನ್ಸ್‌ಡೌನ್ ಕಟ್ಟಡದಲ್ಲಿ ತಮ್ಮ ಮಗಳು ನಾಗಶ್ರೀ ಹೆಸರಿನಲ್ಲಿ ಪುಸ್ತಕದ ಮಳಿಗೆ ಪ್ರಾರಂಭಿಸಿ ಸುಮಾರು ವರ್ಷಗಳ ಕಾಲ ವ್ಯಾಪಾರ ಮಾಡಿ, ಪತ್ರಿಕಾ ವರದಿಗಾರರಾಗಿಯೂ ಸೇವೆ ಸಲ್ಲಿಸಿದ ಸುಬ್ಬಣ್ಣನವರ ಆತ್ಮಕ್ಕೆ ಶಾಂತಿ ಕೋರುತ್ತಾ, ಅವರ ಕುಟುಂಬ ವರ್ಗದವರಿಗೆ ದುಃಖ ಮರೆಯುವ ಶಕ್ತಿ ಕೊಡಲೆಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.

–ಬಿ. ಚಾಮರಾಜ ಅರಸ್, ವಿ. ರಂಗರಾಜನ್, ಮೈಸೂರು.

ಎಲ್‌ಐಸಿ ತಾತ್ಕಾಲಿಕ ಉದ್ಯೋಗಿಗಳಿಗೆ ಶೀಘ್ರ ಪರಿಹಾರಕ್ಕೆ ಮನವಿ

ಮಾನ್ಯರೆ,

ಎಲ್‌ಐಸಿ ಆಡಳಿತ ವರ್ಗದವರು 1986 ರಿಂದ ಡಿಸೆಂಬರ್ 1995ರ ಅವಧಿಯಲ್ಲಿ ನಮ್ಮನ್ನು ತಾತ್ಕಾಲಿಕ ಉದ್ಯೋಗಿಗಳ ಹುದ್ದೆಗೆ ನೇಮಕ ಮಾಡಿಕೊಂಡಿದ್ದರು. ನಾವುಗಳು ಕಷ್ಟಪಟ್ಟು ದುಡಿದಿದ್ದರೂ ಸಹಿತ ಖಾಯಂ ಉದ್ಯೋಗಿಗಳು ಪಡೆಯುವ ಸವಲತ್ತುಗಳು ಹಾಗೂ ಸಂಬಳಕ್ಕಿಂತಲೂ ಕಡಿಮೆ ಪಡೆಯುತ್ತಿದ್ದೇವೆ. ಕೆಲಸದ ಸಮಯದಲ್ಲಿ ಒಂದು ವೇಳೆ 90 ದಿನಗಳು ಸೇವೆಯನ್ನು ಪೂರೈಸಿದರೆ ನಮ್ಮನ್ನು ಖಾಯಂಗೊಳಿಸಬೇಕಾಗುತ್ತದೆ ಎಂದು ಆಲೋಚಿಸಿ ಎಲ್‌ಐಸಿ ಆಡಳಿತ ವರ್ಗದವರು ಅವಧಿಗೆ ಮೊದಲೇ ನಮ್ಮನ್ನು ಸೇವೆಯಿಂದ ಬಿಡುಗಡೆಗೊಳಿಸಿ, ನಂತರ ಮಾರನೆಯ ದಿನಾಂಕವನ್ನು ನಮೂದಿಸಿ ನಮ್ಮನ್ನು ನೇಮಕ ಮಾಡಿ ಮತ್ತೆ ಕೆಲವು ತಿಂಗಳುಗಳ ನಂತರ ನಮ್ಮನ್ನು ಸೇವೆಯಿಂದ ಬಿಡುಗಡೆಗೊಳಿಸುತ್ತಿದ್ದಾರೆ.

ನಮ್ಮಲ್ಲಿ ಬಹಳಷ್ಟು ಮಂದಿ ನಿವೃತ್ತಿ ವಯಸ್ಸನ್ನು ದಾಟಿದ್ದಾರೆ. ಹಾಗೂ ಕೆಲವರು ಹತ್ತಿರದಲ್ಲಿದ್ದಾರೆ. ನಮಗೆ ದಿನನಿತ್ಯದ ಜೀವನ ನಡೆಸಲು ಕಷ್ಟವಾಗಿದೆ. ಹಾಗೂ ದಿನನಿತ್ಯದ ಔಷಧಿಗಳನ್ನು ಖರೀದಿಸಲು ಕಷ್ಟವಾಗಿದೆ. ಸಿಜಿಐಟಿಯ ನ್ಯಾಯಮೂರ್ತಿಗಳು ದಾವೆ ಸಂಖ್ಯೆ 27/1991 ಮತ್ತು ಪಾರ್ಟಿ ಸಂಖ್ಯೆ 7ರ ಅಡಿಯಲ್ಲಿ ನಮ್ಮ ಭವಿಷ್ಯದ ಜೀವನವನ್ನು ಅವಲೋಕಿಸಿ ನಮ್ಮ ಪರವಾಗಿ ತೀರ್ಪು ನೀಡಿದ್ದಾರೆ. ಹೀಗಿದ್ದೂ 36 ವರ್ಷಗಳ ದೀರ್ಘಾವಧಿಯ ನಂತರ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳೂ ಸಹಾ ನಮ್ಮ ಭವಿಷ್ಯದ ಜೀವನವನ್ನು ಅವಲೋಕಿಸಿ 2022ರಲ್ಲಿ ಡಿಸೆಂಬರ್ ಒಳಗಾಗಿ ಸೂಕ್ತ ಪರಿಹಾರವನ್ನು ನೀಡಬೇಕೆಂದು ತೀರ್ಪಿನ ಮೂಲಕ ಆದೇಶಿಸಿದ್ದಾರೆ. ಆದರೆ ವಿಷಾದದ ಸಂಗತಿಯೇನೆಂದರೆ ಡಿಸೆಂಬರ್ 22 ರಿಂದ 10 ತಿಂಗಳು ಕಳೆದರೂ ಎಲ್‌ಐಸಿ ಆಡಳಿತ ವರ್ಗದವರು ಪರಿಹಾರ ನೀಡುವ ದಿನಾಂಕವನ್ನು ತಿಳಿಸಿರುವುದಿಲ್ಲ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಅಧಿಕಾರಿಗಳು ಸೂಕ್ತ ಪರಿಹಾರವನ್ನು ನೀಡುವಂತೆ ಎಲ್‌ಐಸಿ ಆಡಳಿತ ವರ್ಗದವರಿಗೆ ಶೀಘ್ರದಲ್ಲೇ ಸೂಚನೆ ನೀಡಬೇಕೆಂದು ತಮ್ಮಲ್ಲಿ ಮನವಿ. ಹಾಗೆಯೇ ಎಲ್‌ಐಸಿ ಆಡಳಿತ ವರ್ಗದವರು ನಮ್ಮ ಕಷ್ಟದ ಪರಿಸ್ಥಿತಿಯನ್ನು ಮನಗಂಡು ಸೂಕ್ತ ಪರಿಹಾರವನ್ನು ಸೇವೆಗೆ ಸೇರಿದ ದಿನಾಂಕದಿಂದ ನಿವೃತ್ತಿಯ ದಿನಾಂಕದವರೆಗಿನ ಆಧಾರದ ಮೇಲೆ ನೀಡಬೇಕೆಂದು ಕಳಕಳಿಯ ಮನವಿ.

– ಅಖಿಲ ಭಾರತ ಎಲ್‌ಐಸಿ ತಾತ್ಕಾಲಿಕ ಉದ್ಯೋಗಿಗಳು, ಮೈಸೂರು.

ದಿಕ್ಕುದೆಸೆ



ಕಾರ್ಕಳ ಆನಂದ ಭಟ್
ಮೊ : 7676554198
ಫ್ಲಾಟ್ ನಂ.204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, Opp. H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ, – 574 104 ಉಡುಪಿ ಜಿಲ್ಲೆ

ಅಮೂಲ್ಯ 'ಸಹಕಾರ'ದಿಂದ ಉದಯಿಸಿದ್ದೇ 'ಅಮೂಲ್'

ಭಾರತೀಯ ಸಮಾಜದಲ್ಲಿ ಕೌಟುಂಬಿಕ, ಪಾರಿವಾರಿಕ, ಸಾಮಾಜಿಕ ಜೀವನಗಳು ಸಹಕಾರ ತತ್ವದ ಆಧಾರದಲ್ಲಿ ರೂಪಿತವಾಗಿವೆ. ನಮ್ಮ ಪೂರ್ವಜರು ಸಹಕಾರ ತತ್ವದ ಕುರಿತು ಸಂಪೂರ್ಣ ಪರಿಜ್ಞಾನ ಹೊಂದಿದ್ದರು. ಋಗ್ವೇದದಲ್ಲಿ ಬರುವ **ಓಂ ಸಂಗಚ್ಛಧ್ವಂ ಸಂವದಧ್ವಂ ಸಂವೋ ಮನಾಂಸಿ ಜಾನತಾಮ್। ದೇವಾ ಭಾಗಂ ಯಥಾ ಪೂರ್ವೇ ಸಂ ಜಾನಾನಾ ಉಪಾಸತೆ....** ಅರ್ಥಾತ್ ಒಂದಾಗಿ ನಡೆಯಿರಿ. ಒಮ್ಮತದಿಂದ ಮಾತನಾಡಿರಿ. ನಿಮ್ಮ ಅಂತರಂಗದ ಭಾವನೆಗಳು ಒಂದೇ ರೀತಿ ಇರಲಿ. ಹೀಗೆ ದೇವತೆಗಳು ಪರಸ್ಪರ ಸಹಕಾರದಿಂದ ತಮ್ಮ ತಮ್ಮ ಪಾಲನ್ನು ಪಡೆದುಕೊಂಡಂತೆ ನೀವು ಒಟ್ಟಿಗೆ ಸಾಧನೆ ಮಾಡಿ, ನಿಮ್ಮ ಅಭೀಷ್ಟವನ್ನು ಈಡೇರಿಸಿಕೊಳ್ಳಿ...

ಸಂಕಲ್ಪಗಳು ಸಮಾನವಾಗಿರಲಿ, ಹೃದಯಗಳೂ ಒಂದಾಗಲಿ. ಮನಸ್ಸುಗಳು ಒಂದಾಗಲಿ. ಅಂತಹ ಪರಸ್ಪರ ಸಹಕಾರದಿಂದ ಕಾರ್ಯವು ಸುಗಮವಾಗಲಿ ಈ ರೀತಿ ಭಾರತೀಯರು ಸಹಕಾರದ ಮಹತ್ವ ಮತ್ತು ಅದರ ಆಂತರ್ಯವನ್ನು ಅರಿತು ಸಮೃದ್ಧ ಜೀವನವನ್ನು ನಡೆಸಿದ್ದರು.



ಆಧುನಿಕ ಜಗತ್ತಿನಲ್ಲಿ ಭಾರತದ ಜನಸಾಮಾನ್ಯರು ಸಹಕಾರ ತತ್ವದ ಮೂಲಕ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವ ಮೂಲಕ ಸಮೃದ್ಧ, ಸ್ವಾಭಿಮಾನಿ, ಸ್ವಾವಲಂಬಿ ಬದುಕನ್ನು ರೂಪಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಭಾರತದಲ್ಲಿ ಸಹಕಾರ ಚಳವಳಿ

ಬ್ರಿಟಿಷರ ಆಡಳಿತದಲ್ಲಿ ಭಾರತೀಯರ ಆರ್ಥಿಕ ಸಾಮಾಜಿಕ ಪರಿಸ್ಥಿತಿ ದಯನೀಯವಾಗಿತ್ತು. ಭೂಮಾಲೀಕರು, ಸರಕಾರಿ ಗುಮಾಸ್ತರು, ಸ್ಥಾನೀಯ ಲೇವಾದೇವಿಗರು, ಬ್ರಿಟಿಷರ ಶೋಷಣೆಗಳಿಂದ ಭಾರತೀಯರ ಸ್ವಾವಲಂಬಿ ಆರ್ಥಿಕ ವ್ಯವಸ್ಥೆ ನಾಶವಾಯಿತು. ರೈತರು ಸಾಲದ ಚಕ್ರವ್ಯೂಹದಲ್ಲಿ ಸಿಲುಕಿ ದಟ್ಟದರಿದ್ರರಾದರು. ಆ ಸಂದರ್ಭದಲ್ಲಿ ಬಡತನದಿಂದ ಬಳಲುತ್ತಿದ್ದ ಭಾರತದ ಗ್ರಾಮೀಣ ಜನತೆ ಸ್ವಲ್ಪವಾದರೂ ಹಣವನ್ನು ನೋಡಲು ಸಾಧ್ಯವಾದದ್ದು ಕ್ಷೀರ ಕ್ರಾಂತಿಯಿಂದ. ಕ್ಷೀರ ಕ್ರಾಂತಿಯಿಂದ ಮಹಿಳೆಯರು ಸ್ವಾವಲಂಬಿಗಳಾಗಲು ಮಕ್ಕಳು ಪೌಷ್ಟಿಕತೆ ಪಡೆಯಲು ಸಾಧ್ಯವಾಯಿತು. ಕ್ಷೀರೋದ್ಯಮವು ಸಹಕಾರ ಕ್ಷೇತ್ರದಲ್ಲಿ ಭಾರಿ ಪ್ರಮಾಣದಲ್ಲಿ ಪ್ರಗತಿ ಸಾಧಿಸಿತು. ಹಾಲು ಉತ್ಪಾದಕ ಸಹಕಾರ ಸಂಘಗಳಿಂದಾಗಿ ರೈತರ ಬಳಿ ಇದ್ದ ಹಸುಗಳು ಹಣವನ್ನು ತರುವ ಕಾಮಧೇನುಗಳಾದವು. ಆ ದಿನಗಳಲ್ಲಿ ಗುಜರಾತಿನ ಹೈನುಗಾರಿಕಾ ರೈತರು ಡಾ.ವರ್ಗೀಸ್ ಕುರಿಯನ್‌ರ ನೇತೃತ್ವದಲ್ಲಿ ಆರಂಭಿಸಿದ ಹಾಲು ಉತ್ಪಾದಕ ಸಂಘವು ದೇಶದಲ್ಲಿ ಕ್ಷೀರಕ್ರಾಂತಿ ತರುವಲ್ಲಿ ಯಶಸ್ವಿಯಾಯಿತು. ಈ ಕ್ಷೀರ ಕ್ರಾಂತಿಯನ್ನು ಸಾಧಿಸಿದ ಗುಜರಾತಿನ ಒಂದು ಸಣ್ಣ ಪಟ್ಟಣವಾದ ಆನಂದ ಇಂದು ಭಾರತದ ಹಾಲಿನ ರಾಜಧಾನಿ ಎನಿಸಿದೆ. ಕ್ಷೀರ ಕ್ರಾಂತಿಯನ್ನು ದೇಶಕ್ಕೆ ಪರಿಚಯಿಸಿದ ಡಾ. ಕುರಿಯನ್ ಮಿಲ್ಕ್ ಮ್ಯಾನ್ ಆಫ್ ಇಂಡಿಯಾ ಎಂದೆನಿಸಿದರು.

ಅಮೂಲ್‌ನ ಆರಂಭಿಕ ದಿನಗಳು

ಗುಜರಾತಿನಲ್ಲಿ ಹಾಲಿನ ವ್ಯಾಪಾರಿಗಳಿಂದ ನಿರಂತರ ಶೋಷಣೆಗಳಾಗಿದ್ದ ಗೋಪಾಲಕರು ಸರ್ದಾರ್ ಪಟೇಲರ ಬಳಿ ಸಹಾಯಕ್ಕಾಗಿ ಯಾಚಿಸಿದರು. 1942–43ರಲ್ಲಿ ಆನಂದ್‌ನ ಹಾಲಿನ ವ್ಯವಹಾರವನ್ನು ಪೆಸ್ತೋನಜೀ ಎಡುಲ್‌ಜೀ ಎನ್ನುವವರು ನಿಯಂತ್ರಿಸುತ್ತಿದ್ದರು. ಅವರು ಮುಂಬೈಗೆ ಕಳಿಸುತ್ತಿದ್ದ ಹಾಲು ದೋಷಯುಕ್ತವಾಗಿತ್ತು. ಈ ಕಾರಣದಿಂದ ಮುಂಬೈಗೆ ಉತ್ತಮ ಗುಣಮಟ್ಟದ ಹಾಲು ಬೇಕೆಂದಾಗ ಗುಜರಾತ್‌ನ ಕೈರಾ ಜಿಲ್ಲೆಯತ್ತ ಗಮನ ಹರಿಯಿತು. ಹಾಲಿನ ಬೇಡಿಕೆ ಹೆಚ್ಚಾದಾಗ ಕೈರಾ ಜಿಲ್ಲೆಯ ರೈತರು ಯಾವುದೇ ಸಹಕಾರ ಸಂಘ ಸಂಸ್ಥಾಪನೆಯ ಮೊದಲೇ ಹೆಚ್ಚು ಹಾಲು ಉತ್ಪಾದಿಸುವ ಜಿಲ್ಲೆ ಎಂಬ ಮನ್ನಣೆ ಗಳಿಸಿತು. ಆದರೆ ಹಾಲಿನ ವ್ಯವಹಾರದಲ್ಲಿ ತಮಗೆ ಸಿಗಬೇಕಾದ ಲಾಭವನ್ನು ಯಾರೋ ಬೇರೆಯವರು ಲಪಟಾಯಿಸುತ್ತಿದ್ದಾರೆಂದು ರೈತರು ಗಮನಿಸಿ ಸರ್ದಾರ್ ಪಟೇಲ್‌ರಿಗೆ ದೂರು ನೀಡಿದರು. ರೈತರು ಶೋಷಣೆಯಿಂದ ಮುಕ್ತರಾಗಲು ಅವರೇ ಹಾಲಿನ ಸಂಗ್ರಹ, ಸಂಸ್ಕರಣ ಮತ್ತು ಮಾರಾಟ ಮಾಡಬೇಕು ಎಂಬುದು ಪಟೇಲರ ಆಗ್ರಹವಾಗಿತ್ತು. ರೈತರೇ ಹಾಲಿನ ಸಹಕಾರ ಸಂಘಗಳ ಸ್ಥಾಪನೆಯಿಂದ ಈ ಸಮಸ್ಯೆ ನಿವಾರಿಸಿಕೊಳ್ಳಲು ಸಾಧ್ಯವೆಂದು ಪಟೇಲರು ಸೂಚಿಸಿದರು. ಅಲ್ಲಿಗೆ ಸುಮ್ಮನಾಗದೇ ಪಟೇಲರು ತಮ್ಮ ಸಹಕಾರಿ ಮೊರಾರ್ಜಿ ದೇಸಾಯಿಯವರಿಗೆ ಕಾರ್ಯದ ಸಂಯೋಜನೆ, ಸಮನ್ವಯ ಮಾಡಲು ಸೂಚಿಸಿದರು. ತಮ್ಮ ಇನ್ನೋರ್ವ ಅನುಯಾಯಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಸಮರ್ಪಣಾ ಮನೋಭಾವದ ತ್ರಿಭುವನ್‌ದಾಸ್ ಪಟೇಲರನ್ನು ಹೊಸ ಸಂಸ್ಥೆಯ ಅಧ್ಯಕ್ಷರನ್ನಾಗಿ ನೇಮಿಸಿದರು. ಈ ರೀತಿ ಬ್ರಿಟಿಷ್ ಸರಕಾರದ ಕೃಪೆ ಹೊಂದಿದ್ದ ಪೆಸ್ತೋನ ಜೀಯವರ ಪೋಲ್ಸನ್ ಡೈರಿಯ ವಿರುದ್ಧ ಹೋರಾಟಕ್ಕೆ ವೇದಿಕೆ ರಚಿಸಲಾಯಿತು. ಕೈರಾಗೆ ಸ್ವತಃ ಸರ್ದಾರ್ ವಲ್ಲಭಭಾಯ್ ಪಟೇಲರು ಭೇಟಿ ನೀಡಿ 'ಸಹಕಾರವನ್ನು ವಿಸ್ತರಿಸಿ' ಪೋಲ್ಸನ್ ತೊಲಗಿಸಿ ನೀವೇ ಮಾಲೀಕರಾಗಿ ಎಂದು ರೈತರಿಗೆ ಕರೆ ಕೊಟ್ಟರು. ಪೋಲ್ಸನ್ ವಿರುದ್ಧ ರೈತರು ಹೋರಾಟಕ್ಕೆ ಸಿದ್ಧರಾದರು. ಹೋರಾಟದ ನೇತೃತ್ವವನ್ನು ಮಾಜಿ ಪ್ರಧಾನಿ ದಿವಂಗತ ಮೊರಾರ್ಜಿ ದೇಸಾಯಿಯವರಿಗೆ ನೀಡಲಾಯಿತು. ಮೊರಾರ್ಜಿ ನೇತೃತ್ವದಲ್ಲಿ ಆನಂದ್‌ನ ಚಕ್ಲಾರ್ ಎಂಬಲ್ಲಿ ಸಭೆ ಸೇರಿದ ಹೈನುಗಾರಿಕಾ ರೈತರು ಪೋಲ್ಸನ್ ಡೈರಿಗೆ ಹಾಲು ಮಾರುವುದಿಲ್ಲ ಹಾಗೂ ಕೈರಾ ಜಿಲ್ಲೆಯ ಪ್ರತಿ ಗ್ರಾಮದಲ್ಲಿ ಒಂದೊಂದು ಸಹಕಾರಿ ಸಂಘ ರಚಿಸುತ್ತೇವೆ. ಇವುಗಳ ಯೂನಿಯನ್ ಕೈರಾದಲ್ಲಿದ್ದ ಹಾಲಿನ ವ್ಯವಹಾರದ ಮೇಲೆ ನಿಯಂತ್ರಣ ಸಾಧಿಸುವುದು ಎಂದು ಕೇವಲ ಎರಡು ನಿರ್ಣಯಗಳನ್ನು ಅಂಗೀಕರಿಸಲಾಯಿತು.

ರೈತರು ತಮ್ಮ ಹೋರಾಟ ಆರಂಭಿಸಿದರು. ಮುಂಬಯಿಯ ಬ್ರಿಟಿಷ್ ಹಾಲಿನ ಕಮಿಷನರ್‌ರವರು ಹಾಲನ್ನು ನೇರವಾಗಿ ರೈತರ ಸಹಕಾರಿ ಸಂಘಗಳಿಂದ ಖರೀದಿಸಬೇಕು. ಮಧ್ಯವರ್ತಿ ಪೋಲ್ಸನ್‌ರಿಂದ ಅಲ್ಲ ಎಂಬುದನ್ನು ಬ್ರಿಟಿಷ್ ಸರಕಾರ ಒಪ್ಪಲಿಲ್ಲ. ರೈತರು ಮುಷ್ಕರಕ್ಕಿಳಿದು ಸಂಗ್ರಹಿಸಿದ ಹಾಲನ್ನು ರಸ್ತೆಗೆ ಚೆಲ್ಲಿದರು. ಇದು ಕೈರಾ ಜಿಲ್ಲೆಯ 'ಹದಿನೈದು ದಿನಗಳ ಹಾಲಿನ ಮುಷ್ಕರ' ಎಂದು ಪ್ರಸಿದ್ಧವಾಗಿದೆ. ಪೋಲ್ಸನ್ ಡೈರಿಗೆ ಹನಿ ಹಾಲು ಸಿಗದೇ ಉತ್ಪಾದನೆ ಸ್ಥಗಿತಗೊಂಡಿತು. ಇದು ಕೈರಾ ಜಿಲ್ಲೆಯ ರೈತರ ಮೊದಲ ವಿಜಯವಾಗಿತ್ತು. ಪರಿಸ್ಥಿತಿಯ ತೀವ್ರತೆ ಅರಿತ ಮುಂಬೈ ಹಾಲಿನ ಕಮಿಷನರ್ ಹಾಗೂ ಅವರ ಡೆಪ್ಯೂಟಿ ಕೈರಾಗೆ ಭೇಟಿ ನೀಡಿದರು. ಕಮಿಷನರ್‌ರವರು ಗಾಂಧಿ ಟೋಪಿ ಧರಿಸಿದ್ದ ರೈತನಾಯಕ ತ್ರಿಭುವನ್ ದಾಸ್ ಪಟೇಲರನ್ನು ನೋಡಿ, ಇಂಗ್ಲಿಷ್ ಬರದ ಇವರಿಗೆ ಹಾಲಿನ ವ್ಯವಹಾರ ಮಾಡಲು ಸಾಧ್ಯವಾಗುವುದಿಲ್ಲ ಎಂದು ಭಾವಿಸಿದರು. ಹೀಗಾಗಿ ಇವರ ಆನಂದ್‌ನಲ್ಲಿರುವ ಸಹಕಾರ ಸಂಘಗಳು ಸೋಲುವುದು ನಿಶ್ಚಿತವೆಂದು ರೈತರ ಬೇಡಿಕೆಗಳಿಗೆ ಒಪ್ಪಿಗೆ ನೀಡಿದರು. ಈ ನಿರ್ಣಯ ಅಮೂಲ್‌ನ ಇತಿಹಾಸದಲ್ಲಿ ಮಹತ್ವದ ಮೈಲಿಗಲ್ಲಾಗಿದೆ.

ರೈತರ ಮುಷ್ಕರ ಫಲ ನೀಡಿತ್ತು. ತ್ರಿಭುವನ್ ದಾಸ್ ಪಟೇಲರು ಯೋಚಿಸಿದಂತೆ ರೈತರ ಪರ ನಿರ್ಣಯ ಬಂದಿತ್ತು. ಪಟೇಲರು ವರ್ಷವಿಡೀ ಬರಿಗಾಲಲ್ಲಿ ಊರೂರು ಸುತ್ತಿ ಕೈರಾ ಜಿಲ್ಲೆಯಲ್ಲಿ 1946ರ ಅಂತ್ಯಕ್ಕೆ ಐದು ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ನೋಂದಾಯಿಸಿದರು. ಈ ಮೂಲಕ ದಿ. 14.12.1946ರಲ್ಲಿ ಕೈರಾ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ಅಸ್ತಿತ್ವಕ್ಕೆ ಬಂದು, 'ಅಮೂಲ್' ಆರುಭವಾಯಿತು.

ಡಾ.ವರ್ಗೀಸ್ ಕುರಿಯನ್ 1949ರಲ್ಲಿ ಕೈರಾ ಹಾಲು ಉತ್ಪಾದಕ ಸಹಕಾರ ಸಂಘಕ್ಕೆ ಸೇರಿದರು. ಆ ನಂತರ ಈ ಸಂಸ್ಥೆಗೆ ಡಾ. ಕುರಿಯನ್ ತಮ್ಮನ್ನು ಸಂಪೂರ್ಣ ಸಮರ್ಪಿಸಿಕೊಂಡರು. ಅನೇಕ ದಶಕಗಳ ಕಾಲ ಕಾರ್ಯನಿರ್ವಹಿಸಿ 1973ರಲ್ಲಿ ಈ ಸಂಸ್ಥೆಯ ಜನರಲ್ ಮ್ಯಾನೇಜರ್ ಆದರು. ಇವರ ಪರಿಶ್ರಮದಿಂದ ಕೈರಾ ಹಾಲು ಉತ್ಪಾದಕ ಸಹಕಾರ ಸಂಘ ಅಮೂಲ್ ಬ್ರಾಂಡ್‌ನಲ್ಲಿ ವಿಶ್ವ ಪ್ರಸಿದ್ಧವಾಯಿತು. ಗುಜರಾತ್ ಶ್ವೇತಕ್ರಾಂತಿಯ ಕೇಂದ್ರವಾಯಿತು. ಅಮೂಲ್‌ಗೆ ಆರಂಭದಲ್ಲಿ ಪ್ರತಿದಿನ ಕೇವಲ 247 ಲೀ.ನಷ್ಟು ಹಾಲು ಸಂಗ್ರಹವಾಗುತ್ತಿತ್ತು. ಪ್ರಸ್ತುತ ಅಮೂಲ್ ಪ್ರತಿದಿನ 36–40 ಲಕ್ಷ ರೈತರಿಂದ 2 ಕೋಟಿ 40 ಲಕ್ಷ ಲೀ. ಹಾಲು ಸಂಗ್ರಹಿಸುತ್ತಿದೆ. ಈ ಸಹಕಾರ ಸಂಘದಲ್ಲಿ ಗುಜರಾತಿನ 13000 ಹಳ್ಳಿಗಳಿದ್ದು, ಇವುಗಳಿಗೆ ಹದಿಮೂರು ಹಾಲು ಒಕ್ಕೂಟಗಳಿವೆ. ಈ ಒಕ್ಕೂಟಗಳನ್ನು ನಿಯಂತ್ರಿಸಲು ಗುಜರಾತ್ ಸಹಕಾರಿ ಹಾಲು ಮಾರುಕಟ್ಟೆ ಫೆಡರೇಷನ್ 1973ರಲ್ಲಿ ಸ್ಥಾಪಿಸಲಾಯಿತು. ಅಮೂಲ್ ಯಶಸ್ಸಿಗೆ ಪ್ರಮುಖವಾಗಿ ವೈವಿಧ್ಯಮಯ ಉತ್ಪನ್ನಗಳು ಉತ್ಕೃಷ್ಟ ಪೂರೈಕೆ ವ್ಯವಸ್ಥೆ, ಶಕ್ತಿಶಾಲಿ ಬ್ರಾಂಡ್, ಉತ್ತಮ ಆಕರ್ಷಕ ಪ್ಯಾಕಿಂಗ್, ಆವಿಷ್ಕಾರಗಳು, ಸಂಶೋಧನೆಗಳು ಹಾಗೂ ಗಮನ ಸೆಳೆಯುವ ಆಕರ್ಷಕ ಅಮೂಲ್ ಬೇಬಿ ಕಾರಣವಾಗಿವೆ. ಅಮೂಲ್ ಹಾಲು ಶೇ.25ರಷ್ಟು ಪನೀರ್‌ನಲ್ಲಿ ಶೇ.80ರಷ್ಟು ಐಸ್ ಕ್ರೀಂನಲ್ಲಿ ಶೇ.40ರಷ್ಟು ಮಾರುಕಟ್ಟೆಯಲ್ಲಿ ಪಾಲನ್ನು ಹೊಂದಿದೆ. ಮೂವತ್ತೊಂದು ತಯಾರಿಕಾ ಘಟಕಗಳನ್ನು ಹೊಂದಿರುವ ಅಮೂಲ್‌ನ ಉತ್ಪನ್ನಗಳು ನಲ್ವತ್ತಕ್ಕೂ ಅಧಿಕ ದೇಶಗಳಿಗೆ ರಫ್ತಾಗುತ್ತಿದೆ. 2020ರಲ್ಲಿ ರೂ. 2928.79 ಕೋಟಿ ಮೌಲ್ಯದ ಉತ್ಪನ್ನಗಳು ರಫ್ತಾಗಿವೆ. 2022ರಲ್ಲಿ ರೂ. 62000 ಕೋಟಿ ರೂ. ಮೀರಿದ ವ್ಯವಹಾರ ನಡೆಸಿದೆ. ಅಮೂಲ್‌ನ ಲಾಭದ ಶೇ.80ರಷ್ಟು ರೈತರಿಗೆ ದೊರೆಯುತ್ತಿದೆ.

ಕ್ಷೀರಕ್ರಾಂತಿಯಿಂದಾಗಿ ಭಾರತದ ಹೈನುಗಾರಿಕಾ ಕ್ಷೇತ್ರವು ಜಾಗತಿಕ ನಕ್ಷೆಯಲ್ಲಿ ಪ್ರಭಾವ ಮತ್ತು ಪರಿಣಾಮ ಬೀರಿದೆ. ಪ್ರಧಾನಿ ನರೇಂದ್ರ ಮೋದಿಯವರ ಬೆಂಬಲದಿಂದ 2020–21ರಲ್ಲಿ ಭಾರತದ ಹಾಲಿನ ಉತ್ಪಾದನೆಯಲ್ಲಿ ಶೇ.44ರಷ್ಟು ಏರಿಕೆಯಾಗಿದೆ. ಈ ಅವಧಿಯಲ್ಲಿ ಜಗತ್ತಿನ ಒಟ್ಟು ಹಾಲಿನ ಉತ್ಪಾದನೆಯಲ್ಲಿ ಭಾರತವು 210 ಮೀ. ಮೆಟ್ರಿಕ್ ಟನ್ (ಶೇ.23) ಉತ್ಪಾದಿಸಿದೆ. ಈ ಅವಧಿಯಲ್ಲಿ ಜಾಗತಿಕವಾಗಿ ಪ್ರತಿದಿನ ತಲಾ ಹಾಲಿನ ಲಭ್ಯತೆ ಸರಾಸರಿ 394 ಗ್ರಾಂಗೆ ಹೋಲಿಸಿದಲ್ಲಿ ಭಾರತದಲ್ಲಿ 427 ಗ್ರಾಂ ಆಗಿರುವುದು ದಾಖಲೆಯಾಗಿದೆ.

ಹಾಲು ಉತ್ಪಾದಕ ಸಹಕಾರ ಸಂಘಗಳು ಹೈನುಗಾರ ರೈತರ ಹಿತ ಕಾಯುವಲ್ಲಿ ಹಾಗೂ ಕ್ಷೀರ ಕ್ರಾಂತಿಯಲ್ಲಿ ಪ್ರಮುಖ ಪಾತ್ರ ವಹಿಸಿವೆ. ಅಮೂಲ್ ಈ ಸಂಘಗಳಿಗೆ ಅಪಾರ ಶಕ್ತಿನೀಡಿದೆ. ದೇಶದಲ್ಲಿ ಆಹಾರ ಧಾನ್ಯಗಳ ಬೆಲೆಯನ್ನು ಸರಕಾರಗಳು ನಿಯಂತ್ರಿಸುತ್ತಿವೆ. ಆದರೆ ಅಮೂಲ್‌ನಿಂದಾಗಿ ಹಾಲು ಹಾಗೂ ಹಾಲಿನ ಉತ್ಪನ್ನಗಳ ಬೆಲೆಯನ್ನು ಸಹಕಾರ ಸಂಘಗಳು ನಿರ್ಧರಿಸುತ್ತಿವೆ. ಇದು ಹಾಲು ಉತ್ಪಾದಕ ಸಹಕಾರ ಸಂಘಗಳು ಸ್ವಾಯತ್ತ ಸಂಸ್ಥೆಗಳಾಗಿ ಶಕ್ತಿಶಾಲಿಯಾಗುವ ಮೂಲಕ ಮಾರುಕಟ್ಟೆ ಸ್ನೇಹಿಯಾಗಿ ವ್ಯವಹರಿಸಲು ಸಹಕಾರಿಯಾಗಿದೆ. ಈ ಕಾರಣದಿಂದ ದೇಶದ ಕೆಲವು ಪ್ರಖ್ಯಾತ ಡೈರಿ ಸಹಕಾರ ಸಂಸ್ಥೆಗಳು ನಿರ್ವಹಣೆ ಮತ್ತು ಲಾಭಗಳಿಸುವಿಕೆಯಲ್ಲಿ ಖಾಸಗಿ ಕಂಪನಿಗಳನ್ನು ಮೀರಿ ಸಾಧನೆ ಮಾಡಿವೆ. ಕೋವಿಡ್ ಕಾಲದಲ್ಲಿ ಖಾಸಗಿ ಕಂಪನಿಗಳು ಹಾಲುಖರೀದಿ ನಿಲ್ಲಿಸಿದಾಗ ಈ ಹಾಲು ಉತ್ಪಾದಕ ಸಹಕಾರ ಸಂಘಗಳು ಹಾಗೂ ಸರಕಾರಗಳು ಜತೆಯಾಗಿ ರೈತರನ್ನು ರಕ್ಷಿಸಿದವು.

ಡೈರಿ ಉದ್ಯಮದಲ್ಲಿ ನಿರೀಕ್ಷೆಗಳು ಹಾಗೂ ಸಿದ್ಧತೆಗಳು

ಭಾರತದ ಹಾಲಿನ ಉತ್ಪಾದನೆ 2025ರ ವೇಳೆಗೆ 270 ಮೀ. ಟನ್‌ಗೆ ತಲುಪುವುದೆಂದು ಅಂದಾಜಿಸಲಾಗಿದೆ. ಈ ದೃಷ್ಟಿಯಿಂದ ಸಹಕಾರ ವಲಯಕ್ಕೆ ತನ್ನ ಸಂಸ್ಕರಣಾ ಸಾಮರ್ಥ್ಯವನ್ನು ಹೆಚ್ಚಿಸಬೇಕಾಗಿದೆ. ಇದು ಡೈರಿ ಉದ್ಯಮದಲ್ಲಿ ಮೂಲಸೌಕರ್ಯಗಳ ನಿರ್ಮಾಣಕ್ಕೆ ಹತ್ತು ಬಿಲಿಯನ್ ಡಾಲರ್ ಹೂಡಿಕೆಗೆ ಅವಕಾಶ ಕಲ್ಪಿಸಲಿದೆ. ದೇಶದಲ್ಲಿ ಅಂದಾಜು 120–130 ಮಿಲಿಯನ್ ಟನ್ ಹಾಲು ಸಂಗ್ರಹಿಸಲು ಹಾಗೂ ಸಂಸ್ಕರಿಸಲು ಬೇಕಾದ ಮೂಲಸೌಕರ್ಯಗಳ ನಿರ್ಮಾಣಕ್ಕೆ ಸುಮಾರು 2.6 ಬಿಲಿಯನ್ ಡಾಲರ್ ಹೂಡಿಕೆಗೆ ಅವಕಾಶ ಕಲ್ಪಿಸಲಿದೆ. ಪ್ರಸ್ತುತ ಜಗತ್ತಿನಲ್ಲಿ ದ. ಆಫ್ರಿಕಾ ಏಷ್ಯಾ ಹಾಗೂ ಲ್ಯಾಟಿನ್ ಅಮೇರಿಕ ಖಂಡಗಳ ಸುಮಾರು 75 ದೇಶಗಳಲ್ಲಿ ತೀವ್ರ ಹಾಲಿನ ಕೊರತೆ ಇದೆ. ಈ ದೇಶಗಳು ಭಾರತದ ಡೈರಿಉತ್ಪನ್ನಗಳಿಗೆ ಒಳ್ಳೆಯ ಮಾರುಕಟ್ಟೆಯಾಗುವ ಅವಕಾಶಗಳಿವೆ.

ಸರ್ದಾರ್ ವಲ್ಲಭಬಾಯ್ ಪಟೇಲರ ದೂರದರ್ಶಿತ್ವ ಮತ್ತು ಮಾರ್ಗದರ್ಶನ, ಮೊರಾರ್ಜಿ ದೇಸಾಯಿಯವರ ನೇತೃತ್ವ ತ್ರಿಭುವನ್ ದಾಸ್ ಪಟೇಲರ ಛಲ ಡಾ. ವರ್ಗೀಸ್ ಕುರಿಯನ್‌ರ ಸಮರ್ಪಣಾ ಮನೋಭಾವ ಹಾಗೂ ರೈತರ ಪರಿಶ್ರಮ, ಸಹಕಾರ ಮನೋಭಾವ ಹಾಗೂ ಸಂಘಟಿತ ಹೋರಾಟದಿಂದ ಅಮೂಲ್ ಜಗತ್ತಿನ ಎಂಟು ಅತೀ ದೊಡ್ಡ ಹಾಗೂ ಸಹಕಾರ ಕ್ಷೇತ್ರದ ಶ್ರೇಷ್ಠ ಸಂಸ್ಥೆಗಳಲ್ಲಿ ಒಂದೆನಿಸಿದೆ.

ನ.27, ಜಿಲ್ಲಾ ಮಟ್ಟದ ಯುವಜನೋತ್ಸವ

ವಿವಿಧ ಸ್ಪರ್ಧೆಯಲ್ಲಿ ಭಾಗವಹಿಸಲು ಯುವ ಜನತೆಗೆ ಅವಕಾಶ

ಮೈಸೂರು,ನ.22(ಪಿಎಂ)– ರಾಜ್ಯ ಸರ್ಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ನೆಹರು ಯುವ ಕೇಂದ್ರದ ಸಂಯುಕ್ತಾಶ್ರಯದಲ್ಲಿ ನ.27ರಂದು 2023–24ನೇ ಸಾಲಿನ ಮೈಸೂರು ಜಿಲ್ಲಾ ಮಟ್ಟದ ಯುವ ಜನೋತ್ಸವ ಆಯೋಜಿಸಲಾಗಿದೆ.

ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಅಂದು ಯುವಜನೋತ್ಸವ ನಡೆಯಲಿದ್ದು, ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಲಿಚ್ಛಿಸುವ ಯುವ ಜನರು ಅಂದು ಬೆಳಗ್ಗೆ 8.30ಕ್ಕೆ ಕ್ರೀಡಾಂಗಣದಲ್ಲಿ ವರದಿ ಮಾಡಿಕೊಳ್ಳಬೇಕು. ಸ್ಪರ್ಧೆಗಳಲ್ಲಿ 15ರಿಂದ 29 ವರ್ಷ ವಯೋಮಿತಿಯ ಯುವಕ–ಯುವತಿಯರು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ನೋಂದಣಿಯಾಗಿರುವ ಯುವ ಸಂಘಟನೆ ಪದಾಧಿಕಾರಿಗಳು, ಸದಸ್ಯರು ಭಾಗವಹಿಸಬಹುದು.

ಈ ಜಿಲ್ಲಾ ಮಟ್ಟದ ಯುವ ಜನೋತ್ಸವದ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದವರು 2023–24ನೇ ಸಾಲಿನ ರಾಜ್ಯಮಟ್ಟದ ಯುವ ಜನೋತ್ಸವ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲು ಅರ್ಹತೆ ಪಡೆಯಲಿದ್ದಾರೆ. ಜಿಲ್ಲಾ ಮಟ್ಟದಲ್ಲಿ ಭಾಗವಹಿಸಿ ವಿಜೇತರಾಗುವ ಸ್ಪರ್ಧಿಗಳಿಗೆ ಪ್ರಶಸ್ತಿ ಪತ್ರ ಹಾಗೂ ಫಲಕಗಳು ದೊರೆಯಲಿವೆ. ರಾಜ್ಯಮಟ್ಟದ ಯುವ ಜನೋತ್ಸವದಲ್ಲಿ ಭಾಗವಹಿಸಿ ವಿಜೇತರಾದವರು ರಾಷ್ಟ್ರಮಟ್ಟದಲ್ಲಿ ನಡೆಯುವ ಯುವಜನೋತ್ಸವಕ್ಕೆ ಪ್ರವೇಶ ಪಡೆಯಲು ಅರ್ಹರಾಗಲಿದ್ದಾರೆ. ಇದರಲ್ಲಿ ಭಾಗವಹಿಸುವ ಸ್ಪರ್ಧಿಗಳ ಪ್ರಯಾಣಭತ್ಯೆ ಮತ್ತು ದಿನಭತ್ಯೆಯನ್ನು ಸರ್ಕಾರ ಭರಿಸಲಿದೆ ಎಂದು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಸಂಗ್ರಹ ಚಿತ್ರ

ಸ್ಪರ್ಧೆಗಳ ವಿವರ : ಸಮೂಹ ಜನಪದ ನೃತ್ಯದಲ್ಲಿ 10 ಮಂದಿ ಪಾಲ್ಗೊಳ್ಳಲು ಅವಕಾಶವಿದ್ದು, ಇದಕ್ಕೆ 15 ನಿಮಿಷ ಸಮಯ ನಿಗದಿ ಮಾಡಲಾಗಿದೆ. ಸಮೂಹ ಜನಪದ ಗಾಯನದಲ್ಲಿ 10 ಮಂದಿ ಭಾಗವಹಿಸಲು ಅವಕಾಶವಿದ್ದು, 7 ನಿಮಿಷ ಸಮಯ ಇರಲಿದೆ. ಜನಪದ ನೃತ್ಯ (ವೈಯಕ್ತಿಕ), ಜನಪದ ಗಾಯನ (ವೈಯಕ್ತಿಕ) ಸ್ಪರ್ಧೆಗಳಿಗೆ 7 ನಿಮಿಷ ಸಮಯ ನಿಗದಿ ಮಾಡಲಾಗಿದೆ.

60 ನಿಮಿಷಗಳ ಅವಧಿಯಲ್ಲಿ ಕಥೆ ಬರೆಯುವ ಸ್ಪರ್ಧೆಯೂ ಇದ್ದು, ಕಥೆಯ ವಿಷಯ ಆಕ್ರಮಣಕಾರಿ ಆಗಿರಬಾರದು ಮತ್ತು ಸ್ಪಷ್ಟವಾಗಿರಬೇಕು. ಜಾತಿ, ಪಂಥ, ಧರ್ಮ, ವರ್ಣ ಮತ್ತು ಜನಾಂಗವನ್ನು ಒಳಗೊಂಡಿರಬಾರದು. ಪೋಸ್ಟರ್ ಮೇಕಿಂಗ್ ಸ್ಪರ್ಧೆ ಸಹ ಇದ್ದು, ಯಾವುದೇ ಸಂಸ್ಥೆ ಅಥವಾ ಬ್ರ್ಯಾಂಡ್ ಹೆಸರು ಬಳಸಬಾರದು. 20ರಿಂದ 30 ಪದಗಳ ಮಿತಿಯ ಶೀರ್ಷಿಕೆ ಒಳಗೊಂಡಿರಬೇಕು. 90 ನಿಮಿಷ ಕಾಲಾವಕಾಶ ಇರಲಿದೆ. ಛಾಯಾಗ್ರಹಣ (ವೈಯಕ್ತಿಕ/ಫೋಟೋಗ್ರಫಿ) ಸ್ಪರ್ಧೆಯಲ್ಲಿ ಪ್ರಗತಿಶೀಲ ಭಾರತ, ಆತ್ಮನಿರ್ಭರ ಭಾರತ, ಯೋಗ ಅಥವಾ ಕ್ರೀಡೆ, ಫಿಟ್ನೆಸ್‌ಗಾಗಿ ದೈಹಿಕ ಚಟುವಟಿಕೆ ಮತ್ತು ಪ್ರಕೃತಿ ದೃಶ್ಯಗಳ ಪೈಕಿ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು.

ಅಕ್ರಮ ಆಸ್ತಿ ಪ್ರಕರಣ: ಸಿಬಿಐ ತನಿಖೆ ವಿರುದ್ಧ ಡಿಕೆಶಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನ.29ಕ್ಕೆ ಮುಂದೂಡಿಕೆ



ಬೆಂಗಳೂರು: ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆಗೆ ಹಿಂದಿನ ಸರ್ಕಾರ ನೀಡಿದ್ದ ಅನುಮತಿಯ ವಿರುದ್ಧ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಯನ್ನು ಕರ್ನಾಟಕ ಹೈಕೋರ್ಟ್ ಬುಧವಾರ ನವೆಂಬರ್ 29ಕ್ಕೆ ಮುಂದೂಡಿದೆ. ಶಿವಕುಮಾರ್ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಮತ್ತು ಹಿರಿಯ ವಕೀಲ ಉದಯ್ ಹೊಳ್ಳ ಅವರು ಜಂಟಿ ಮೆಮೊ ಸಲ್ಲಿಸಿದ ನಂತರ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ಪೀಠ ವಿಚಾರಣೆಯನ್ನು ಮುಂದೂಡಿದೆ.

ನವೆಂಬರ್ 15 ರಂದು, ಸಿಬಿಐ ತನಿಖೆ ನಡೆಸಲು ಸರ್ಕಾರದ ಅನುಮತಿಗೆ ಹೈಕೋರ್ಟ್ ತಡೆ ನೀಡಿದ್ದ ಹಿನ್ನೆಲೆಯಲ್ಲಿ ಇನ್ನು 2 ವಾರದಲ್ಲಿ ಅರ್ಜಿ ಇತ್ಯರ್ಥಪಡಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ ಎಂದು ಸಿಬಿಐ ಹೈಕೋರ್ಟ್ ವಿಭಾಗೀಯ ಪೀಠದ ಗಮನಕ್ಕೆ ತಂದಿತ್ತು. ಹೀಗಾಗಿ ಹೈಕೋರ್ಟ್ ವಿಚಾರಣೆಯನ್ನು ನವೆಂಬರ್ 22ಕ್ಕೆ ನಿಗದಿಪಡಿಸಿತ್ತು.

ಆದಾಗ್ಯೂ, ಅದೇ ಸಮಯದಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಮತ್ತೊಂದು ಪ್ರಕರಣವಿರುವುದರಿಂದ ಸಿಬಿಐ ನ.27ರಂದು ತನ್ನ ವಾದವನ್ನು ಮಂಡಿಸಲಿದೆ ಎಂದು ಇಂದು ಎಎಸ್‌ಜಿ ನ್ಯಾಯಾಲಯಕ್ಕೆ ತಿಳಿಸಿದರು. ನ.27ರಂದು ಯಾವುದೇ ವಿಚಾರಣೆ ಇರುವುದಿಲ್ಲ ಎಂದ ಹೈಕೋರ್ಟ್, ವಿಚಾರಣೆಯನ್ನು ನ.29ಕ್ಕೆ ಮುಂದೂಡಿದೆ. ಡಿಕೆ ಶಿವಕುಮಾರ್ ವಿರುದ್ಧ ಕಾನೂನು ಕ್ರಮ ಜರುಗಿಸಲು ಸರ್ಕಾರ 2019ರ ಸೆಪ್ಟೆಂಬರ್ 25ರಂದು ನೀಡಿದ್ದ ಅನುಮತಿಯನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಏಕಸದಸ್ಯ ಪೀಠ ವಜಾಗೊಳಿಸಿತ್ತು. ಹೀಗಾಗಿ ಶಿವಕುಮಾರ್ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದ್ದರು.

'ಪುಟ್ಟಶ್ರೀ ಸಮ್ಮಾನ್' ಪ್ರಶಸ್ತಿಗೆ ಬೆಂಗಳೂರಿನ ಕು. ಪ್ರದ್ಯುಮ್ನ ಕರ್ಪೂರ ಆಯ್ಕೆ



ಮೈಸೂರು, ನ. 22– ಮೈಸೂರಿನ ಶ್ರೀ ಪುಟ್ಟರಾಜ ಸಂಗೀತ ಸಭಾ ವತಿಯಿಂದ ನೀಡುವ 2023ನೇ ಸಾಲಿನ ಪ್ರತಿಷ್ಠಿತ ಪುಟ್ಟಶ್ರೀ ಸಮ್ಮಾನ್‌ಗೆ ಬೆಂಗಳೂರಿನ ಕು. ಪ್ರದ್ಯುಮ್ನ ಕರ್ಪೂರ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು 10 ಸಾವಿರ ರೂ. ನಗದು, ಪ್ರಶಸ್ತಿ ಪತ್ರ ಒಳಗೊಂಡಿದೆ. ಡಿಸೆಂಬರ್ 3ರಂದು ಪಂಡಿತ್ ಪುಟ್ಟರಾಜ ಗವಾಯಿಗಳ 13ನೇ ಪುಣ್ಯ ಸ್ಮರಣಾರ್ಥ ನಡೆಯುವ ಭೈರವದಿಂದ ಭೈರವಿ ಸಂಗೀತೋತ್ಸವದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಸಭಾದ ಗೌರವ ಅಧ್ಯಕ್ಷರಾದ ಮಾ.ವಿ. ರಾಮಪ್ರಸಾದ್ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿಯಲ್ಲಿ ಧಾರವಾಡದ ಶಂಕರ ಹಲಗತ್ತಿ, ಡಾ.ಎ.ಎಲ್. ದೇಸಾಯಿ, ಧಾರವಾಡ, ಎಸ್. ಉಮೇಶ್, ಮೈಸೂರು, ಶ್ರೀಮತಿ ಸಂಗೀತ, ಮೈಸೂರು, ಡಾ. ಗುರುಬಸವ ಮಹಾಮನೆ ಧಾರವಾಡ ಇವರ ಸರ್ವಾನುಮತದಿಂದ ಈ ಕಲಾವಿದರನ್ನು ಆಯ್ಕೆ ಮಾಡಲಾಗಿದೆ ಎಂದು ಸಭಾದ ಅಧ್ಯಕ್ಷ ಭೀಮಾಶಂಕರ ಬಿದನೂರು ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ನ.26ರಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಅನಾವರಣ



ಮೈಸೂರು,ನ.22(ಆರ್‌ಕೆ)–ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಆವರಣದಲ್ಲಿ ಪ್ರತಿಷ್ಠಾಪಿಸಿರುವ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಯನ್ನು ನವೆಂಬರ್ 26ರಂದು ರಾಜಮಾತೆ ಪ್ರಮೋದಾದೇವಿ ಒಡೆಯರ್ ಅನಾವರಣಗೊಳಿಸುವರು.

ಅಂದು ಬೆಳಗ್ಗೆ 11 ಗಂಟೆಗೆ ನಡೆಯಲಿರುವ ಕಾರ್ಯಕ್ರಮದಲ್ಲಿ ಸಂಸ್ಥೆಯ ಹಳೇ ವಿದ್ಯಾರ್ಥಿಗಳಾದ ಡಾ.ಸಿ.ಡಿ. ಶ್ರೀನಿವಾಸಮೂರ್ತಿ, ಡಾ.ವಿ. ಲಕ್ಷ್ಮೀನಾರಾಯಣ, ಡೀನ್ ಅಂಡ್ ಡೈರೆಕ್ಟರ್ ಡಾ. ಕೆ.ಆರ್.ದಾಕ್ಷಾಯಿಣಿ, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ, ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಹಾಗೂ ಇತರರು ಭಾಗವಹಿಸುವರು.

ಪರಿವಾರ, ನಾಯಕ ಸಮುದಾಯ ಎಸ್‌ಟಿ, ಸಿಂಧುತ್ವ ಪ್ರಮಾಣ ಪತ್ರ ಗೊಂದಲ ಸಂಬಂಧ ಮುಖ್ಯಮಂತ್ರಿ ನೇತೃತ್ವದಲ್ಲಿ ಸಭೆ

ಆನ್‌ಲೈನ್ ತಂತ್ರಾಂಶದಲ್ಲಿ ಪರಿವಾರ ಪದ ಅಳವಡಿಸಲು ಅಧಿಕಾರಿಗಳಿಗೆ ಸಿದ್ದರಾಮಯ್ಯ ಸೂಚನೆ



ಬೆಂಗಳೂರು, ನ.22–ಮೈಸೂರು ಭಾಗದ ಪರಿವಾರ ಹಾಗೂ ನಾಯಕ ಸಮುದಾಯದವರು ಎಸ್‌ಟಿ ಪ್ರಮಾಣ ಪತ್ರ ಹಾಗೂ ಸಿಂಧುತ್ವ ಪ್ರಮಾಣ ಪತ್ರ ಪಡೆಯುವುದರಲ್ಲಿ ಇರುವ ಗೊಂದಲ ನಿವಾರಣೆ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ತಮ್ಮ ಗೃಹ ಕಚೇರಿ ಕೃಷ್ಣಾದಲ್ಲಿ ಅಧಿಕಾರಿಗಳು ಹಾಗೂ ನಾಯಕ ಸಮುದಾಯದ ಮುಖಂಡರ ಸಭೆ ನಡೆಸಿದರು.

ಸಭೆಯಲ್ಲಿ ನಾಯಕ ಸಮುದಾಯದ ಮುಖಂಡರು ಮಾತ್ರವಲ್ಲದೆ, ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಪರಿಶಿಷ್ಟ ಪಂಗಡಗಳ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಸಿಆರ್‌ಇ ಸೆಲ್‌ನ ಎಡಿಜಿಪಿ ಹಾಗೂ ಕಾನೂನು ತಜ್ಞರು ಭಾಗವಹಿಸಿದ್ದರು.

ಹಳೆ ಮೈಸೂರು ಭಾಗದಲ್ಲಿ ಪರಿವಾರ ಪದವು ನಾಯಕ ಸಮುದಾಯಕ್ಕೆ ಪರ್ಯಾಯವಾಗಿದ್ದು, ಈ ಸಮುದಾಯವನ್ನು ಭಾರತ ಸರ್ಕಾರ ಪರಿಶಿಷ್ಟ ಪಂಗಡದ ಪಟ್ಟಿ, ಕ್ರಮ ಸಂಖ್ಯೆ–38ರಲ್ಲಿ ಸೇರಿಸಿರುವುದರಿಂದ ಪರಿವಾರ ಪದವನ್ನು ಹಿಂದುಳಿದ ವರ್ಗಗಳ ಪಟ್ಟಿಯಿಂದ ಕೈಬಿಟ್ಟು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆಗೊಳಿಸಿರುವ ಸಂಬಂಧ ಸ್ಪಷ್ಟ ಸುತ್ತೋಲೆ ಹೊರಡಿಸಿ ಗೊಂದಲ ನಿವಾರಿಸಬೇಕು ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿಗಳು ತಿಳಿಸಿದರು.

ಅಧಿಕಾರಿಗಳ ಗೊಂದಲದಿಂದಾಗಿ ಎಸ್‌ಟಿ ಪ್ರಮಾಣ ಪತ್ರ ಪಡೆದಿರುವ ಪರಿವಾರ ಸಮುದಾಯದವರಿಗೆ ಸಂಬಂಧಿಸಿದಂತೆ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದಲ್ಲಿ 58 ಪ್ರಕರಣಗಳು ದಾಖಲಾಗಿದ್ದು, ಜಿಲ್ಲಾ ಜಾತಿ ಪರಿಶೀಲನಾ ಸಭೆಯಲ್ಲಿರುವ ಪ್ರಕರಣಗಳನ್ನು ಹಿಂದಕ್ಕೆ ಪಡೆಯುವ ಬಗ್ಗೆ ತಕ್ಷಣವೇ ಕ್ರಮ ವಹಿಸಬೇಕು. ಸರ್ಕಾರದ ಸವಲತ್ತುಗಳನ್ನು ಪಡೆಯಲು ಅರ್ಜಿ ಸಲ್ಲಿಸಲು ಆನ್‌ಲೈನ್ ತಂತ್ರಾಂಶದಲ್ಲಿ ಪರಿವಾರ ಪದವನ್ನು ಅಳವಡಿಸಬೇಕು ಎಂದು ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ತಿಳಿಸಿದರು.

ಸಭೆಯಲ್ಲಿ ಶಾಸಕರಾದ ಅನಿಲ್ ಚಿಕ್ಕಮಾದು, ಕೆ.ಹರೀಶ್‌ಗೌಡ, ರವಿಶಂಕರ್, ಮಾಜಿ ಶಾಸಕ ಡಾ.ಯತೀಂದ್ರ, ಶಾಸಕರೂ ಆದ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ. ಬಸವರಾಜು, ಮೈಸೂರು ನಗರ ಪಾಲಿಕೆಯ ಮಾಜಿ ಸದಸ್ಯ ಲೋಕೇಶ್ ಪಿಯಾ ಸೇರಿದಂತೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಹಲವಾರು ನಾಯಕ ಹಾಗೂ ಪರಿವಾರ ಸಮುದಾಯದ ಮುಖಂಡರು ಭಾಗವಹಿಸಿದ್ದರು.

ನ.25ರಂದು ಬೆಂಗಳೂರಿಗೆ ಮೋದಿ



ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿಯವರು ಮತ್ತೊಮ್ಮೆ ಬೆಂಗಳೂರಿಗೆ ಭೇಟಿ ಕೊಡಲಿದ್ದಾರೆ. ಇದೇ ತಿಂಗಳ 25ರಂದು ಬೆಂಗಳೂರಿನಲ್ಲಿ ಹೆಚ್‌ಎಎಲ್ ಸಂಸ್ಥೆ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಭಾಗವಹಿಸಲು ಪ್ರಧಾನಿ ನರೇಂದ್ರ ಮೋದಿ ಅಂದು ಆಗಮಿಸುತ್ತಿದ್ದಾರೆ.

ಹೆಚ್‌ಎಎಲ್ ಕಾರ್ಯಕ್ರಮದ ಬಳಿಕ ಪ್ರಧಾನಿಯವರು ತೆಲಂಗಾಣಕ್ಕೆ ತೆರಳಿ, ಅಲ್ಲಿನ ವಿಧಾನಸಭಾ ಚುನಾವಣಾ ಪ್ರಚಾರದಲ್ಲಿ ತೊಡಗಿಕೊಳ್ಳಲಿದ್ದಾರೆ. ಪ್ರಧಾನಿಯವರ ಬೆಂಗಳೂರು ಭೇಟಿ ಹಿನ್ನೆಲೆಯಲ್ಲಿ ವಿಧಾನಸೌಧದಲ್ಲಿ ಇಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರು ಪ್ರೊಟೋಕಾಲ್ ಪಾಲನೆ, ಅಗತ್ಯ ತಯಾರಿ ಬಗ್ಗೆ ಅಧಿಕಾರಿಗಳ ಸಭೆ ನಡೆಸಿದರು.


ಇತ್ತೀಚೆಗೆ ಚಂದ್ರಯಾನ–3 ಯಶಸ್ವಿ ಹಿನ್ನೆಲೆಯಲ್ಲಿ ಬೆಂಗಳೂರಿಗೆ ಬಂದಿದ್ದ ಮೋದಿಯವರು ಇಸ್ರೋ ವಿಜ್ಞಾನಿಗಳನ್ನು ಅಭಿನಂದಿಸಿದ್ದರು. ಆದರೆ ಆ ಸಂದರ್ಭದಲ್ಲಿ ಪ್ರಧಾನಿಯವರು ರಾಜ್ಯ ಬಿಜೆಪಿ ನಾಯಕರನ್ನು ಭೇಟಿಯಾಗದೇ ದೂರವಿರಿಸಿದ್ದರು. ಇದೀಗ ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ವಿರೋಧ ಪಕ್ಷದ ನಾಯಕರ ನೇಮಕಾತಿ ಬಳಿಕ ಪ್ರಧಾನಿ ಮೋದಿಯವರು ಮೊದಲ ಭೇಟಿ ನೀಡುತ್ತಿದ್ದು ಮಹತ್ವ ಪಡೆದುಕೊಂಡಿದೆ.

ನ.28, ವಿದ್ಯಾವರ್ಧಕ ಕಾಲೇಜಲ್ಲಿ ರಾಷ್ಟ್ರ ಮಟ್ಟದ ಸಮ್ಮೇಳನ



ಮೈಸೂರು,ನ.22(ಜಿಎ)–ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ 'ಡಿಜಿಟಲ್ ಯುಗದಲ್ಲಿ ಬೌದ್ಧಿಕ ಆಸ್ತಿ ಹಕ್ಕುಗಳು–ವಿಷಯ ಮತ್ತು ಸವಾಲುಗಳು' ಕುರಿತು ನ.25ರಂದು ಬೆಳಗ್ಗೆ 9.30ಕ್ಕೆ ರಾಷ್ಟ್ರ ಮಟ್ಟದ ಸಮ್ಮೇಳನ ಹಾಗೂ ಕಾಲೇಜಿನ(intellectual property cell) ಐಪಿ ಸೆಲ್ ಉದ್ಘಾಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರಾಚಾರ್ಯರಾದ ಡಾ.ಎಸ್. ಮರಿಗೌಡ ತಿಳಿಸಿದರು.

ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಲೇಜಿನ ವಾಣಿಜ್ಯ ಮತ್ತು ನಿರ್ವಹಣಾ ಶಾಸ್ತ್ರ ವಿಭಾಗ ಹಾಗೂ ಐ.ಕ್ಯೂ.ಎ.ಸಿ ಘಟಕದ ವತಿಯಿಂದ ಈ ಕಾರ್ಯಕ್ರಮ ಆಯೋಜಿಸಿದ್ದು, ಪ್ರಸ್ತುತ ತಂತ್ರ ಜ್ಞಾನದ ಯುಗದಲ್ಲಿ ಅಸ್ತಿತ್ವದಲ್ಲಿರುವ ಬೌದ್ಧಿಕ ಆಸ್ತಿ ಆಡಳಿತವು ಸಮಯದ ಬದಲಾವಣೆಯೊಂದಿಗೆ ಗಮನಾರ್ಹ ಮಾದರಿ ಬದಲಾವಣೆಗೆ ಸಾಕ್ಷಿಯಾಗಿದೆ. ಬೌದ್ಧಿಕ ಆಸ್ತಿ ರಕ್ಷಣೆಯು ನಾವೀನ್ಯ ಕಾರರು, ಸಂಶೋಧಕರು, ನವೋದ್ಯಮಗಳು, ಕೈಗಾರಿಕೆಗಳು ಮತ್ತು ಕಂಪನಿಗಳ ಕೈಯಲ್ಲಿ ಪ್ರಮುಖ ವ್ಯಾಪಾರ ಸಾಧನವಾಗಿ ಕಾರ್ಯನಿರ್ವಹಿಸುತ್ತದೆ. ಡಿಜಿಟಲ್ ವಿಷಯವನ್ನು ನಿಭಾಯಿಸುವ ಮತ್ತು ಹಂಚಿಕೊಳ್ಳುವ ಸುಲಭತೆಯೊಂದಿಗೆ, ನಾವೀನ್ಯತೆಗಳು, ಆಲೋಚನೆಗಳು ಮತ್ತು ಆವಿಷ್ಕಾರಗಳನ್ನು ದುರುಪಯೋಗಪಡಿಸಿಕೊಳ್ಳದಂತೆ ರಕ್ಷಿಸುವ ಅಗತ್ಯವಿದೆ. ಹೀಗಾಗಿ ಈ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲು ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಡಾ.ಗೋವರ್ಧನ್, ಪ್ರೊ.ಎನ್. ಗೀತಾ, ಪ್ರೋ.ದೀಪ ಉಪಸ್ಥಿತರಿದ್ದರು.



ಮೈಸೂರು ವಿಶ್ವವಿದ್ಯಾಲಯದಿಂದ ಇತ್ತೀಚೆಗೆ ಗೌರವ ಡಾಕ್ಟರೇಟ್ ಪಡೆದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ ಅವರನ್ನು ಕೆಪಿಸಿಸಿ ಉಪಾಧ್ಯಕ್ಷ ಎಂ.ಎನ್.ಸೂರಜ್ ಹೆಗಡೆ ಅಭಿನಂದಿಸಿದರು. ಈ ವೇಳೆ ಕೆಪಿಸಿಸಿ ಕಾರ್ಯದರ್ಶಿ ಬಾಲಕೃಷ್ಣ, ಡಿಸಿಸಿ ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷ ಕೈಸರ್ ಅಹಮ್ಮದ್, ಪ್ರಚಾರ ಸಮಿತಿ ಅಧ್ಯಕ್ಷ ರಘುರಾಜೇ ಅರಸ್, ಪ್ರಧಾನ ಕಾರ್ಯದರ್ಶಿ ಮಹೇಂದ್ರ, ಕಾಂಗ್ರೆಸ್ ಮುಖಂಡ ಮಹದೇವು ಉಪಸ್ಥಿತರಿದ್ದರು.

ಇಂದು 'ಬೆಸ್ಟ್ ಪ್ರಾಕ್ಟಿಸಸ್ ಇನ್ ಮಲ್ಟಿಡಿಸಿಪ್ಲಿನರಿ ಡೆಮೆನ್ಷಿಯಾ ಕೇರ್' ಕುರಿತು ವಿಚಾರ ಸಂಕಿರಣ

ಮೈಸೂರು, ನ. 22– ಜೆ.ಎಸ್.ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯು, ಮೈಸೂರಿನಲ್ಲಿ 2001–02ನೇ ವರ್ಷದಲ್ಲಿ ಸ್ಥಾಪಿಸಲಾಗಿದ್ದು, ಈ ಸಂಸ್ಥೆಯು ಮಾತು, ಭಾಷೆ, ಧ್ವನಿ ಮತ್ತು ಶ್ರವಣ ತೊಂದರೆಯಿರುವ ವ್ಯಕ್ತಿಗಳಿಗೆ ಸತತ ಸೇವೆಗಳನ್ನು ಒದಗಿಸುತ್ತಾ ಬಂದಿದೆ ಹಾಗೂ ವಿದ್ಯಾರ್ಥಿಗಳಿಗೆ ವೃತ್ತಿಪರ ಶಿಕ್ಷಣ ತರಬೇತಿಯನ್ನು ಯಶಸ್ವಿಯಾಗಿ ನೀಡುತ್ತಿದೆ.

ಡೆಮೆನ್ಷಿಯಾ ಕಾಯಿಲೆಯು ವಯಸ್ಕರಲ್ಲಿ ಮರೆವಿನ ತೊಂದರೆಯಿಂದ ಪ್ರಾರಂಭವಾಗಿ, ಕಾಲಕ್ರಮೇಣ ಇನ್ನಿತರ ದೈನಂದಿನ ಚಟುವಟಿಕೆಗಳನ್ನು ನಿರ್ವಹಿಸಲು ಅಡ್ಡಿಪಡಿಸುತ್ತದೆ. ಪ್ರಪಂಚದಾದ್ಯಂತ ಮತ್ತು ವಿಶೇಷವಾಗಿ ಭಾರತದಲ್ಲಿ ವಯಸ್ಕರ ಸಂಖ್ಯೆಯು ಹೆಚ್ಚುತ್ತಿರುವುದರಿಂದ, ಡೆಮೆನ್ಷಿಯಾ ಕಾಯಿಲೆಗೆ ತುತ್ತಾಗುವವರ ಸಂಖ್ಯೆಯು ಹೆಚ್ಚುತ್ತಿದೆ. ಹಾಗಾಗಿ, ಈ ತೊಂದರೆಯ ನಿರ್ವಹಣೆಗೆ ಸೂಕ್ತವಾದ ವೈದ್ಯಕೀಯ ಮತ್ತು ವೈದ್ಯಕೇತರ ತಂಡದ ಚಿಕಿತ್ಸೆಯ ಮಹತ್ವ ಮತ್ತು ಪ್ರಾಮುಖ್ಯತೆಯ ಅರಿವು ಮೂಡಿಸುವುದು ಅಗತ್ಯ.

ಈ ನಿಟ್ಟಿನಲ್ಲಿ ಜೆ.ಎಸ್.ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯು 'ಬೆಸ್ಟ್ ಪ್ರಾಕ್ಟಿಸಸ್ ಇನ್ ಮಲ್ಟಿ ಡಿಸಿಪ್ಲಿನರಿ ಡೆಮೆನ್ಷಿಯಾ ಕೇರ್' ವಿಚಾರ ಸಂಕಿರಣವನ್ನು ನಾಳೆ (ನ.23) ಆಯೋಜಿಸಲಾಗಿದೆ. ಈ ವಿಚಾರ ಸಂಕಿರಣ ಉದ್ಘಾಟನೆಯು ಬೆಳಗ್ಗೆ 10 ಘಂಟೆಗೆ, ರಾಜೇಂದ್ರ ಭವನ, ಎಂ.ಜಿ.ರಸ್ತೆ, ಮೈಸೂರಿನಲ್ಲಿ ನಡೆಯಲಿದೆ. ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸುತ್ತಿರುವ ಡಾ. ಎಸ್.ಪಿ.ಗೋಸ್ವಾಮಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಡಾ. ಸುಮಾ. ಆರ್., ಪ್ರಾಂಶುಪಾಲರು, ಜೆ.ಎಸ್.ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಉದ್ಘಾಟನೆಯ ನಂತರ ಡಾ. ಎಸ್.ಪಿ.ಗೋಸ್ವಾಮಿ, ಡಾ.ಪ್ರತಿಭಾ ಪೆರೇರಾ, ಡಾ.ಎಂ.ಕಿಶೋರ್, ಡಾ.ಹೇಮಂತ್, ವಿಪಿನ್, ಮತ್ತು ಡಾ.ಶ್ರೀಕರ್ ಡಿಮೆನ್ಷಿಯಾ ತೊಂದರೆಯ ಸಮಗ್ರ ಆರೈಕೆಯ ಬಗ್ಗೆ ಅವರ ದೃಷ್ಟಿಕೋನ ಮತ್ತು ಸಲಹೆಗಳನ್ನು ನೀಡಲಿದ್ದಾರೆ.

ಸರ್ಕಾರಿ ಕಾನೂನು ಕಾಲೇಜುಗಳ ಸ್ಥಾಪನೆಗೆ ಆಗ್ರಹ



ಮೈಸೂರು, ನ.22(ಜಿಎ)–ವಿಶ್ವವಿದ್ಯಾನಿಲಯಗಳ ವ್ಯಾಪ್ತಿಗೆ ಬರುವ ಕಾನೂನು ಪದವಿ ವಿದ್ಯಾರ್ಥಿಗಳ ಪ್ರವೇಶಾತಿ ನೀಡುವುದರಲ್ಲಿ ಕಾಲೇಜುಗಳಲ್ಲಿ ತಾರತಮ್ಯ ಎಸಗಲಾಗುತ್ತಿದೆ. ಹೀಗಾಗಿ ಸರ್ಕಾರಿ ಕಾಲೇಜುಗಳ ಸಂಖ್ಯೆ ಹೆಚ್ಚಿಸಬೇಕು, ಕಡಿಮೆ ಅಂಕ ಪಡೆದವರಿಗೂ ಕಾನೂನು ವಿದ್ಯಾಭ್ಯಾಸಕ್ಕೆ ಪ್ರವೇಶ ನೀಡಬೇಕೆಂದು ಕರ್ನಾಟಕ ಪ್ರಜಾ ಪಾರ್ಟಿ (ರೈತ ಪರ್ವ)ದ ರಾಜ್ಯಾಧ್ಯಕ್ಷ ಬಿ.ಶಿವಣ್ಣ ಆಗ್ರಹಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾನೂನು ತಿಳಿದ ವಿದ್ಯಾರ್ಥಿಗಳು ರಾಷ್ಟ್ರ ಮತ್ತು ರಾಜ್ಯಕ್ಕೆ ಭದ್ರ ಬುನಾದಿ ಹಾಕುವವರಾಗಿದ್ದಾರೆ. ಆದರೆ, ವಿಶ್ವವಿದ್ಯಾನಿಲಯದ ಅಧೀನಕ್ಕೆ ಒಳಪಟ್ಟ ಕಾನೂನು ಕಾಲೇಜುಗಳು, ಕಾನೂನನ್ನು ಕಲಿಯಲು ಬಯಸುವ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನಿರಾಕರಿಸುತ್ತಿವೆ. ರಾಜ್ಯದಲ್ಲಿ 7ರಿಂದ 9 ಸರ್ಕಾರಿ ಕಾನೂನು ಪದವಿ ಕಾಲೇಜುಗಳಿದ್ದು, ಸುಮಾರು 106 ಖಾಸಗಿ ಕಾಲೇಜುಗಳಿವೆ. ಆದರೆ ಖಾಸಗಿ ಕಾಲೇಜುಗಳಲ್ಲಿ ಸಂವಿಧಾನ ಮತ್ತು ಸರ್ಕಾರಿ ನಿಯಮದ ಪ್ರಕಾರ ಬಡವರ ಮಕ್ಕಳಗಳಿಗೆ ರೈತಾಪಿ ವರ್ಗದ ಮಕ್ಕಳಿಗೆ ಹಲವಾರು ಕಾರಣ ನೀಡಿ ಪ್ರವೇಶಾವಕಾಶವನ್ನು ನಿರಾಕರಿಸುತ್ತಿರುವ ಬಗ್ಗೆ ದೂರುಗಳು ಕೇಳಿಬಂದಿವೆ. ಹೀಗಾಗಿ ಸರ್ಕಾರಿ ಕಾಲೇಜುಗಳ ಸಂಖ್ಯೆ ಹೆಚ್ಚಿಸಬೇಕು. ಏಕರೂಪದ ಶುಲ್ಕ ನೀತಿ ಇರಬೇಕೆಂದು ಒತ್ತಾಯಿಸಿದರು. ಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಮಂಜು, ಆರ್. ಶ್ರೀನಿವಾಸ್, ಮೋಹನ್‌ದಾಸ್, ಕುಮಾರಸ್ವಾಮಿ ಇದ್ದರು.

ನ.25, ಕನ್ನಡ ತೇರು, ಕನ್ನಡ ಗೀತ ಗಾಯನ ನಡಿಗೆ



ಮೈಸೂರು, ನ.22(ಜಿಎ)–ಮಹಾರತ್ನ ಟ್ರಸ್ಟ್ ವತಿಯಿಂದ ನ.25ರ ಬೆಳಗ್ಗೆ 9ಕ್ಕೆ ಕನ್ನಡದ ತೇರು ಮತ್ತು ಕನ್ನಡ ಗೀತಾ ಗಮನ ನಡಿಗೆಯೊಂದಿಗೆ ಗಾಯನ, ಕನ್ನಡ ಉಳಿಸಿ, ಕನ್ನಡ ಬೆಳೆಸಿ ಎಂಬ ಶೀರ್ಷಿಕೆಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಮೈಸೂರು ಮಹಾಲಿಂಗು ತಿಳಿಸಿದರು. ನಗರ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಬಳಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಮಾಜಿ ಮೇಯರ್ ಶಿವಕುಮಾರ್, ಶಾಸಕರಾದ ಟಿ.ಎಸ್.ಶ್ರೀವತ್ಸ, ಹರೀಶ್‌ಗೌಡ ಇನ್ನಿತರರು ಚಾಲನೆ ನೀಡುವರು. ಈ ವೇಳೆ ಕನ್ನಡಾಂಬೆ ಮೂರ್ತಿಯುಳ್ಳ ಸ್ತಬ್ಧಚಿತ್ರದೊಡನೆ ನೂರಾರು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಕನ್ನಡ ಗೀತೆ, ಜಾನಪದ ಗೀತೆ ಹಾಡುತ್ತ ರಾಮಸ್ವಾಮಿ ವೃತ್ತದ ಮೂಲಕ ನಡಿಗೆಯಲ್ಲಿ ಸಾಗಿ ಮಹಾರಾಣಿ ವಿಜ್ಞಾನ ಕಾಲೇಜು ತಲುಪಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ರೂಪಾ, ನಾಗಶ್ರೀ, ಸಂದೇಶ್, ವಿಜಯಶ್ರೀ, ಕೌಸಲ್ಯ ಹಾಜರಿದ್ದರು.

ನ್ಯಾಯಬೆಲೆ ಅಂಗಡಿಯಲ್ಲಿ ಅಕ್ಕಿ, ರಾಗಿ ದುರುಪಯೋಗ ಆರೋಪ

ತಲಗವಾದಿ ಪಿಎಸಿಸಿಎಸ್ ಅಧ್ಯಕ್ಷ ಸೇರಿ ಮೂವರ ವಿರುದ್ಧ ಕ್ರಿಮಿನಲ್ ಕೇಸ್

ಮಳವಳ್ಳಿ,ನ.22–ನ್ಯಾಯಬೆಲೆ ಅಂಗಡಿಯಲ್ಲಿ ಕಾರ್ಡುದಾರರಿಗೆ ವಿತರಿಸಬೇಕಾದ 106 ಕ್ವಿಂಟಾಲ್ ಅಕ್ಕಿ ಹಾಗೂ ರಾಗಿಯನ್ನು ದುರುಪಯೋಗಪಡಿಸಿಕೊಂಡ ಆರೋಪದ ಮೇರೆಗೆ ತಾಲೂಕಿನ ತಲಗವಾದಿ ಗ್ರಾಮದ ಪಿಎಸಿಸಿಎಸ್ ಅಧ್ಯಕ್ಷರು ಸೇರಿದಂತೆ ಮೂವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದೆ.

ತಲಗವಾದಿ ಪಿಎಸಿಸಿಎಸ್ ಅಧ್ಯಕ್ಷ ಡಿ.ಸಿ. ಚೌಡಯ್ಯ, ತಲಗವಾದಿ ಪಡಿತರ ವಿತರಣೆ ಬೆರಳಚ್ಚು ಪಡೆಯುವ ಜವಾಬ್ದಾರಿ ವಹಿಸಿಕೊಂಡಿದ್ದ ಟಿ.ಇ.ಉಮೇಶ್ ಹಾಗೂ ಪಡಿತರ ವಿತರಣೆ ಸಹಾಯಕ ಟಿ.ಎನ್. ಅಶೋಕ್ ಆರೋಪಕ್ಕೆ ಗುರಿಯಾದವರು.

ವಿವರ: ತಲಗವಾದಿ ಟಿಎಸಿಸಿಎಸ್ ಸಂಘದ ವ್ಯಾಪ್ತಿಗೆ ಒಳಪಟ್ಟಿರುವ ದೇವಿಪುರ ಗ್ರಾಮಸ್ಥರು ತಮ್ಮ ಗ್ರಾಮಕ್ಕೆ ಪಡಿತರ ವಿತರಣೆ ಮಾಡದೇ ಅಕ್ಕಿಯನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ ಎಂದು ನವೆಂಬರ್ 16ರಂದು ಮಳವಳ್ಳಿ ತಾಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು. ಈ ಹಿನ್ನೆಲೆಯಲ್ಲಿ ತಹಸೀಲ್ದಾರರು ತನಿಖೆಗೆ ಆದೇಶಿಸಿದ್ದರು.

ಈ ಸಂಬಂಧ ತನಿಖೆ ನಡೆಸಿದ ಆಹಾರ ನಿರೀಕ್ಷಕರು ನೀಡಿದ ಮನವಿಯನ್ವಯ ಆಹಾರ ಶಿರಸ್ತೇದಾರರಾದ ಎಂ.ಮಹಾಲಕ್ಷ್ಮಿ ಅವರು ದೇವಿಪುರಕ್ಕೆ ವಿತರಿಸಬೇಕಾದ ಎಂಎವೈ ಅಕ್ಕಿ 9.24 ಕ್ವಿಂಟಾಲ್, ರಾಗಿ 6.16 ಕ್ವಿಂಟಾಲ್, ಬಿಪಿಎಲ್ ಅಕ್ಕಿ 54.87 ಕ್ವಿಂಟಾಲ್ ಹಾಗೂ ರಾಗಿ 36.58 ಕ್ವಿಂಟಾಲ್ ಸೇರಿದಂತೆ ಒಟ್ಟು 106 ಕ್ವಿಂಟಾಲ್ ಅಕ್ಕಿ ಹಾಗೂ ರಾಗಿಯನ್ನು ಮಳವಳ್ಳಿ ಟಿಎಪಿಸಿಎಂಎಸ್ ಸಗಟು ಮಳಿಗೆಯಲ್ಲಿ ನಿಗದಿತ ಅವಧಿಯಲ್ಲಿ ಪಡೆದಿರುವ ತಲಗವಾದಿ ಪಿಎಸಿಸಿಎಸ್ ಸಂಘದವರು ದೇವಿಪುರ ಕಾರ್ಡುದಾರರಿಂದ ಬಯೋಮೆಟ್ರಿಕ್ ಪಡೆದು ಪಡಿತರ ವಿತರಣೆ ಮಾಡದೇ ಇರುವುದು ತಿಳಿದು ಬಂದಿರುವುದರಿಂದ ಇವರ ವಿರುದ್ಧ ಅಗತ್ಯ ವಸ್ತುಗಳ ಕಾಯ್ದೆ 1955ರಡಿ ಪ್ರಕರಣ ದಾಖಲಿಸುವಂತೆ ನೀಡಿದ ದೂರಿನನ್ವಯ ಮಳವಳ್ಳಿ ಗ್ರಾಮಾಂತರ ಠಾಣೆ ಪೊಲೀಸರು ಸಂಘದ ಅಧ್ಯಕ್ಷರು ಸೇರಿದಂತೆ ಮೂವರ ವಿರುದ್ಧ ಭಾರತೀಯ ದಂಡ ಸಂಹಿತೆ 470ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ನ.25, ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಕಲೋತ್ಸವ

ಮೈಸೂರು, ನ.22–ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳ ಕಚೇರಿ, ಉತ್ತರ ವಲಯದ ವತಿಯಿಂದ ನ.25ರಂದು ಬೆಳಗ್ಗೆ 9 ಗಂಟೆಗೆ ಎನ್.ಆರ್.ಮೊಹಲ್ಲಾದ ಸೆಂಟ್ ಫಿಲೋಮಿನಾ ಪ್ರೌಢಶಾಲೆಯಲ್ಲಿ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಜನಪ್ರತಿನಿಧಿಗಳು, ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು, ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಸುಮಾರು 576 ಮಕ್ಕಳು, ತೀರ್ಪುಗಾರರು ಮತ್ತು ನೋಡಲ್ ಅಧಿಕಾರಿಗಳು, ಶಿಕ್ಷಕರು ಸೇರಿ 380 ಮಂದಿ ಭಾಗವಹಿಸಲಿದ್ದಾರೆ.

ಕುಟುಂಬ ಪಿಂಚಣಿ ಹೆಚ್ಚಳಕ್ಕಾಗಿ ಪ್ರತಿಭಟನೆ



ಮೈಸೂರು, ನ.22(ಜಿಎ)–ಕುಟುಂಬ ಪಿಂಚಣಿಯನ್ನು ಶೇ.30ರಷ್ಟು ಏರಿಕೆ ಮಾಡಿ ಏಕರೂಪತೆ ಸಾಧಿಸಬೇಕೆಂದು ಒತ್ತಾಯಿಸಿ ಸಾಮಾನ್ಯ ವಿಮಾ ಪಿಂಚಣಿದಾರರ ಸಂಘದ ಸದಸ್ಯರು ಮೈಸೂರಿನ ರಾಮಸ್ವಾಮಿ ವೃತ್ತದ ಬಳಿಯ ನ್ಯಾಷನಲ್ ಇನ್ಶೂರೆನ್ಸ್ ಕಚೇರಿ ಮುಂಭಾಗ ಬುಧವಾರ ಪ್ರತಿಭಟನೆ ನಡೆಸಿದರು.

ಸಂಘದ ಎನ್.ಉಮಾಪತಿ ಮಾತನಾಡಿ, ಅಖಿಲ ಭಾರತ ವಿಮಾ ಪಿಂಚಣಿದಾರರ ಸಂಘವು ಕುಟುಂಬ ಪಿಂಚಣಿಯಲ್ಲಿನ ಏಕರೂಪತೆಗಾಗಿ ಕಳೆದ ಎರಡು ವರ್ಷದಿಂದ ಹೋರಾಟ ಮಾಡುತ್ತಿದೆ. ಇದರ ಶಿಫಾರಸ್ಸಿಗಾಗಿ ಹಣಕಾಸು ಸಚಿವಾಲಯದ ಗಮನಕ್ಕೂ ತರಲಾಗಿದೆ ಸಂಘವು ಪ್ರಧಾನಿ ಹಾಗೂ ಹಣಕಾಸು ಸಚಿವೆ ನಿರ್ಮಲಾ ಸೀತರಾಮನ್ ಅವರನ್ನೂ ಭೇಟಿಯಾಗಿ ಬೇಡಿಕೆ ಮುಂದಿಟ್ಟಿದೆ. ಆದರೂ ಯಾವುದೇ ಪ್ರಯೋಜನವಾಗಿಲ್ಲ ಸಾರ್ವಜನಿಕ ವಲಯದ ಸಾಮಾನ್ಯ ವಿಮಾ ಕಂಪನಿಗಳ ಪಿಂಚಣಿದಾರರು ಇದರಿಂದ ಸಮಸ್ಯೆ ಅನುಭವಿಸುತ್ತಿದ್ದಾರೆ. ಇನ್ಶೂರೆನ್ಸ್ ಕಂಪೆನಿಯು ಹೆಚ್ಚಿನ ಮುತುವರ್ಜಿ ವಹಿಸಿ ಕಾಲಹರಣ ಮಾಡದೆ ನಮ್ಮ ಸಮಸ್ಯೆ ಬಗೆಹರಿಸಬೇಕು ಎಂದು ಒತ್ತಾಯಿಸಿದರು. ಈ ವೇಳೆ ಅಖಿಲ ಭಾರತ ವಿಮಾ ಪಿಂಚಣಿದಾರರ ಸಂಘದ ಅಧ್ಯಕ್ಷರ ಮೂಲಕ ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿಯ ಹಿರಿಯ ಪ್ರಾದೇಶಿಕ ವ್ಯವಸ್ಥಾಪಕರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಪದಾಧಿಕಾರಿಗಳಾದ ಜಯಂತ್, ಮೋಹನ್, ಬಲರಾಮ್, ರವಿ, ಮಂಜುನಾಥ್, ಭಾಗ್ಯಲಕ್ಷ್ಮೀ ಪಾಲ್ಗೊಂಡಿದ್ದರು.

ಕಾಂಗ್ರೆಸ್‌ಗೆ ನೇಮಕ



ಮೈಸೂರು: ನಗರ (ಜಿಲ್ಲಾ) ಕಾಂಗ್ರೆಸ್ ಸಮಿತಿ, ಪರಿಶಿಷ್ಟ ಪಂಗಡ ವಿಭಾಗದ ಇಂದಿರಾಗಾಂಧಿ ಬ್ಲಾಕ್ ಅಧ್ಯಕ್ಷರನ್ನಾಗಿ ವಿಜಯನಗರ 2ನೇ ಹಂತದ ನಿವಾಸಿ ಎನ್.ಹೇಮಾವತಿ ಅವರನ್ನು ನೇಮಕ ಮಾಡಲಾಗಿದೆ.

ತೇಜಸ್ವಿನಿಗೆ ಪಿಹೆಚ್‌ಡಿ



ಮೈಸೂರು,ನ.22–'Role of Common and Rare DNA Variants; of the Monifestation of Type 2 Diabetes Mellitus and Coronary Artery Disease' ಎಂಬ ವಿಷಯದಲ್ಲಿ ಮಂಡಿಸಿದ ಮಹಾಪ್ರಬಂಧಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯವು ತೇಜಸ್ವಿನಿ ಪ್ರಕಾಶ್ ಅವರಿಗೆ ಪಿಹೆಚ್‌ಡಿ ಪದವಿ ನೀಡಿದೆ. ಡಾ.ಎನ್.ಬಿ. ರಾಮಚಂದ್ರ ಅವರ ಮಾರ್ಗದರ್ಶನದಲ್ಲಿ ಮಹಾಪ್ರಬಂಧ ಮಂಡಿಸಿದ್ದರು.

96ನೇ ವಾರ್ಷಿಕ ಮಹಾಸಭೆ

ಮೈಸೂರು,ನ.22–ಮೈಸೂರಿನ ತ್ಯಾಗರಾಜ ರಸ್ತೆಯಲ್ಲಿರುವ ಬ್ರಾಹ್ಮಣ ಧರ್ಮ ಸಹಾಯ ಸಭಾದ 96ನೇ ವಾರ್ಷಿಕ ಮಹಾಸಭೆಯನ್ನು ನ.26ರಂದು ಮಧ್ಯಾಹ್ನ 3 ಗಂಟೆಗೆ ಸಭಾದ ಕಲ್ಯಾಣ ಭವನದಲ್ಲಿ ಅಧ್ಯಕ್ಷ ಎನ್.ಶ್ರೀನಿವಾಸ್ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ.

ಅಭಿಮಾನದ ಕೊರತೆಯಿಂದ ಕನ್ನಡ ಮಾಧ್ಯಮ ಶಾಲೆಗಳು ಬಂದ್

ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಕನ್ನಡ ಹಬ್ಬ ಉದ್ಘಾಟಿಸಿ ಪ್ರಾಧ್ಯಾಪಕ ಡಾ.ಪಿ.ಬೆಟ್ಟೇಗೌಡ ವಿಷಾದ





ಮೈಸೂರು,ನ.22(ಎಂಟಿವೈ)– ಕನ್ನಡ ಭಾಷೆ ಮೇಲಿನ ಅಭಿಮಾನದ ಕೊರತೆಯಿಂದಾಗಿ ಕನ್ನಡ ಮಾಧ್ಯಮದ ಹಲವು ಸರ್ಕಾರಿ ಶಾಲೆಗಳು ಮುಚ್ಚಲ್ಪಟ್ಟಿವೆ ಎಂದು ಕುವೆಂಪುನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ.ಪಿ.ಬೆಟ್ಟೇಗೌಡ ವಿಷಾದಿಸಿದ್ದಾರೆ.

ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ನಗರದ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ ಕನ್ನಡ ಹಬ್ಬವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಂಪದ್ಭರಿತ ಭಾಷೆಯಾಗಿರುವ ಕನ್ನಡಕ್ಕೆ ಅಭಿಮಾನದ ಕೊರತೆ ಎದ್ದು ಕಾಣುತ್ತಿದೆ. ಶ್ರೇಷ್ಠ ಭಾಷೆಗಳಲ್ಲಿ ಒಂದಾಗಿರುವ ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಬದುಕು ಕಟ್ಟಿಕೊಡಬಲ್ಲ ಸಾಮರ್ಥ್ಯವಿರುವ ಕನ್ನಡ ಭಾಷೆಯ ಬಗ್ಗೆ ಕನ್ನಡಿಗರಲ್ಲಿ ಅಭಿಮಾನದ ಕೊರತೆ ಇರುವುದು ವಿಷಾದನೀಯ. ಇದರ ಪರಿಣಾಮ ರಾಜ್ಯದಲ್ಲಿ ಹಲವು ಕನ್ನಡ ಶಾಲೆಗಳು ಮುಚ್ಚಿಹೋಗಿವೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಕೊಡುತ್ತೇವೆ ಎಂದು ಅನುಮೋದನೆ ಪಡೆದು, ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ಕೊಡುತ್ತಿವೆ. ಇದರಿಂದ ಮಕ್ಕಳ ಮನೋವಿಕಾಸಕ್ಕೆ ಅಡಚಣೆಯಾಗುತ್ತಿದೆ ಎಂದು ಪ್ರೊ. ಬೆಟ್ಟೇಗೌಡ ಕಳವಳ ವ್ಯಕ್ತಪಡಿಸಿದರು.

ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರ ಇವುಗಳಲ್ಲಿ ಭಾಷೆಯನ್ನು ಬೆರೆಸಿದರೆ ಕನ್ನಡ ಉಳಿಯುತ್ತದೆ. ಏಕೆಂದರೆ ಆರೋಗ್ಯ, ಶಿಕ್ಷಣ ಎಲ್ಲಾ ವರ್ಗ ಧರ್ಮ ಜಾತಿ ಅವರಿಗೂ ಅವಶ್ಯವಿದೆ. ಈ ಎರಡೂ ಕ್ಷೇತ್ರಗಳಲ್ಲಿ ಪರಿಣಾಮಕಾರಿಯಾಗಿ ಕನ್ನಡವನ್ನು ಬಳಕೆಗೆ ತರಬೇಕು. ಕನ್ನಡ ಅನ್ನ, ಜ್ಞಾನ ನೀಡುವ ಭಾಷೆಯಾಗಬೇಕು. ಕನ್ನಡವನ್ನು ಬಳಸಿದರೆ ಮಾತ್ರ ಉಳಿಯಲು ಸಾಧ್ಯ ಆದರೆ, ಇಂದು ನಾವು ಇಂಗ್ಲಿಷ್ ವ್ಯಾಮೋಹಕ್ಕೆ ಒಳಗಾಗಿ ಕನ್ನಡ ಬಳಸುವುದನ್ನೇ ಮರೆಯುತ್ತಿದ್ದೇವೆ. ಕನ್ನಡವು ಅವಮಾನದ ಭಾಷೆಯಾಗದೇ ಅಭಿಮಾನದ ಭಾಷೆಯಾಗಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಂ.ಅಬ್ದುಲ್ ರಹೆಮಾನ್ ಮಾತನಾಡಿ, ಕನ್ನಡ ಭಾಷೆಯ ಉಳಿವು, ಭಾಷಾ ಬಳಕೆಯ ಮೇಲೆ ಅವಲಂಬಿತವಾಗಿದೆ. ಆಂಗ್ಲ ಭಾಷೆಗೆ ಭಾವನೆ ಕಡಿಮೆ. ಆದರೆ, ಕನ್ನಡ ಭಾಷೆಗೆ ಭಾವನೆ ಹೆಚ್ಚು. ಮಾತೃಭಾಷೆ ಭಾವಕ್ಕೆ ಹತ್ತಿರವಾಗಿರುತ್ತದೆ. ಅದು ನಮ್ಮ ಅಸ್ಮಿತೆ. ಅದನ್ನೇ ಬದುಕಿನಲ್ಲಿ ಹೆಚ್ಚು ಬಳಸಬೇಕು ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಸಿ.ಎಸ್. ಕೆಂಡಗಣ್ಣೇಗೌಡ, ಪ್ರಾಧ್ಯಾಪಕ ಸಿದ್ದೇಗೌಡ, ಸಾಂಸ್ಕೃತಿಕ ಸಮಿತಿ ಸಂಚಾಲಕರಾದ ಡಾ.ವಿ.ಲಲಿತ, ವಿದ್ಯಾರ್ಥಿ ಸಂಸತ್ತಿನ ಸಾಂಸ್ಕೃತಿಕ ಸಮಿತಿ ಅಧ್ಯಕ್ಷೆ ಎಂ.ಶರಣ್ಯ, ಉಪಾಧ್ಯಕ್ಷೆ ಬಿ.ಎಂ.ಅರ್ಚನ, ಕಾರ್ಯದರ್ಶಿ ಕಾವ್ಯ ಎಂ.ಕಟ್ಟಿ, ಜಂಟಿ ಕಾರ್ಯದರ್ಶಿ ಆರ್.ಮೇಘನ, ಕನ್ನಡ ಸಂಪಾದಕರಾದ ಎಂ.ಕೀರ್ತಿ, ಇಂಗ್ಲಿಷ್ ಸಂಪಾದಕರಾದ ಆರ್.ಚೈತ್ರ, ಎನ್‌ಎಸ್‌ಎಸ್ ಘಟಕ–1ರ ಕಾರ್ಯದರ್ಶಿ ಕೆ.ಸಹನ, ಘಟಕ–2ರ ಕಾರ್ಯದರ್ಶಿ ಕೆ.ಆರ್. ಸಿಂಚನ, ಕ್ರೀಡಾ ಕಾರ್ಯದರ್ಶಿ ವಿ.ಲಿಖಿತ, ಜಂಟಿ ಕ್ರೀಡಾ ಕಾರ್ಯದರ್ಶಿ ಎಸ್.ಎಂ. ಐಶ್ವರ್ಯ, ರೇಂಜರ್ಸ್ ಘಟಕ–1ರ ಕಾರ್ಯದರ್ಶಿ ಕೆ.ಸೋನಿಯ, ಘಟಕ–2ರ ಕಾರ್ಯದರ್ಶಿ ಬಿ.ಹರ್ಷಿತ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಗುರುವಾರ 23 ನವೆಂಬರ್ 2023

ಸರ್ಕಾರ ಸಂಪೂರ್ಣ ಜಾತಿ ಗಣತಿ ಮಾಡಿಲ್ಲ

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಆರೋಪ

ಮಂಡ್ಯ, ನ.22– ರಾಜ್ಯ ಸರ್ಕಾರ ಸಂಪೂರ್ಣವಾಗಿ ಜಾತಿ ಗಣತಿ ಮಾಡದೇ, ಕೇವಲ ರಾಹುಲ್ ಗಾಂಧಿ ಮೆಚ್ಚಿಸಲು ಜಾತಿ ಗಣತಿ ಘೋಷಿಸಲು ಮುಂದಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.



ನಗರದ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಲ ಮಾಧ್ಯಮಗಳಲ್ಲಿ ಜಾತಿ ಗಣತಿಗೆ ಸಂಬಂಧಿಸಿದ ಮೂಲಪ್ರತಿ ಕಾಣೆಯಾಗಿದೆ ಎಂಬ ವರದಿಯಾಗಿದೆ. ಕಾಂತರಾಜು ತಯಾರಿಸಿದ್ದ ವರದಿಯನ್ನು ಕುಮಾರಸ್ವಾಮಿ ತಿರಸ್ಕರಿಸಿದರು ಅಂತ ನನ್ನ ಮೇಲೆ ಆರೋಪ ಮಾಡಿದ್ದಾರೆ. ನನ್ನ ಕಾಲದಲ್ಲಿ ಕಾಂತರಾಜು ವರದಿ ಪಡೆದಿಲ್ಲ ಸರಿ, ಈ 6 ತಿಂಗಳ ಅವಧಿಯಲ್ಲಿ ಇವರು ವರದಿ ಪ್ರಕಟಿಸಲು ಒಪ್ಪಿಗೆ ಕೊಡಲು ಏನಾಗಿತ್ತು ಎಂದು ಪ್ರಶ್ನಿಸಿದರು.

ಕಾಂತರಾಜು ವರದಿಗೆ ಅಂದಿನ ಕಾರ್ಯದರ್ಶಿ ಸಹಿ ಹಾಕಿಲ್ಲ ಎನ್ನುತ್ತಾರೆ. ಕಾಂತರಾಜು ವರದಿ ಜಾರಿಗೆ ಸಂಪೂರ್ಣವಾಗಿ ಗಣತಿ ಮಾಡಿಲ್ಲ. ಸಂಪೂರ್ಣ ಸಿದ್ಧತೆ ಸಹ ಮಾಡಿಲ್ಲ. ಗೊತ್ತಿಲ್ಲದೆ ಇರೋ ಶಾಲಾ-ಮಕ್ಕಳಿಂದ ಸಹಿ ಹಾಕಿಸಿಕೊಂಡು ಅವರಿಗೆ ಬೇಕಾದಂತೆ ಸಿದ್ಧತೆ ಮಾಡಿರುವ ವರದಿ ಅನ್ನೋದು ಜಗಜ್ಜಾಹೀರಾಗಿದೆ. ಹಂಚಿರಿಯಲ್ಲಿ ಅವರ ರಾಷ್ಟ್ರ ನಾಯಕರ ಆಸೆ ಈಡೇರಿಸಲು ವರದಿ ಸಿದ್ಧವಿದೆ ಎಂದು ಸಿಎಂ ಹೇಳಿದ್ದಾರೆ ಎಂದು ಲೇವಡಿ ಮಾಡಿದರು. ಮೂಲಪ್ರತಿ ಕಳ್ಳತನ ಆದ ಮೇಲೆ ವರದಿ ಹೇಗೆ ಜಾರಿ ಮಾಡುತ್ತಾರೆ. ಕಾಂತರಾಜು ವರದಿ ಸಿದ್ಧವಾಗಿ 10 ವರ್ಷವಾಗಿದೆ. ಈ 10 ವರ್ಷದಲ್ಲಿ ಸಾಕಷ್ಟು ಬೆಳವಣಿಗೆ ಆಗಿದೆ. ಕಾಂತರಾಜು ವರದಿಯನ್ನು ಮನೆಯಲ್ಲಿ ಕೂತು ವರದಿ ಮಾಡಿದರೋ ಅಥವಾ ಸಿಎಂ ಅವರೇ ಕುಳಿತು ವರದಿ ಮಾಡಿಸಿದರೋ ಗೊತ್ತಿಲ್ಲ ಇವತ್ತು ಈ ವರದಿ ಬಗ್ಗೆ ಹಲವಾರು ಸಮಾಜದಲ್ಲಿ ಅನುಮಾನ ಇದೆ ಎಂದರು.

ಯಾವ ವರದಿ ಕೊಡುತ್ತಾರೆ, ಯಾವ ವರದಿ ವಿಧಾನ ಸಭೆಯಲ್ಲಿ ಇಡುತ್ತಾರೆ ನೋಡೋಣ. ಕಲಾಪದಲ್ಲಿ ಇದರ ಬಗ್ಗೆ ಚರ್ಚಿಸುವೆ. ಜಾತಿಯ ಹೆಸರಿನಿಂದ ನಾನು ವಿರೋಧ ವ್ಯಕ್ತಪಡಿಸಲ್ಲ, ಸುಳ್ಳೆ ನಮ್ಮ ಮನೆ ದೇವ್ರು ಅಂತಾರೆ. ಇವರೆಲ್ಲಾ ಸತ್ಯಹರಿಶ್ಚಂದ್ರನ ವಂಶದವರಾ? ಸ್ವಾಮೀಜಿಯವರ ನೇತೃತ್ವದಲ್ಲಿ ಸಿದ್ದರಾಮಯ್ಯನವರಿಗೆ ಪಾಪ ಎಲ್ಲರೂ ಸಹಿ ಹಾಕಿದ್ದಾರೆ ಎಂದು ತಿಳಿಸಿದರು.

ಬಿಜೆಪಿಗರು ಹೇಳಿದರೆ ಕುಮಾರಸ್ವಾಮಿ ಚಡ್ಡಿಯನ್ನು ಬೇಕಾದರೂ ಹಾಕುತ್ತಾರೆಂಬ ಸಚಿವ ಚಲುವರಾಯಸ್ವಾಮಿ ಪ್ರತಿಕ್ರಿಯೆಗೆ ಉತ್ತರಿಸಿದ ಅವರು, ಸಿದ್ದರಾಮಯ್ಯ ಹೇಳಿದರೆ ಚಲುವರಾಯಸ್ವಾಮಿ ಏನು ಹಾಕುತ್ತಾರೆ ಎಂಬುದನ್ನು ಹೇಳಲಿ ಎಂದು ತಿರುಗೇಟು ನೀಡಿದರು.

ಇಂದು, ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮದ್ದೂರು, ನ.22– ಪಟ್ಟಣದ ವಿದ್ಯುತ್ ವಿತರಣಾ ಕೇಂದ್ರ ವ್ಯಾಪ್ತಿಯ ವಿವಿಧೆಡೆ ನ.23 ಮತ್ತು 24ರಂದು ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ನ.23ರಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 2ರ ವರೆಗೆ ಮದ್ದೂರು ಹಾಗೂ ಮಳವಳ್ಳಿ ರಸ್ತೆಯಲ್ಲಿ ಪರಿವರ್ತಕ ಬದಲಾವಣೆ ಕಾರ್ಯ ಹಮ್ಮಿಕೊಂಡಿರುವುದರಿಂದ ಎಫ್-2 ಎಚ್‌ಕೆವಿ ನಗರ, ಎಫ್–13 ವಳಗೆರೆ ಹಳ್ಳಿ ಮತ್ತು ಸಾದೊಳಲು ಮತ್ತು ಚಾಮನ ಹಳ್ಳಿ ವ್ಯಾಪ್ತಿ ವಿದ್ಯುತ್ ವ್ಯತ್ಯಯ ವಾಗಲಿದೆ. ನ.24ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆ ವರೆಗೆ ಕೊಪ್ಪ, ಹೊಸಗಾವಿ, ಕೌಡ್ಲೆ, ಬೆಕ್ಕಳಲೆ, ನಂಬಿ ನಾಯಕನಹಳ್ಳಿ, ಬಿದರುಕೋಟೆ, ಗೂಳೂರು ಮತ್ತು ಆಬಲವಾಡಿ ಗ್ರಾಮಗಳ ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ಕಾಮಗಾರಿಗೆ ಸಂಸದೆ ಸುಮಲತಾ ಭೂಮಿಪೂಜೆ



ಪಾಂಡವಪುರ, ನ.22– ತಾಲೂಕಿನ ವಿವಿಧ ಗ್ರಾಮದಲ್ಲಿ ಬುಧವಾರ ಸಂಸದರ ಅನುದಾನದ ವಿವಿಧ ಕಾಮಗಾರಿಗೆ ಸಂಸದೆ ಸುಮಲತಾ ಭೂಮಿಪೂಜೆ ನೆರವೇರಿಸಿ, ಹಲವು ಕಾಮಗಾರಿಗಳನ್ನು ವೀಕ್ಷಿಸಿದರು.

ತಾಲೂಕಿನ ನೀಲನಹಳ್ಳಿ ಗ್ರಾಮದಲ್ಲಿ 5 ಲಕ್ಷ ರೂ. ವೆಚ್ಚದ ಅಂಬೇಡ್ಕರ್ ಸಮುದಾಯ ಭವನದ ಕಾಂಪೌಂಡ್ ಉದ್ಘಾಟಿಸಿದರು. ಇದೇ ವೇಳೆ ಗ್ರಾಮಸ್ಥರು ನೀಲನಹಳ್ಳಿ ಗೇಟ್ ಬಳಿ ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ನಿಲ್ಲಿಸುತ್ತಿಲ್ಲ ಇದರಿಂದ ಗ್ರಾಮಸ್ಥರಿಗೆ ತೊಂದರೆಯಾಗುತ್ತಿದೆ ಎಂದು ಮನವಿ ಮಾಡಿದರು. ಈ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮಕೈಗೊಳ್ಳುವುದಾಗಿ ಸುಮಲತಾ ಭರವಸೆ ನೀಡಿದರು.

ಬಳಿಕ ಮಹದೇಶ್ವರಪುರ ಗ್ರಾಮದಲ್ಲಿ 5 ಲಕ್ಷ ರೂ. ವೆಚ್ಚದ ಓವರ್‌ಹೆಡ್ ಟ್ಯಾಂಕ್‌ನ ಕಾಂಪೌಂಡ್ ನಿರ್ಮಾಣಕ್ಕೆ ಚಾಲನೆ, ಇಂಗಲಕುಪ್ಪೆ ಗ್ರಾಮದ 5 ಲಕ್ಷ ರೂ. ವೆಚ್ಚದ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ, ಕೆ.ಬೆಟ್ಟಹಳ್ಳಿ ಗ್ರಾಪಂ ಆವರಣದಲ್ಲಿ 10 ಲಕ್ಷ ವೆಚ್ಚದ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣಕ್ಕೆ ಚಾಲನೆ, ಅರಳಕುಪ್ಪೆ ಗ್ರಾಮದ 5 ಲಕ್ಷ ರೂ. ವೆಚ್ಚದ ಬಸ್ ನಿಲ್ದಾಣ ಉದ್ಘಾಟಿಸಿದರು. ನಂತರ ಪಾಂಡವಪುರದ ಗುರುಭವನದ ಚಾವಣಿ ನಿರ್ಮಾಣ ಕಾಮಗಾರಿ ವೀಕ್ಷಣೆ ಮಾಡಿದರು. ತಾಲೂಕಿನ ಕುಂತಿಬೆಟ್ಟದ ಕುವೆಂಪು ಪ್ರೌಢಶಾಲೆಗೆ ಭೇಟಿ ನೀಡಿ ಶಾಲೆಯ ಸುವರ್ಣ ಮಹೋತ್ಸವ ಹಿನ್ನೆಲೆಯಲ್ಲಿ ಆಡಳಿತ ಮಂಡಳಿಗೆ ಅಭಿನಂದನೆ ಸಲ್ಲಿಸಿದರು. ಇದೇ ವೇಳೆ ಮನ್‌ಮುಲ್ ಮಾಜಿ ಅಧ್ಯಕ್ಷ ಎಲ್.ಸಿ.ಮಂಜುನಾಥ್, ಕಾಂಗ್ರೆಸ್ ಮುಖಂಡ ದೇವರಾಜು, ದೀಪು, ನೀಲನಹಳ್ಳಿ ಗ್ರಾಪಂ ಮಾಜಿ ಸದಸ್ಯ ಜಿ.ಶಿವಣ್ಣೇಗೌಡ, ಜಗದೀಶ್, ಲಕ್ಷ್ಮೀಸಾಗರ ಗ್ರಾಪಂ ಅಧ್ಯಕ್ಷೆ ಚಂದ್ರಕಲಾ, ಕೆ.ಬೆಟ್ಟಹಳ್ಳಿ ಗ್ರಾಪಂ ಅಧ್ಯಕ್ಷೆ ಆಶಾರಾಣಿ, ಉಪಾಧ್ಯಕ್ಷೆ ಮಂಜುಳಾ, ಸದಸ್ಯರಾದ ಕೆ.ಜಿ.ಆನಂದ್, ಅಶೋಕ್, ಚಂದ್ರಶೇಖರ್, ಜಯಣ್ಣಚಾರಿ, ನಾಗರಾಜು, ಪಿಡಿಓ ಪೂರ್ಣಿಮಾ, ಎಇಇ ಮಹದೇವಸ್ವಾಮಿ, ಎಇ ಕುಮಾರ್, ಗುತ್ತಿಗೆದಾರ ಮನೀಷ್ ಹೆಗ್ಗಡೆ, ಮಹದೇವಪ್ರಸಾದ್. ರೈತ ಸಂಘ, ಕಾಂಗ್ರೆಸ್ ಮುಖಂಡರು ಹಾಜರಿದ್ದರು.

ನಗರಕೆರೆ ಚಿಕ್ಕಣ್ಣ ನಿಧನ

ಮದ್ದೂರು, ನ.22– ತಾಲೂಕಿನ ನಗರಕೆರೆ ಗ್ರಾಮದ ಜೆಡಿಎಸ್ ಮುಖಂಡ ನಗರಕೆರೆ ಚಿಕ್ಕಣ್ಣ (73) ಬುಧವಾರ ಬೆಳಗ್ಗೆ ಅನಾರೋಗ್ಯದಿಂದ ನಿಧನರಾದರು. ಮೃತರು ಇಬ್ಬರು ಸಹೋದರರು, ಇಬ್ಬರು ಸಹೋದರಿಯರನ್ನು ಅಗಲಿದ್ದಾರೆ. ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು.



ಕಾರ್ಖಾನೆ ಬಾಯ್ಲರ್ ಬೆಲ್ಟ್‌ಗೆ ಸಿಲುಕಿ ಕಾರ್ಮಿಕ ಸಾವು

ಮಂಡ್ಯ, ನ.22– ನಗರದ ಮೈಷುಗರ್ ಸಕ್ಕರೆ ಕಾರ್ಖಾನೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕಾರ್ಮಿಕ ಬಾಯ್ಲರ್ ಬೆಲ್ಟ್‌ಗೆ ಸಿಲುಕಿ ಮೃತಪಟ್ಟಿರುವ ಘಟನೆ ಬುಧವಾರ ಸಂಭವಿಸಿದೆ. ನಗರದ ಷುಗರ್‌ಟೌನ್‌ನ ಮೈಷುಗರ್ ಸಕ್ಕರೆ ಕಾರ್ಖಾನೆಯ ಬಿಹಾರ ಮೂಲದ ರಾಕೇಶ್ (22) ಮೃತಪಟ್ಟ ಕಾರ್ಮಿಕ. ಈತ ಕಾರ್ಖಾನೆಯಲ್ಲಿ ಬುಧವಾರ ಬೆಳಗ್ಗೆ 7.30ರ ಸಮಯದಲ್ಲಿ ಕಾರ್ಯನಿರ್ವಹಿಸುವಾಗ ಬೂದಿ ತೆಗೆಯುವ ಮಿಷನ್ ಬೆಲ್ಟ್‌ಗೆ ಸಿಲುಕಿ ಮೃತಪಟ್ಟಿದ್ದಾನೆ. ಈತನನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ. ಈ ಸಂಬಂಧ ಮಂಡ್ಯ ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಲ್ಲೆ ಆರೋಪಿಗಳ ಬಂಧನಕ್ಕೆ ಆಗ್ರಹಿಸಿ ಧರಣಿ



ಕೆ.ಆರ್.ಪೇಟೆ, ನ.22–ತಾಲೂಕಿನ ಶೀಳನೆರೆ ಹೋಬಳಿಯ ಬೇಲದಕೆರೆ ಗ್ರಾಮದಲ್ಲಿ ಹಳೇ ದ್ವೇಷದ ಹಿನ್ನೆಲೆಯಲ್ಲಿ ಮೂವರು ಮಹಿಳೆಯರ ಮೇಲೆ ಮಾರಣಾಂತಿಕವಾಗಿ ಹಲ್ಲೆ ನಡೆಸಿರುವ ಆರೋಪಿಗಳನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿ ತಾಲೂಕು ಜೆಡಿಎಸ್ ಅಧ್ಯಕ್ಷ ಎ.ಎನ್.ಜಾನಕೀರಾಂ ನೇತೃತ್ವದಲ್ಲಿ ಪಟ್ಟಣ ಪೊಲೀಸ್ ಠಾಣೆ ಮುಂದೆ ಧರಣಿ ನಡೆಸಿ ಮನವಿ ಸಲ್ಲಿಸಲಾಯಿತು.

ಬೇಲದಕೆರೆ ಗ್ರಾಮದ ಹರೀಶ, ಮಂಜೇಗೌಡ, ಮಮತಾ, ಮಮತಾ ಮಂಜೇಗೌಡ, ಸಂದರ್ಶ, ಪ್ರಮೋದಿತ, ಚಂದ್ರಗಿರೀಗೌಡ, ಯಶವಂತ್, ಶೈಲಜಾ, ರವೀಗೌಡ, ಅಣ್ಣೇಗೌಡ ಅವರು ಇದೇ ಗ್ರಾಮದ ನಾಗಮ್ಮ ಜವರೇಗೌಡ, ಮಾಲಮ್ಮ ಕುಮಾರ್, ಮಂಜಮ್ಮ ಚಂದ್ರಹಾಸ ಅವರ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ನಾಗಮ್ಮ, ಮಾಲಮ್ಮ, ಮಂಜಮ್ಮ ಅವರು ತಮ್ಮ ಜಮೀನಿಗೆ ಹೋಗುತ್ತಿದ್ದಾಗ ಹಳೇ ದ್ವೇಷದ ಹಿನ್ನೆಲೆಯಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸಿ, ಜಗಳ ತೆಗೆದು ಕಾರದ ಪುಡಿ ಎರಚಿ, ಮಚ್ಚು, ದೊಣ್ಣೆ, ಕಬ್ಬಿಣದ ರಾಡುಗಳಿಂದ ಮಾರಣಾಂತಿಕವಾಗಿ ಹಲ್ಲೆ ನಡೆಸಿ ಪರಾರಿಯಾಗಿದ್ದಾರೆ. ಅಲ್ಲದೆ, ಚಿನ್ನಾಭರಣಗಳನ್ನು ಕಿತ್ತುಕೊಂಡು ಕೊಲೆ ಬೆದರಿಕೆ ಹಾಕಿ ಪರಾರಿಯಾಗಿರುತ್ತಾರೆ. ಆದ್ದರಿಂದ ಆರೋಪಿಗಳನ್ನು ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿದರು.

ಸಬ್ ಇನ್ಸ್‌ಪೆಕ್ಟರ್ ನವೀನ್ ಅವರಿಗೆ ಮನವಿ ಸಲ್ಲಿಸಲಾಯಿತು. ನಂತರ ಸಬ್ ಇನ್ಸ್‌ಪೆಕ್ಟರ್ ನವೀನ್ ಮಾತನಾಡಿ, ಘಟನೆ ಸಂಬಂಧ 11 ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಮಹಿಳೆಯರ ಮೇಲಿನ ಹಲ್ಲೆಯನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ಶೀಘ್ರದಲ್ಲೇ ಆರೋಪಿಗಳನ್ನು ಬಂಧಿಸುವುದಾಗಿ ಭರವಸೆ ನೀಡಿದರು. ಪ್ರತಿಭಟನೆಯಲ್ಲಿ ಜೆಡಿಎಸ್ ಜಿಲ್ಲಾ ಉಪಾಧ್ಯಕ್ಷ ಬಿ.ವಿ.ನಾಗೇಶ್, ಮನ್‌ಮುಲ್ ಮಾಜಿ ಅಧ್ಯಕ್ಷ ಎಂ.ಬಿ.ಹರೀಶ್, ಕಾನೂನು ಘಟಕದ ತಾಲೂಕು ಅಧ್ಯಕ್ಷ ವಿ.ಎಸ್.ಧನಂಜಯಕುಮಾರ್, ಟಿಎಪಿಸಿಎಂಎಸ್ ಮಾಜಿ ನಿರ್ದೇಶಕ ಹೆಚ್.ಟಿ.ಲೋಕೇಶ್, ತಾಪಂ ಮಾಜಿ ಸದಸ್ಯ ಮಲ್ಲೇನಹಳ್ಳಿ ಮೋಹನ್, ತಾಲೂಕು ಆರೋಗ್ಯ ರಕ್ಷಾ ಸಮಿತಿ ಸದಸ್ಯ ಸಂತೇಬಾಚಹಳ್ಳಿ ರವಿಕುಮಾರ್, ಮುಖಂಡರಾದ ಬೇಲದಕೆರೆ ನಂಜಪ್ಪ, ಮರೀಗೌಡ, ಶೆಟ್ಟಿನಾಯಕನಕೊಪ್ಪಲು ಸೋಮಶೇಖರ್. ಜೆಡಿಎಸ್ ಮುಖಂಡರು ಉಪಸ್ಥಿತರಿದ್ದರು.

ಮದ್ದೂರು ತಾಲೂಕು ಕಚೇರಿಗೆ ಡಿಸಿ ದಿಢೀರ್ ಭೇಟಿ



ಮದ್ದೂರು, ನ.22– ಸರ್ಕಾರಿ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರತಿಯೊಬ್ಬ ಸಿಬ್ಬಂದಿ ಕಡ್ಡಾಯವಾಗಿ ಗುರುತಿನ ಚೀಟಿ ಹೊಂದಿರಬೇಕೆಂಬ ಆದೇಶ ಹೊರಡಿಸಿದ್ದ ಹಿನ್ನೆಲೆಯಲ್ಲಿ ಬುಧವಾರ ಜಿಲ್ಲಾಧಿಕಾರಿ ಡಾ.ಕುಮಾರ ತಾಲೂಕು ಕಚೇರಿಗೆ ದಿಢೀರ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಇದೇ ವೇಳೆ ಗುರುತಿನ ಚೀಟಿ ಧರಿಸದೆ ಕೆಲಸ ನಿರ್ವಹಿಸುತ್ತಿದ್ದ ಅಧಿಕಾರಿಗಳಿಗೆ ಚಳಿ ಬಿಡಿಸಿದರು. ಕರ್ತವ್ಯ ಸಮಯದಲ್ಲಿ ಕಡ್ಡಾಯವಾಗಿ ಐಡಿ ಕಾರ್ಡ್ ಧರಿಸುವಂತೆ ಸೂಚಿಸಿದರು. ಬಳಿಕ ಸಾರ್ವಜನಿಕರ ಅಹವಾಲುಗಳನ್ನು ಆಲಿಸಿ, ಕ್ರಮಬದ್ಧವಾಗಿರುವ ಅರ್ಜಿಗಳನ್ನು ಕೂಡಲೇ ವಿಲೇವಾರಿ ಮಾಡಿ ಕೆಲಸ ಮಾಡಿಕೊಡುವಂತೆ ಸೂಚಿಸಿದರು. ಇಲ್ಲವಾದರೆ ಸಮಸ್ಯೆ ಎಂಬುದನ್ನು ಹಿಂಬರಹ ನೀಡುವಂತೆ ಸೂಚಿಸಿದರು.

ಸಾರ್ವಜನಿಕರಿಂದ ಕುಂದುಕೊರತೆ ಅರ್ಜಿಗಳನ್ನು ಸ್ವೀಕರಿಸಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಾಲಮಿತಿಯೊಳಗೆ ನಿಯಮಾನುಸಾರ ವಿಲೇವಾರಿಯಾಗಬೇಕು. ಅರ್ಜಿಗಳನ್ನು ವಿಳಂಬವಾಗಿ ವಿಲೇವಾರಿ ಮಾಡುವುದು. ಸಾರ್ವಜನಿಕರನ್ನು ಅನಗತ್ಯವಾಗಿ ಕಚೇರಿಗೆ ಅಲೆದಾಡಿಸುವುದು ಕಂಡುಬಂದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ತಹಶೀಲ್ದಾರ್ ಸೋಮಶೇಖರ್ ಅವರಿಗೆ ಕಚೇರಿ ಆವರಣವನ್ನು ಸ್ವಚ್ಛತೆ ಕಾಯ್ದುಕೊಳ್ಳಬೇಕು. ಸಾರ್ವಜನಿಕರನ್ನು ಕಚೇರಿಗೆ ಅಲೆಸದೆ ಸಾಧ್ಯವಾದಷ್ಟು ಶೀಘ್ರವಾಗಿ ಕೆಲಸ ಮಾಡಿಕೊಡಿ ಎಂದು ತಿಳಿಸಿದರು. ನಂತರ, ಶಿವಪುರ ಸತ್ಯಾಗ್ರಹ ಸೌಧಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಮೇಲುಕೋಟೆಯಲ್ಲಿ ಅಷ್ಟತೀರ್ಥೋತ್ಸವ



ಮೇಲುಕೋಟೆ, ನ.22–ಇಲ್ಲಿನ ಚೆಲುವನಾರಾಯಣಸ್ವಾಮಿಯ ಕಾರ್ತಿಕ ಮಾಸದ ತೊಟ್ಟಿಲಮಡು ಜಾತ್ರಾಮಹೋತ್ಸವದ ಅಷ್ಟತೀರ್ಥೋತ್ಸವ ಬುಧವಾರ ವೈಭವದಿಂದ ನೆರವೇರಿತು.

ರಾಜಮುಡಿ ಬ್ರಹ್ಮೋತ್ಸವದ 6ನೇ ತಿರುನಾಳ್ ಮತ್ತು ದಶಮಿತಿಥಿ ಕೂಡಿದ ವಿಶೇಷ ದಿನದಂದು ಚೆಲುವನಾರಾಯಣನ ಬಂಗಾರದ ಪಾದುಕೆಗೆ ಪಂಚ ಕಲ್ಯಾಣಿ, ವೈಕುಂಠಗಂಗೆ ಹಾಗೂ ಎಲ್ಲಾ ಎಂಟು ತೀರ್ಥಗಳಲ್ಲಿ ವೇದಘೋಷದೊಂದಿಗೆ ಅಭಿಷೇಕ ನೆರವೇರಿಸಲಾಯಿತು. ರಾಜ್ಯದ ವಿವಿಧೆಡೆ ಮತ್ತು ಆಂಧ್ರಪ್ರದೇಶದಿಂದ ಆಗಮಿಸಿದ ಭಕ್ತರು ಹಾಗೂ ಮಡಿಲು ತುಂಬಿ ಹರಕೆ ಹೊತ್ತ ನೂರಾರು ದಂಪತಿಗಳು, ಕಂಕಣಭಾಗ್ಯ ಅಪೇಕ್ಷಿತರು, ಪಾದುಕೆಯ ಪಲ್ಲಕ್ಕಿಯೊಡನೆ ವೇದಪುಷ್ಕರಣಿ ಹಾಗೂ ಧನುಷ್ಕೋಟಿಯಲ್ಲಿ ಪವಿತ್ರಸ್ನಾನ ಮಾಡಿದರು. ನ.25ರಂದು ರಾಜಮುಡಿ ಬ್ರಹ್ಮೋತ್ಸವ ತೀರ್ಥಸ್ನಾನದೊಂದಿಗೆ ಮುಕ್ತಾಯವಾಗಲಿದೆ.

ಪಟ್ಟಿ ಹೈಕಮಾಂಡ್‌ಗೆ ರವಾನೆ: ಡಿಕೆಶಿ



ಬೆಂಗಳೂರು: ಮುಂದಿನ ವಾರ ಮತ್ತೊಂದು ಸುತ್ತಿನ ಚರ್ಚೆಯ ನಂತರ ಆಡಳಿತಾರೂಢ ಕಾಂಗ್ರೆಸ್ ವಿವಿಧ ನಿಗಮ ಮಂಡಳಿಗಳಿಗೆ ನೇಮಕಾತಿಯನ್ನು ಅಂತಿಮಗೊಳಿಸಲಿದೆ ಮತ್ತು ನಂತರ ಪಟ್ಟಿಯನ್ನು ಪಕ್ಷದ ವರಿಷ್ಠರಿಗೆ ಕಳುಹಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬುಧವಾರ ಹೇಳಿದ್ದಾರೆ. ನಿಗಮ ಮಂಡಳಿ ನೇಮಕಾತಿ ಸಂಬಂಧ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಮಂಗಳವಾರದಿಂದ ನಗರದಲ್ಲಿ ರಾಜ್ಯ ನಾಯಕರೊಂದಿಗೆ ಚರ್ಚೆ ನಡೆಸುತ್ತಿದ್ದಾರೆ "ಇಂದು ಕೂಡ ಅವರು(ಸುರ್ಜೇವಾಲಾ) ಚರ್ಚೆ ನಡೆಸಿದ್ದಾರೆ. ನಮ್ಮಲ್ಲಿ ಕೆಲವು ನಾಯಕರು ಸಹ ಅವರೊಂದಿಗೆ ಮಾತನಾಡುತ್ತಿದ್ದಾರೆ. ನಾವು ಕೆಲವು ಹಿರಿಯ ನಾಯಕರು ಮತ್ತು ಶಾಸಕರ ಅಭಿಪ್ರಾಯವನ್ನು ಕೇಳಿದ್ದೇವೆ. ಅವರು ನವೆಂಬರ್ 28 ರಂದು ಮತ್ತೆ ಬರುತ್ತಿದ್ದಾರೆ. ಈ ಮಧ್ಯೆ, ಮುಖ್ಯಮಂತ್ರಿ (ಸಿದ್ದರಾಮಯ್ಯ) ಮತ್ತು ನಾನು ಚುನಾವಣಾ ಪ್ರಚಾರಕ್ಕಾಗಿ ತೆಲಂಗಾಣಕ್ಕೆ ಹೋಗುತ್ತಿದ್ದೇವೆ ಎಂದು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಶಿವಕುಮಾರ್ ಹೇಳಿದ್ದಾರೆ. ಚುನಾವಣಾ ಪ್ರಚಾರ ಮುಗಿಸಿ ಸುರ್ಜೇವಾಲಾ ಅವರು ನ.28ರಂದು ನಗರಕ್ಕೆ ವಾಪಸಾಗಲಿದ್ದು, ಬಳಿಕ ಪಟ್ಟಿಯನ್ನು ಅಂತಿಮಗೊಳಿಸಿ ದೆಹಲಿಗೆ ಕಳುಹಿಸಲಾಗುವುದು ಎಂದು ಡಿಸಿಎಂ ತಿಳಿಸಿದ್ದಾರೆ.

ಮುಂದಿನ ಲೋಕಸಭಾ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ಈಗಲೇ ನಿಗಮ ಮಂಡಳಿಗಳಿಗೆ ನೇಮಕಾತಿಯನ್ನು ಪೂರ್ಣಗೊಳಿಸಲು ಕಾಂಗ್ರೆಸ್ ನಾಯಕರು ಮುಂದಾಗಿದ್ದು, ಯಾವುದೇ ಅಸಮಾಧಾನ, ಅತೃಪ್ತಿಗೆ ಆಸ್ಪದ ನೀಡದಂತೆ ಎಚ್ಚರಿಕೆಯಿಂದ ಪಟ್ಟಿಯನ್ನು ಸಿದ್ಧಗೊಳಿಸಲಾಗುತ್ತಿದೆ.

ಒಂದನೇ ಪುಟದಿಂದ

ಕೆಲವು ಮಾರ್ಪಾಡಿಗೆ ನಿರ್ಧಾರ

ತಮ್ಮ ಹಿಂದಿನ ಆಡಳಿತಾವಧಿಯಲ್ಲಿ ಸಿದ್ಧ ಗೊಂಡಿರುವ ಸಾಮಾಜಿಕ–ಆರ್ಥಿಕ–ಶೈಕ್ಷಣಿಕ ವರದಿಯನ್ನು ಅನುಷ್ಠಾನಗೊಳಿಸಲು ಆಸಕ್ತಿ ತೋರಿದರು. ಶಾಶ್ವತ ಆಯೋಗದ ಹಾಲಿ ಅಧ್ಯಕ್ಷರು ನೀಡುವ ವರದಿಯನ್ನು ಸ್ವೀಕರಿಸಿ ಅನುಷ್ಠಾನಗೊಳಿಸುವುದಾಗಿ ಹೇಳಿಕೆ ನೀಡಿದ ಬೆನ್ನಲ್ಲೇ ಪಕ್ಷಾತೀತವಾಗಿ ಈ ಸಮುದಾಯಗಳ ಜನಪ್ರತಿನಿಧಿಗಳು ಮತ್ತು ಸಂಘಟನೆಗಳು ವಿರೋಧ ವ್ಯಕ್ತಪಡಿಸಿದ್ದವು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಸಂಪುಟದ ಸಹೋದ್ಯೋಗಿಗಳೇ ಅಪಸ್ವರ ಎತ್ತಿ ಕಾಂತರಾಜ್ ವರದಿಯಲ್ಲಿನ ಲೋಪದೋಷಗಳನ್ನು ಸರಿಪಡಿಸಿ ಅನುಷ್ಠಾನಗೊಳಿಸಲು ಮುಖ್ಯಮಂತ್ರಿ ಮೇಲೆ ಒತ್ತಡ ತಂದರು. ಲೋಕಸಭಾ ಚುನಾವಣೆ ಸನಿಹದಲ್ಲಿ ಜಾತಿ ಕಲಹಕ್ಕೆ ಅವಕಾಶ ಮಾಡಿಕೊಡಬಾರದು ಮತ್ತು ಸರ್ಕಾರದ ನಿಲುವು ಅಚಲವಾಗಿರಬೇಕೆಂಬ ಕಾರಣಕ್ಕಾಗಿ ಮುಖ್ಯಮಂತ್ರಿ ಅವರು ಉಂಟಾಗಿರುವ ಲೋಪದೋಷವನ್ನು ಸರಿಪಡಿಸಲು ಆಯೋಗದ ಅಧ್ಯಕ್ಷರ ಅವಧಿಯನ್ನು ವಿಸ್ತರಿಸಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ. ವರದಿ ಬಂದ ನಂತರ ಸಚಿವ ಸಂಪುಟದ ಉಪ ಸಮಿತಿ ರಚಿಸಿ ಆ ಸಮಿತಿಗೆ ತಜ್ಞರ ನೇಮಕಾತಿ ಮಾಡಿ, ಅವರು ನೀಡುವ ವರದಿಯನ್ನು ಆಧರಿಸಿ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ.

ಸಮಾಜದ ಎಲ್ಲಾ ವರ್ಗಗಳಲ್ಲಿ ಇರುವ ಕಡುಬಡವರಿಗೆ ಮೀಸಲಾತಿ ಕಲ್ಪಿಸುವ ಸಂಬಂಧ ಉಪಸಮಿತಿ ತೀರ್ಮಾನ ಮಾಡಲಿದೆ. ಸರ್ಕಾರಿ ಸೌಲಭ್ಯಗಳು ಉಳ್ಳವರಿಗೇ ದೊರೆಯುತ್ತದೆ ಎಂಬ ಅಪವಾದದಿಂದ ದೂರವಾಗಿ ಸಾಮಾಜಿಕ–ಆರ್ಥಿಕ–ಶೈಕ್ಷಣಿಕವಾಗಿ ಹಿಂದುಳಿದ ಎಲ್ಲರಿಗೂ ಶಿಕ್ಷಣ, ಉದ್ಯೋಗ ಹಾಗೂ ಸರ್ಕಾರಿ ಸವಲತ್ತುಗಳನ್ನು ದೊರೆಯುವಂತೆ ಮಾಡಲು ಉಪಸಮಿತಿ ಶಿಫಾರಸು ಮಾಡಲಿದೆ.

ವರದಿ ಕೈಸೇರಿದ ನಂತರ ತೀರ್ಮಾನ

ಅವಧಿ ವಿಸ್ತರಣೆಯಾಗುತ್ತದೆ ಎಂದರು. ವರದಿ ಸಿದ್ಧಪಡಿಸಲು 162 ಕೋಟಿ ರೂ. ಖರ್ಚು ಮಾಡಲಾಗಿದೆ, ವರದಿ ಬಂದ ನಂತರ ಎಲ್ಲಾ ಸಂಶಯಗಳು ನಿವಾರಣೆಯಾಗಲಿದೆಯೋ, ಇಲ್ಲವೋ ನೋಡೋಣ. ವರದಿಯಲ್ಲಿ ಏನಿದೆ ಎಂಬುದು ತಿಳಿದಿಲ್ಲ, ಬರುವ ಡಿಸೆಂಬರ್‌ನಲ್ಲಿ ವರದಿ ಸಲ್ಲಿಸುವ ನಿರೀಕ್ಷೆ ಇದೆ. ಡಿಸಿಎಂ ಡಿ.ಕೆ.ಶಿವಕುಮಾರ್ ಈ ಬಗ್ಗೆ ತಮ್ಮ ಬಳಿ ಏನನ್ನೂ ಮಾತನಾಡಿಲ್ಲ, ನಿಗಮ-ಮಂಡಳಿಗಳ ನೇಮಕಾತಿಗೆ ಸಂಬಂಧಿಸಿದಂತೆ ಪೂರ್ವಭಾವಿ ಚರ್ಚೆಯಾಗಿದ್ದು, ಯಾರನ್ನು ಮಾಡಬೇಕೆಂಬ ಬಗ್ಗೆ ಇನ್ನು ಪಟ್ಟಿ ಅಂತಿಮಗೊಳಿಸಿಲ್ಲ ಎಂದರು.

30ಕ್ಕೂ ಅಧಿಕ ಭಕ್ತರಿಗೆ ಗಾಯ

ಕಾರಣ ನರ್ಸ್‌ಗಳೇ ಚಿಕಿತ್ಸೆ ನೀಡಿದ್ದಾರೆ. 20ಕ್ಕೂ ಹೆಚ್ಚು ಮಂದಿ ಭಕ್ತಾದಿಗಳಿಗೆ ಸಣ್ಣ ಪ್ರಮಾಣದಲ್ಲಿ ಗಾಯಗಳಾಗಿದ್ದು, ಹೆಜ್ಜೇನು ದಾಳಿಯಿಂದ ಅವರ ದೇಹದಲ್ಲಿ ಹೊಕ್ಕಿದ್ದ ಕೆಲವೇ ಕೆಲವು ಮುಳ್ಳುಗಳನ್ನು ನರ್ಸ್‌ಗಳು ತೆರವುಗೊಳಿಸಿದ್ದಾರೆ. ಆದರೆ ದೇಹದಲ್ಲಿ ಹೆಚ್ಚಿನ ಪ್ರಮಾಣದ ಮುಳ್ಳುಗಳು ಹೊಕ್ಕಿ ತೀವ್ರವಾಗಿ ಗಾಯಗೊಂಡಿದ್ದ 8 ಮಂದಿಯನ್ನು ಪಾಂಡವಪುರ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಚಿಕಿತ್ಸೆಗಾಗಿ ರವಾನಿಸಲಾಗಿದೆ. ತೀವ್ರವಾಗಿ ಗಾಯಗೊಂಡವರೂ ಸೇರಿದಂತೆ ಎಲ್ಲಾ ಗಾಯಾಳುಗಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ಭಾರತೀಯ ಸ್ಟೇಟ್ ಬ್ಯಾಂಕ್ ವತಿಯಿಂದ ಕನ್ನಡ ರಾಜ್ಯೋತ್ಸವ

ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ



ಮೈಸೂರು, ನ.22(ಎಸ್‌ಪಿಎನ್)– ದೇಶದಲ್ಲೇ ಕರ್ನಾಟಕ ರಾಜ್ಯ ಎಲ್ಲಾ ರಂಗದಲ್ಲೂ ಹಲವು ವಿಶೇಷತೆಗಳಿಂದ ಗುರುತಿಸಿಕೊಂಡಿದ್ದು, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಸೇರಿದಂತೆ ಒಟ್ಟು ಏಳು ಬೃಹತ್ ಬ್ಯಾಂಕ್‌ಗಳನ್ನು ನೀಡಿ, ಹಣಕಾಸು ವಲಯಕ್ಕೆ ತನ್ನದೇ ಆದ ಕೊಡುಗೆ ನೀಡಿದೆ ಎಂದು ಭಾರತೀಯ ಸ್ಟೇಟ್ ಬ್ಯಾಂಕ್ ಆಡಳಿತ ಕಚೇರಿ(ಮೈಸೂರು)ಯ ಉಪ ಪ್ರಧಾನ ವ್ಯವಸ್ಥಾಪಕ ರಾಜೇಶ್‌ಕುಮಾರ್ ಚೌಧರಿ ಅಭಿಪ್ರಾಯಪಟ್ಟರು.

ಮೈಸೂರು ಕುವೆಂಪುನಗರದ ಗಾನಭಾರತೀ ಸಭಾಂಗಣದಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ ಆಡಳಿತ ಕಚೇರಿ(ಮೈಸೂರು) ವತಿಯಿಂದ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ –2023ರ ಅಂಗವಾಗಿ ಹಿರಿಯ ರಂಗಕರ್ಮಿ ಯು.ಎಸ್.ರಾಮಣ್ಣ ಹಾಗೂ ಸಂಶೋಧಕಿ ವೈ.ಸಿ.ಭಾನುಮತಿ ಅವರಿಗೆ ಸನ್ಮಾನ ಹಾಗೂ ಮೈಸೂರು ವಿಭಾಗದಲ್ಲಿ ವಿವಿಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿ ಮಾತನಾಡಿದರು.

ಮೈಸೂರು ಸಂಸ್ಥಾನದಲ್ಲಿ ದಿವಾನರಾಗಿದ್ದ ಸರ್.ಎಂ.ವಿಶ್ವೇಶ್ವರಯ್ಯ ಅವರ ಸ್ಮರಣೆ ಅತ್ಯಗತ್ಯ. ಏಕೆಂದರೆ ಅವರು ಇಂಜಿನಿಯರಿಂಗ್ ಮಹಾನ್ ಸಾಧನೆ ಮಾಡಿದವರು. ಅಲ್ಲದೆ, ಅವರ ಅಧಿಕಾರಾವಧಿಯಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಸ್ಥಾಪನೆಯಾಯಿತು. ಇದರ ಜೊತೆಗೆ ಏಳು ಬೃಹತ್ ಬ್ಯಾಂಕ್‌ಗಳು ಸ್ಥಾಪನೆಯಾಗಿರುವುದು ಕರ್ನಾಟಕದಲ್ಲಿ ಎಂಬುದು ಹೆಮ್ಮೆಯ ವಿಷಯ ಎಂದು ತಿಳಿಸಿದರು.

ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಪುರಂದರ ದಾಸರ ಕೊಡುಗೆ ಅಪಾರ. ಅದೇ ರೀತಿ ದಾಸ ಸಾಹಿತ್ಯದಲ್ಲಿ ಕನಕದಾಸರು ಸೇರಿದಂತೆ ಇತರರ ಸಾಧನೆ ಅಪರಿಮಿತ. ಶಿಕ್ಷಣ, ಆರೋಗ್ಯ, ಸಾಂಸ್ಕೃತಿಕ ವಿಷಯದಲ್ಲಿ ದೇಶದಲ್ಲೇ ಕರ್ನಾಟಕ ವಿಶೇಷ ಸ್ಥಾನಮಾನ ಪಡೆದಿದೆ. ಅಲ್ಲದೆ, ಸಂಗೀತ ಕ್ಷೇತ್ರದ ದಿಗ್ಗಜರಾದ ವಿದ್ವಾನ್ ಭೀಮಸೇನ್ ಜೋಷಿ, ವಿದ್ವಾನ್ ಮಲ್ಲಿಕಾರ್ಜುನ ಮನ್ಸೂರ್, ವಿದುಷಿ ಡಾ.ಗಂಗೂಬಾಯಿ ಹಾನಗಲ್ ಸೇರಿದಂತೆ ಅನೇಕರು ಅಪರಿಮಿತ ಸಾಧನೆ ಮಾಡಿ, ಈ ನೆಲದ ಗೌರವ ಹೆಚ್ಚಿಸಿದ್ದಾರೆ ಎಂದರು.


ಕೊಡಗು ಜಿಲ್ಲೆ ಹಾಕಿ ಆಟಕ್ಕೆ ಪ್ರಸಿದ್ಧ: ಕರ್ನಾಟಕ ಹಣಕಾಸಿನ ನಿರ್ವಹಣೆಯಲ್ಲಿ ದೇಶದಲ್ಲೇ 6ನೇ ಸ್ಥಾನ ಗಳಿಸಿದೆ. ಪ್ರವಾಸೋದ್ಯಮ ಹಾಗೂ ಸಾಂಸ್ಕೃತಿಕ ಕ್ಷೇತ್ರದ ಸಾಧನೆಯನ್ನು ದೇಶದ ಇತರೆ ರಾಜ್ಯಗಳೂ ಊಹಿಸಿದಷ್ಟು ಅಭಿವೃದ್ಧಿಗೊಂಡಿರುವುದು ಕರ್ನಾಟಕದಲ್ಲಿ ಎಂಬುದು ಹೆಮ್ಮೆಯ ವಿಷಯ. ಪಕ್ಕದ ಕೊಡಗು ಜಿಲ್ಲೆಯಲ್ಲಿ ಭಾರತೀಯ ಸೇನೆಗೆ ಹಾಗೂ ಹಾಕಿ ಆಟಕ್ಕೆ ಅತೀ ಹೆಚ್ಚು ಯುವಕರು ಆಯ್ಕೆಯಾಗುವುದು ಈ ಮಣ್ಣಿನ ಸಾಧನೆಗೆ ಹಿಡಿದ ಕೈಗನ್ನಡಿ ಎಂದರು.

ಸನ್ಮಾನ: ಈ ವೇಳೆ ಮೈಸೂರು ವಿವಿ ಜಾನಪದ ವಸ್ತು ಸಂಗ್ರಹಾಲಯದ ನಿವೃತ್ತಿ ಕ್ಯೂರೇಟರ್ ಹಾಗೂ ಹಿರಿಯ ರಂಗಕರ್ಮಿ ಯು.ಎಸ್.ರಾಮಣ್ಣ, ಮೈಸೂರು ವಿವಿ ಗ್ರಂಥ ಸಂಪಾದಕಿ ವೈ.ಸಿ.ಭಾನುಮತಿ ಅವರನ್ನು ಸನ್ಮಾನಿಸಲಾಯಿತು.

ಎಸ್‌ಬಿಐ ಉದ್ಯೋಗಿಗಳಿಗೆ ಬಹುಮಾನ ವಿತರಣೆ: ಅಲ್ಲದೆ ಕನ್ನಡ ರಾಜ್ಯೋತ್ಸವ ಅಂಗವಾಗಿ ಎಸ್‌ಬಿಐ ಬ್ಯಾಂಕ್ ಉದ್ಯೋಗಿಗಳಿಗಾಗಿ ಆಯೋಜಿಸಿದ್ದ ಕನ್ನಡ ಅಂತ್ಯಾಕ್ಷರಿ, ಕನ್ನಡ ಮಾತನಾಡುವ ಸ್ಪರ್ಧೆ ರಸಪ್ರಶ್ನೆ, ವೇಷಭೂಷಣ ಹಾಗೂ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ಮಂಡ್ಯ ಎಸ್‌ಬಿಐ ಶಾಖೆಯ (ಆರ್‌ಬಿಓ) ಮ್ಯಾನೇಜರ್ ಎಚ್.ಮನು (ಪ್ರ), ಚಾಮರಾಜನಗರದ (ಆರ್‌ಬಿಓ) ಅಸೋಸಿಯೇಟ್ ಪಿ.ಎಸ್.ಮನೋಜ್ ಕುಮಾರ್(ದ್ವಿ), ಮೈಸೂರು ಮಾರುಕಟ್ಟೆ ಶಾಖೆಯ ಸೀನಿಯರ್ ಅಸೋಸಿಯೇಟ್ ರಂಜಿನಿಮಂಕರ್ (ತೃ), ಕೃಷ್ಣಮೂರ್ತಿಪುರಂ ಶಾಖೆಯ ಸೀನಿಯರ್ ಅಸೋಸಿಯೇಟ್ ಎಂ.ಅರ್ಪಿತಾ ಸಮಾಧಾನಕರ ಬಹುಮಾನ ಪಡೆದಿದ್ದಾರೆ. ಕನ್ನಡ ಅಂತ್ಯಾಕ್ಷರಿಯಲ್ಲಿ ಚಾಮರಾಜನಗರದ ಡೆಪ್ಯುಟಿ ಮಾನೇಜರ್ ಲೋಹಿತ್ ಜಿ ಪಾರ್ಸಿ(ತೃ), ಸೀನಿಯರ್ ಅಸೋಸಿಯೇಟ್ ಎಂ.ರಜತ ಸಮಾಧಾನಕರ ಬಹುಮಾನ ಪಡೆದಿದ್ದಾರೆ. ಗಾಯನ ಸ್ಪರ್ಧೆಯಲ್ಲಿ ಮೈಸೂರು ಚೀಫ್ ಅಸೋಸಿಯೇಟ್(ಎಚ್‌ಎಲ್‌ಎಸ್‌ಟಿ) ರಾಮಾನುಜನ್ ಮುಸ್ತಕಮ್(ಪ್ರ), ಕನ್ನಡ ಅಂತ್ಯಾಕ್ಷರಿ ಮತ್ತು ಗಾಯನದಲ್ಲಿ ಮೈಸೂರು(ಎಓ) ಸೀನಿಯರ್ ಅಸೋಸಿಯೇಟ್ ಕೆ.ಪಿ.ಶೋಭಿತಾ ಕ್ರಮವಾಗಿ ದ್ವಿ ಮತ್ತು ತೃತೀಯ ಸ್ಥಾನ ಪಡೆದಿದ್ದಾರೆ. ಗಾಯನದಲ್ಲಿ ಮೈಸೂರು(ಎಓ) ಡೆಪ್ಯುಟಿ ಮ್ಯಾನೇಜರ್ ಎಸ್.ರಶ್ಮಿ (ದ್ವಿ), ಅಂತ್ಯಾಕ್ಷರಿಯಲ್ಲಿ ಎಂ.ಪಿ.ವಿವೇಕ್(ಪ್ರ) ಮತ್ತು ಗಾಯನದಲ್ಲಿ ಸಮಾಧಾನಕರ, ಶ್ರೀಕೃಷ್ಣರಾಜ್ ಭಟ್ ಅಂತ್ಯಾಕ್ಷರಿಯಲ್ಲಿ (ದ್ವಿ) ಮತ್ತು ಗಾಯನದಲ್ಲಿ ಸಮಾಧಾನಕರ, ಗಾಯನದಲ್ಲಿ ಉಪ್ಪಾರ್ ಪ್ರತಾಪ್ ಸಮಾಧಾನಕರ, ಅಂತ್ಯಾಕ್ಷರಿಯಲ್ಲಿ ವೈ.ಶಿವಲೀಲಾ ಕೋರಿ(ಪ್ರ), ಕನ್ನಡ ಮಾತನಾಡುವ ಸ್ಪರ್ಧೆಯಲ್ಲಿ ಬಿ.ನಳಿನಾಕ್ಷಿ ಪ್ರಥಮ, ಕ್ಯಾಪ್ಟನ್ ಅರ್ಚನಾ ಸಿಂಗ್ (ದ್ವಿ), ಅಂತ್ಯಾಕ್ಷರಿಯಲ್ಲಿ ನಂಜುಂಡಯ್ಯ ಆನಂದಯ್ಯ(ಪ್ರ), ಎನ್.ಶ್ವೇತಾ (ಪ್ರ), ಕೆ.ಸಿ.ಸಹನಾ(ಪ್ರ), ಎಂ.ಮಂಜುನಾಥ(ದ್ವಿ), ಎಂ.ಸೌಜನ್ಯ(ದ್ವಿ), ಎನ್.ಎಂ.ಮಾಧುರಿ(ದ್ವಿ), ಎಸ್.ವಂದನಾ(ತೃ),ಎಚ್.ಕೆ.ಮಂಜುನಾಥ(ತೃ), ಸಿ.ನವೀನ್ ಕುಮಾರ್(ತೃ), ಕನ್ನಡ ಪ್ರಬಂಧ ಸ್ಪರ್ಧೆಯಲ್ಲಿ ಕೆ.ಬಿ.ಶೋಭಿತಾ(ಪ್ರ), ಸತ್ಯವತಿ (ದ್ವಿ), ಪ್ರಶಾಂತ್ (ತೃ),ಜಿ.ಎನ್.ಶಶಿಧರ್, ಎ.ಶೀಲವತಿ ಅವರು ಸಮಾಧಾನಕರ, ವೇಷಭೂಷಣ ಸ್ಪರ್ಧೆಯಲ್ಲಿ ನೀಲ್ (ಪ್ರ), ಯೂರಿ (ದ್ವಿ) ಸ್ಥಾನಗಳಿಸಿದ್ದಾರೆ.

ನಾಳೆ, ನಾಳಿದ್ದು ದಡದಕಲ್ಲಹಳ್ಳಿ ಶ್ರೀ ವೆಂಟಕರಮಣಸ್ವಾಮಿ, ವಿಭವಮೂರ್ತಿಸ್ವಾಮಿ ವಾರ್ಷಿಕೋತ್ಸವ; ಪೂಜಾ ಮಹೋತ್ಸವ

ಶಾಸಕ ಜಿ.ಟಿ.ದೇವೇಗೌಡರ ಹುಟ್ಟುಹಬ್ಬದ ಹಿನ್ನಲೆಯಲ್ಲಿ ಗ್ರಾಮಸ್ಥರಿಂದ ವಿಶೇಷ ಪೂಜೆ



ಮೈಸೂರು, ನ.22(ಎಂಕೆ)– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ದಡದಕಲ್ಲಹಳ್ಳಿಯ ಶ್ರೀ ವೆಂಕಟರಮಣಸ್ವಾಮಿ ವಿಭವಮೂರ್ತಿಸ್ವಾಮಿ ದೇವಸ್ಥಾನದ ಐದನೇ ವರ್ಷದ ವಾರ್ಷಿಕೋತ್ಸವ ಹಾಗೂ ಪೂಜಾ ಮಹೋತ್ಸವವನ್ನು ಗ್ರಾಮಸ್ಥರು ಹಮ್ಮಿಕೊಂಡಿದ್ದಾರೆ.

ನ.25, ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡ ಜನ್ಮದಿನವಾಗಿದ್ದು ರಾಜ್ಯದಲ್ಲಿ ಬರ ಇರುವ ಹಿನ್ನಲೆಯಲ್ಲಿ ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಶಾಲಾ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ, ಬಡವರಿಗೆ ನೆರವು, ಅನಾಥಾಶ್ರಮ, ವೃದ್ಧಾಶ್ರಮಗಳಿಗೆ ಸಹಾಯ ಮಾಡುವ ಮೂಲಕ ಅವರ ಹುಟ್ಟುಹಬ್ಬವನ್ನು ಆಚರಿಸುತ್ತಿರುವ ಅವರ ಅಭಿಮಾನಿಗಳು, ಬೆಂಬಲಿಗರು ಹಾಗೂ ದಡದಕಲ್ಲಹಳ್ಳಿ ಗ್ರಾಮಸ್ಥರು ಕಳೆದ ವರ್ಷಕ್ಕಿಂತಲೂ ಅದ್ಧೂರಿಯಾಗಿ ಶ್ರೀ ವೆಂಕಟರಮಣಸ್ವಾಮಿ ವಿಭವಮೂರ್ತಿ ಸ್ವಾಮಿ ದೇವಸ್ಥಾನದ ವಾರ್ಷಿಕೋತ್ಸವ ಹಾಗೂ ಪೂಜಾ ಮಹೋತ್ಸವ ಆಚರಿಸಲು ನಿರ್ಧರಿಸಿದ್ದಾರೆ.

ನ.24 ಮತ್ತು 25 ರಂದು ದೇವಸ್ಥಾನದಲ್ಲಿ ವಿಶೇಷ ದೀಪಾರಾಧನೆ, ಲಕ್ಷ್ಮೀನಾರಾಯಣ ಹೋಮ, ಪಂಚ ಸೂಕ್ತ ಹೋಮ, ವಿಷ್ಣು ಸಹಸ್ರನಾಮ ಪಾರಾಯಣ, ಅಲಂಕಾರ ಸೇವೆ ಕಳಸಾರಾಧನೆ ಸೇರಿದಂತೆ ಹಲವು ಬಗೆಯ ಪೂಜಾ ಕೈಂಕರ್ಯಗಳು ನೆರವೇರಲಿವೆ. ವಾರ್ಷಿಕೋತ್ಸವ ಹಾಗೂ ಪೂಜಾ ಮಹೋತ್ಸವಕ್ಕೆ ಹೆಚ್ಚಿನ ಸಂಖ್ಯೆಯ ಭಕ್ತಾದಿಗಳು ಆಗಮಿಸುವಂತೆ ಗ್ರಾಮಸ್ಥರು, ಮುಖಂಡರು ಹಾಗೂ ಯಜಮಾನರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಶರಣ ನುಲಿಯ ಚಂದಯ್ಯ ಜಯಂತಿ ಆಚರಣೆ



ಪಿರಿಯಾಪಟ್ಟಣ, ನ.22–ಪಟ್ಟಣದ ಡಿ.ದೇವರಾಜ ಅರಸು ಕಲಾ ಭವನದಲ್ಲಿ ಶಿವಶರಣ ನುಲಿಯ ಚಂದಯ್ಯನವರ 916ನೇ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಶಿವಶರಣ ನುಲಿಯ ಚಂದಯ್ಯ ಜಯಂತಿ ಆಚರಣಾ ಸಮಿತಿ ವತಿಯಿಂದ ಆಯೋಜಿಸಿದ್ದ ಜಯಂತಿ ಕಾರ್ಯಕ್ರಮವನ್ನು ತಾಲೂಕು ಆಶ್ರಯ ಸಮಿತಿ ಅಧ್ಯಕ್ಷ ನಿತಿನ್ ಕೆ.ವೆಂಕಟೇಶ್ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಬಸವಣ್ಣನವರ ಸಮಕಾಲೀನರಾದ ಶರಣ ನುಲಿಯ ಚಂದಯ್ಯ ಅವರ ಜಯಂತಿ ಆಚರಿಸುತ್ತಿರುವುದು ಶ್ಲಾಘನೀಯ. ಮುಂದಿನ ದಿನಗಳಲ್ಲಿ ತಾಲೂಕು ಕೊರಮ ಸಮುದಾಯ ಅಭಿವೃದ್ಧಿಗೆ ಸಂಪೂರ್ಣ ಸಹಕಾರ ನೀಡಲಾಗುವುದು ಎಂದು ಭರವಸೆ ನೀಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಅಖಿಲ ಕರ್ನಾಟಕ ಕುಳುವ ಮಹಾಸಂಘದ ಜಂಟಿ ಕಾರ್ಯದರ್ಶಿ ಕಿರಣ್ ಕುಮಾರ್ ಕೊತ್ತಗೆರೆ ಮಾತನಾಡಿ, ಪಿರಿಯಾಪಟ್ಟಣ ತಾಲೂಕಿನಲ್ಲಿ 6 ಸಾವಿರಕ್ಕೂ ಹೆಚ್ಚು ಜನಸಂಖ್ಯೆಯಲ್ಲಿ ಕೊರಮ ಸಮುದಾಯ ಮೂಲತಃ ಕೃಷಿ ಅವಲಂಬಿಸಿದ್ದು, ಬಿದಿರಿನ ಬುಟ್ಟಿ ಎಣೆಯುವ ಸಮುದಾಯ ಮುಖ್ಯ ಕುಲ ಕಸುಬಾಗಿದೆ. ಸಮಾಜದಲ್ಲಿ ಒಂದು ಸಮುದಾಯವು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ ಮುಂದುವರಿಯಲು ರಾಜಕೀಯ ಸ್ಥಾನಮಾನ ದೊರೆಯಬೇಕೆಂದರೆ ಇಂತಹ ಕಾರ್ಯಕ್ರಮಗಳು ಹೆಚ್ಚಾಗಿ ಆಯೋಜಿಸುವುದು ಅವಶ್ಯ. ಡಿ.ದೇವರಾಜ ಅರಸುರವರು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಕೊರಮ ಸಮುದಾಯ 4 ಜನ ಶಾಸಕರಾಗಿದ್ದರು. ಆದರೆ ಈಗ ಒಬ್ಬರೂ ಇಲ್ಲ ಎಂದು ಹೇಳಿದರು.

ತಾಲೂಕು ಬಿಜೆಪಿ ಅಧ್ಯಕ್ಷ ರಾಜೇಗೌಡ, ಬೆಟ್ಟದಪುರ ಅನಿಕೇತನ ವಿದ್ಯಾಸಂಸ್ಥೆ ಸಂಸ್ಥಾಪಕ ಡಾ.ಜೆ. ಸೋಮಣ್ಣ, ಅಲೆಮಾರಿ ಸಮುದಾಯ ಮುಖಂಡ ಕುಪ್ಪೆ ನಾಗರಾಜು, ಅಖಿಲ ಕರ್ನಾಟಕ ಕುಳುವ ಮಹಾಸಂಘದ ಉಪಾಧ್ಯಕ್ಷ ವೆಂಕಟಾಚಲ, ಪತ್ರಕರ್ತ ಮೋಹನ್‌ಕಾಯಕ, ಶರಣ ನುಲಿಯ ಚಂದಯ್ಯ ಜಯಂತಿ ಆಚರಣಾ ಸಮಿತಿ ಅಧ್ಯಕ್ಷ ಕೆ.ಹೆಚ್.ಸತ್ಯನಾರಾಯಣ್, ಹೆಚ್.ಡಿ.ಕೋಟೆ ತಾಲೂಕು ಅಧ್ಯಕ್ಷ ನಾಗರಾಜು, ಟಿ.ನರಸೀಪುರ ತಾಲೂಕು ಮುಖಂಡ ರವಿಕುಮಾರ್, ದೊಡ್ಡ ಹರವೆ ಮುತ್ತುರಾಜ್, ಅಂಜನ್‌ಕುಮಾರ್, ಸುರೇಶ್ ಸುಂಡವಾಳು ಮತ್ತಿತರರಿದ್ದರು.

ಫಿಲಿಪೈನ್ಸ್ ಕ್ರೀಡಾಕೂಟದ ಪದಕ ವಿಜೇತ ಹಿರಿಯರಿಗೆ ಸನ್ಮಾನ



ಮೈಸೂರು, ನ. 22– ಇತ್ತೀಚೆಗೆ ಫಿಲಿಪೈನ್ಸ್‌ನಲ್ಲಿ ನಡೆದ 22ನೇ ಏಷ್ಯನ್ ಮಾಸ್ಟರ್ಸ್ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಪದಕ ಪಡೆದವರು, ಆರನೇ ಸ್ಥಾನದೊಳಗೆ ಬಂದು, ಮುಂದಿನ ವರ್ಷ ಸ್ವೀಡನ್‌ನಲ್ಲಿ ನಡೆಯಲಿರುವ ಕ್ರೀಡಾಕೂಟಕ್ಕೆ ಆಯ್ಕೆಯಾಗಿರುವವರನ್ನು ಸನ್ಮಾನಿಸಲಾಯಿತು.

ಮೈಸೂರು ಜಿಲ್ಲಾ ಮಾಸ್ಟರ್ಸ್ ಅಥ್ಲೆಟಿಕ್ಸ್ ಅಸೋಸಿಯೇಷನ್ ವತಿಯಿಂದ ಈ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

70 ವರ್ಷ ಮೇಲ್ಪಟ್ಟವರ 400 ಮೀಟರ್ ಓಟದಲ್ಲಿ ಮಹದೇವು ಕಂಚಿನ ಪದಕ, 40 ವರ್ಷ ಮೇಲ್ಪಟ್ಟವರ 400 ಮೀ. ರಿಲೇ ಓಟದಲ್ಲಿ ನಾಗೇಂದ್ರ ಮುಳ್ಳೂರು ಬೆಳ್ಳಿ ಪದಕ ಪಡೆದಿದ್ದಾರೆ. ಇದಲ್ಲದೇ ಮಾದಪ್ಪ ಯೋಗೇಂದ್ರ, ಎಸ್. ಮಹದೇವು, ಎಚ್.ಎಂ. ಸುಜಾತಾ, ಜಿ.ಜಿ. ರಘುನಂದನ್, ಮಲ್ಲಯ್ಯ ಕೃಷ್ಣಯ್ಯ ಅವರು ಆರರೊಳಗಿನ ಸ್ಥಾನ ಗಳಿಸಿ, ಮುಂದಿನ ವರ್ಷ ಸ್ವೀಡನ್‌ನಲ್ಲಿ ನಡೆಯಲಿರುವ ಕ್ರೀಡಾಕೂಟಕ್ಕ ಅರ್ಹತೆ ಗಳಿಸಿದ್ದಾರೆ.

ಮುಖ್ಯ ಅತಿಥಿಯಾಗಿದ್ದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಮೈಸೂರು ಜಿಲ್ಲೆಯ ಹಿರಿಯ ಕ್ರೀಡಾಪಟುಗಳು, ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಯಾವುದೇ ಕ್ರೀಡಾಕೂಟಕ್ಕೆ ಹೋದರೂ ಪದಕಗಳನ್ನು ಗಳಿಸಿಕೊಂಡು ಬರುತ್ತಿದ್ದಾರೆ. ಇವರ ಸಾಧನೆ ಯುವಕರಿಗೆ ಸ್ಫೂರ್ತಿಯಾಗಲಿ ಎಂದರು.

ಇವತ್ತು ಜನರಲ್ಲಿ ಆರೋಗ್ಯದ ಬಗ್ಗೆ ಕಾಳಜಿ ಬಂದಿದೆ. ಇದರಿಂದಾಗಿಯೇ ನಾನಾ ಬಗೆಯ ದೈಹಿಕ ಕಸರತ್ತುಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಶ್ರೀಮಂತಿಕೆ ಎಷ್ಟೇ ಇದ್ದರೂ ಆರೋಗ್ಯ ಇಲ್ಲದಿದ್ದರೆ ವ್ಯರ್ಥ. ಆದ್ದರಿಂದ ಪ್ರತಿಯೊಬ್ಬರೂ ಆರೋಗ್ಯ ಕಾಪಾಡಿಕೊಳ್ಳುವುದರ ಕಡೆ ಗಮನಹರಿಸಬೇಕು. ಜೊತೆಗೆ ಕ್ರೀಡಾ ಸಾಧಕರಿಗೆ ಪ್ರೋತ್ಸಾಹ ನೀಡಿ, ಇನ್ನೂ ಹೆಚ್ಚಿನ ಸಾಧನೆ ಮಾಡಲು ಪ್ರೇರೇಪಿಸಬೇಕು ಎಂದು ಅವರು ಹೇಳಿದರು.

ಸಂಘದ ಅಧ್ಯಕ್ಷ ಪಿ.ಜಿ. ಸತ್ಯನಾರಾಯಣ್, ಉಪಾಧ್ಯಕ್ಷ ಜಿ.ಎನ್. ಸೋಮಶೇಖರ್, ಅಥ್ಲೆಟಿಕ್ ತರಬೇತುದಾರ ಜಿ.ಆರ್. ಪ್ರಭಾಕರ್, ಎಂ.ಪಿ.ಚಂದ್ರಶೇಖರ್, ಬಿ.ಕೆ. ಸೋಮಶೇಖರ್, ಮಹದೇವಯ್ಯ, ಎಚ್.ಆರ್. ರಾಮಸ್ವಾಮಿ, ಪಿ.ಜಿ. ಚಂದ್ರಶೇಖರ್, ಪೊಲೀಸ್ ಸುಬ್ಬಣ್ಣ, ಸಿ.ಕೆ. ಮುರಳೀಧರನ್, ಮಡಿಲು ಟ್ರಸ್ಟಿನ ಲೋಕರಾಜ್ ಅರಸು ಇತರರು ಉಪಸ್ಥಿತರಿದ್ದರು.

ಕ್ಯಾನ್ಸರ್, ಮೂತ್ರಪಿಂಡ ಉಚಿತ ತಪಾಸಣಾ ಶಿಬಿರ

ಮೈಸೂರು, ನ. 22– ಮೈಸೂರಿನ ಕ್ಲಿಯರ್‌ಮೆಡಿ ರೇಡಿಯೆಂಟ್ ಆಸ್ಪತ್ರೆಯು ಕೊಳ್ಳೇಗಾಲದ ಪ್ರಸಾದ್ ಡಯಾಗ್ನೋಸ್ಟಿಕ್ ಸೆಂಟರ್ ಸಹಯೋಗದೊಂದಿಗೆ ನ. 24 ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1.30 ರವರೆಗೆ ಪ್ರಸಾದ್ ಡಯಾಗ್ನೋಸ್ಟಿಕ್ ಸೆಂಟರ್‌ನಲ್ಲಿ ಕ್ಯಾನ್ಸರ್, ಮೂತ್ರಪಿಂಡ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 7026542580 ಸಂಪರ್ಕಿಸಬಹುದು.

ಪ್ರೊ.ಶೇಷಣ್ಣ ದೈಹಿಕ ಶಿಕ್ಷಣ, ಕ್ರೀಡೆ ದತ್ತಿ ಉಪನ್ಯಾಸ ಕಾರ್ಯಕ್ರಮ



ಮೈಸೂರು, ನ. 22– ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಮೈಸೂರು ವಿಶ್ವವಿದ್ಯಾನಿಲಯ ಸಂಯೋಜಿತ ಮತ್ತು ಘಟಕ ಕಾಲೇಜುಗಳು ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ಕ್ರೀಡಾಪಟುಗಳಿಗೆ 2023ನೇ ಸಾಲಿನ ಪ್ರೊ. ಶೇಷಣ್ಣ ದೈಹಿಕ ಶಿಕ್ಷಣ ಮತ್ತು ಕ್ರೀಡೆ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಬೆಂಗಳೂರು ವಿಶ್ವವಿದ್ಯಾನಿಲಯ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಸುಂದರ ರಾಜ್ ಅರಸು ಅವರು ನಾಯಕತ್ವದ ಕೌಶಲಗಳು, ವಿಧಗಳು ವಿಷಯದ ಬಗ್ಗೆ ಪ್ರೊ. ಶೇಷಣ್ಣ ದೈಹಿಕ ಶಿಕ್ಷಣ ಮತ್ತು ಕ್ರೀಡೆ ದತ್ತಿಯ ಹನ್ನೆರಡನೇ ವರ್ಷದ ಉಪನ್ಯಾಸವನ್ನು ನೀಡಿದರು.


ಈ ಸಮಾರಂಭದ ಅಧ್ಯಕ್ಷತೆಯನ್ನು ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್ ವಹಿಸಿದ್ದರು. ದೈಹಿಕ ಶಿಕ್ಷಣ ಕಾಲೇಜು ನಿವೃತ್ತ ಪ್ರಾಂಶುಪಾಲರಾದ ಪ್ರೊ. ಶೇಷಣ್ಣ ಹಾಗೂ ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ವಿಶ್ರಾಂತ ನಿರ್ದೇಶಕ ಡಾ.ಸಿ.ಕೃಷ್ಣ ಮತ್ತು ಉಪ ನಿರ್ದೇಶಕ ಡಾ.ಪಿ.ಕೃಷ್ಣಯ್ಯ ಉಪಸ್ಥಿತರಿದ್ದರು.

ಮ್ಯಾನೇಜ್‌ಮೆಂಟ್ ಫೆಸ್ಟ್‌ನಲ್ಲಿ ಬಹುಮಾನ



ಮೈಸೂರು, ನ. 22– ಮೈಸೂರಿನ ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾ ವಿದ್ಯಾಲಯದ ಬಿಸಿನೆಸ್ ಅಡ್ಮಿನಿಸ್ಟ್ರೇಷನ್ ವಿಭಾಗದ ವಿದ್ಯಾರ್ಥಿಗಳು ಮೈಸೂರಿನ ಟೆರೇಷಿಯನ್ ಕಾಲೇಜು ನಡೆಸಿದ ಮ್ಯಾನೇಜ್‌ಮೆಂಟ್ ಫೆಸ್ಟ್‌ನಲ್ಲಿ ಭಾಗವಹಿಸಿ ಅತ್ಯಧಿಕ ಬಹುಮಾನವನ್ನು ಗಳಿಸಿದ್ದಾರೆ.

ರಸಪ್ರಶ್ನೆ: 3ನೇ ಬಹುಮಾನ (ಪ್ರತೀಕ್ಷ ಹೆಗ್ಡೆ ಮತ್ತು ದೀಪ್ತಿ ಎಸ್ ಆರ್ ತೃತೀಯ ಬಿಬಿಎ), **ಇ–ಸ್ಟಾರ್ಟ್ ಅಪ್:** 2ನೇ ಬಹುಮಾನ(ಸಂಜನಾ.ಪಿ ಮತ್ತು ಪ್ರೇರಣಾ ಅಂತಿಮ ಬಿಬಿಎ), **ಶಾರ್ಕ್ ಟ್ಯಾಂಕ್:** 2ನೇ ಬಹುಮಾನ (ಬಿ.ಬಿ.ಫಾತಿಮಾ ಮತ್ತು ಸೈರುಫಾ ಜಈಬ್), **ಹುಚ್ಚು ಜಾಹೀರಾತುಗಳು:** 2 ನೇ ಬಹುಮಾನ (ನಾಗಅಶ್ವಿನಿ, ವಿಕಾಸ್ನಿ, ತಸ್ವಿ ಗಂಗಮ್ಮ, ಶ್ರೀಮತಿ ದೀಕ್ಷಾ ಮತ್ತು ಮಿಸ್ ಪ್ರತೀಕ್ಷಾ ದ್ವಿತೀಯ ಬಿಬಿಎ) ವಿದ್ಯಾರ್ಥಿನಿಯರು ಬಹುಮಾನ ಪಡೆದಿದ್ದಾರೆ. ಪ್ರಾಂಶುಪಾಲ ಪ್ರೊಸಾಯಿನಾಥ್ ಮಲ್ಲಿಗೆಮಾಡು ಮಾತನಾಡಿ, ಈ ಗೆಲುವುಗಳು ಅವರ ಸಮರ್ಪಣೆ, ಕಾರ್ಯ ತಂತ್ರದ ಚಿಂತನೆ ಮತ್ತು ಸೃಜನಶೀಲತೆಯನ್ನು ಪ್ರತಿಬಿಂಬಿಸುತ್ತವೆ ಎಂದರು.



ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಸಾರಥ್ಯದಲ್ಲಿ 23ನೇ ವಾರ್ಡಿನ ಅಧ್ಯಕ್ಷರಾಗಿ ಆನಂದ್ ಮತ್ತು ದೇವರಾಜ ಬ್ಲಾಕ್ ಪ್ರಧಾನ ಕಾರ್ಯದರ್ಶಿ ಆಗಿ ಮಂಜುನಾಥ್ ಆಯ್ಕೆಯಾಗಿದ್ದು, ಅವರನ್ನು ಮೈಸೂರು ನಗರ ಕಾಂಗ್ರೆಸ್ ಕಚೇರಿಯಲ್ಲಿ ಪಕ್ಷದ ನಗರಾಧ್ಯಕ್ಷ ಆರ್.ಮೂರ್ತಿ ಅಭಿನಂದಿಸಿದರು. ಪಾಲಿಕೆ ಮಾಜಿ ಸದಸ್ಯ ನಾಗಭೂಷಣ, ದೇವರಾಜ ಬ್ಲಾಕ್ ಅಧ್ಯಕ್ಷ ಸುಂದರಕುಮಾರ್, ಮುಖಂಡರಾದ ರಾಜೀವ್, ಶ್ರೀನಿವಾಸ್, ಜ್ಞಾನೇಶ್, ಮಹದೇವ್, ಹಿರೇಗೌಡ, ಜಗದೀಶ್, ವಿನಯ್, ರವಿಕಿರಣ್, ಜಗ್ಗು ಮಂಜೇಗೌಡ, ಪ್ರಶಾಂತ್, ರಾಜು, ಶ್ರೀಕಾಂತ್, ಚಂದ್ರಶೇಖರ್, ಚೇತನ್, ಮಂಜುನಾಥ್, ಮಂಗಳಮ್ಮ, ಶಾಂತಮ್ಮ, ಮಂಜುಳಾ, ಸಂಜಯ್, ಪವನ್ ಚಿತ್ರದಲ್ಲಿ ಇದ್ದಾರೆ.

ವಿಶ್ವದ ಪರಿಪೂರ್ಣ 3 ಭಾಷೆಗಳಲ್ಲಿ ಕನ್ನಡವೂ ಒಂದು

● ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಅಭಿಮತ ● ಸೈನ್ಯ, ಕ್ರೀಡೆ, ಕಲೆಯಲ್ಲಿ ಕನ್ನಡಿಗರ ಸಂಖ್ಯೆ ಕ್ಷೀಣಿಸುತ್ತಿದೆ ● ಕ್ರೀಡೆ, ಕಲೆಯಲ್ಲಿ ಸಾಧನೆ ಮಾಡಲು ಕಠಿಣ ಪರಿಶ್ರಮ ಅಗತ್ಯ



ಮೈಸೂರು, ನ.22(ಎಂಟಿವೈ)– ವಿಶ್ವದ ಪರಿಪೂರ್ಣ ಶ್ರೇಷ್ಠ 3 ಭಾಷೆಗಳಲ್ಲಿ ಕನ್ನಡವೂ ಒಂದಾಗಿರುವುದು ಹೆಮ್ಮೆ ಪಡುವ ಸಂಗತಿ ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ, ನಾಡೋಜ ಡಾ.ಮಹೇಶ್ ಜೋಶಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸಭಾಂಗಣದಲ್ಲಿ ಬುಧವಾರ ಕಾಲೇಜಿನ ಸ್ನಾತಕ ವಿಭಾಗದ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಭಾಷೆ ಅತ್ಯಂತ ಶ್ರೇಷ್ಠ ಭಾಷೆ. ಆದರೆ, ಆಂಗ್ಲ ಭಾಷೆಯ ವ್ಯಾಮೋಹದಲ್ಲಿರುವವರಿಗೆ ಕನ್ನಡದ ಹಿರಿಮೆ ಅರ್ಥವಾಗುತ್ತಿಲ್ಲ. ಇತ್ತೀಚೆಗೆ ಅಮೇರಿಕಾದಲ್ಲಿ ನಡೆದ ಭಾಷೆಗಳಿಗೆ ಸಂಬಂಧಿಸಿದ ಸಂಶೋಧನಾ ಸ್ಪರ್ಧೆಯಲ್ಲಿ ಜಗತ್ತಿನ 7113 ಭಾಷೆಗಳು ಪ್ರಸ್ತಾಪವಾಗಿದ್ದವು. ಕಠಿಣ ಮಾನದಂಡದೊಂದಿಗೆ ನಡೆದ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ 3600ಕ್ಕೂ ಹೆಚ್ಚು ಭಾಷೆಗಳಿಗೆ ಲಿಪಿಯೇ ಇಲ್ಲ. ಇಂಗ್ಲೀಷ್‌ನಲ್ಲಿ ಕೆಲವು ಅಕ್ಷರ ಸೈಲೆಂಟ್ ಆಗಿರುತ್ತವೆ ಎನ್ನುತ್ತಾರೆ. ಈ ಕಾರಣದಿಂದ ಸ್ಪರ್ಧೆಯಿಂದ ಇಂಗ್ಲೀಷ್ ಭಾಷೆ ಆರಂಭಿಕ ಹಂತದಲ್ಲೇ ನಿರ್ಗಮಿಸಿತು. ದೇಶದಲ್ಲಿ ಅತಿ ಹೆಚ್ಚು ಜನ ಮಾತನಾಡುವ ಹಿಂದಿ ಭಾಷೆಯಲ್ಲಿ ಸ್ತ್ರೀಲಿಂಗ, ಪುಲ್ಲಿಂಗ ಮಾತ್ರ ಇರುತ್ತದೆ. ನಪುಂಸಕ ಲಿಂಗಕ್ಕೆ ಪ್ರಾಧಾನ್ಯತೆ ಇಲ್ಲ. ಕೆಲವು ಸಂದರ್ಭದಲ್ಲಿ ಮಾತನಾಡುವಾಗ ಸ್ತ್ರೀಲಿಂಗಕ್ಕೂ ಪುಲ್ಲಿಂಗದಂತೆ ಸಂಬೋಧಿಸಲಾಗುತ್ತದೆ. ಈ ಕಾರಣದಿಂದ ಹಿಂದಿ ಭಾಷೆಯೂ ಸ್ಪರ್ಧೆಯಿಂದ ನಿರ್ಗಮಿಸಿತು. ಕನ್ನಡ ಭಾಷೆಗೆ ಲಿಪಿ, ವ್ಯಂಜನವಿದೆ. ಭಾಷೆ ಸಮೃದ್ಧಿಯಾಗಿದೆ. ಈ ಎಲ್ಲಾ ಕಾರಣದಿಂದ ಕಠಿಣ ಮಾನದಂಡವಿದ್ದರೂ ಜಗತ್ತಿನ ಪರಿಪೂರ್ಣ 3 ಶ್ರೇಷ್ಠ ಭಾಷೆಗಳಲ್ಲಿ ಕನ್ನಡ ಒಂದಾಗಿ ಹೊರಹೊಮ್ಮಿದೆ. ಪುಣ್ಯವಂತರು ಮಾತ್ರ ಕರ್ನಾಟಕದಲ್ಲಿ ಜನಿಸುತ್ತಾರೆ. ಕನ್ನಡ ಭಾಷೆ ಮಾತೃಭಾಷೆಯಾಗಲು ಪುಣ್ಯ ಮಾಡಿರಬೇಕು ಎಂದರು.

ಮೊಬೈಲ್ ಬಳಕೆಯಿಂದ ಮಾನಸಿಕ ರೋಗ: ಪ್ರಸ್ತುತ ಸಂದರ್ಭದಲ್ಲಿ ಯುವ ಸಮೂಹ ಮೊಬೈಲ್ ಬಳಕೆಯ ಹಾವಳಿಗೆ ತುತ್ತಾಗಿ ಮಾನಸಿಕ ರೋಗಿಗಳಾಗಿ ಪರಿವರ್ತನೆಯಾಗುತ್ತಿದ್ದಾರೆ. ಇದನ್ನು ತಪ್ಪಿಸಲು ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಅನಿವಾರ್ಯವಾಗಿದೆ. ಸಂಶೋಧನೆಯೊಂದರಿಂದ ಯುವಜನರಲ್ಲಿ ಮೊಬೈಲ್ ಬಳಕೆ ಮಿತಿ ಮೀರಿರುವುದು ಕಂಡು ಬಂದಿದೆ. ಇದರಿಂದಾಗಿ ಯುವ ಸಮೂಹ ಮಾನಸಿಕ ರೋಗಿಗಳಾಗುತ್ತಿದ್ದಾರೆ. ಮನೋರೋಗಕ್ಕೆ ಮೊಬೈಲ್ ಬಳಕೆ ಕಾರಣವಾಗುತ್ತಿರುವುದು ವಿಷಾದನೀಯ ಎಂದು ಕಳವಳ ವ್ಯಕ್ತಪಡಿಸಿದರು.

ಕ್ರೀಡೆ, ಸೈನ್ಯ, ಕಲೆಯಲ್ಲಿ ಕನ್ನಡಿಗರ ಸಾಧನೆ ನೀರಸ: ಇತ್ತೀಚಿನ ವರ್ಷಗಳಲ್ಲಿ ಸೈನ್ಯ, ಕ್ರೀಡೆ ಹಾಗೂ ಕಲೆಯಲ್ಲಿ ಕನ್ನಡಿಗರ ಸಾಧನೆ ಕ್ಷೀಣಿಸುತ್ತಿದೆ. ಈ ಹಿಂದೆ ಕೊಡಗು ಜಿಲ್ಲೆಯಲ್ಲಿ ಮನೆಗೆ ಒಬ್ಬರು ಸೇನೆ ಸೇರುತ್ತಿದ್ದರು. ಸೇನೆಗೆ ಸೇರದೇ ಇರುವ ಮನೆಗಳಿಗೆ ಹೆಣ್ಣು ಕೊಡುವುದಿಲ್ಲ ಎಂಬ ಮಾತು ಕೇಳಿ ಬರುತ್ತಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಸೇನೆ ಸೇರುವ ಕನ್ನಡಿಗರ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ವಿಷಾದಿಸಿದರು. ಕ್ರೀಡೆ ಹಾಗೂ ಕಲಾ ವಿಭಾಗದಲ್ಲೂ ಕನ್ನಡಿಗಳ ಸಂಖ್ಯೆ ಕಡಿಮೆ ಇದೆ. ಈ ಹಿಂದೆ ಭಾರತದ ಕ್ರಿಕೆಟ್ ತಂಡದಲ್ಲಿ ಹಲವು ಕನ್ನಡ ದಿಗ್ಗಜ ಆಟಗಾರರಿದ್ದರು. ಇತರೆ ಕ್ರೀಡೆಗಳಲ್ಲೂ ಕನ್ನಡಿಗ ಕ್ರೀಡಾಪಟುಗಳ ಸಂಖ್ಯೆ ಕಡಿಮೆ ಇದೆ. ಕ್ರೀಡಾ ಚಟುವಟಿಕೆಯಲ್ಲಿ ಪಾಲ್ಗೊಳ್ಳುವುದರಿಂದ ಮಾನಸಿಕ ಹಾಗೂ ದೈಹಿಕ ಆರೋಗ್ಯ ಕಾಪಾಡಿಕೊಳ್ಳಬಹುದಾಗಿದೆ. ಈ ನಿಟ್ಟಿನಲ್ಲಿ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಲು ಎಲ್ಲರೂ ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ಇತ್ತೀಚೆಗೆ ನಡೆದ ವಿಶ್ವಕಪ್ ಫೈನಲ್ ಪಂದ್ಯದ ಕೆಲವು ದಿನಗಳ ಹಿಂದೆ ದೃಶ್ಯ ಮಾಧ್ಯಮಗಳಲ್ಲಿ ಜ್ಯೋತಿಷಿಗಳನ್ನು ಕೂರಿಸಿ ಸೋಲು–ಗೆಲುವಿನ ಭವಿಷ್ಯ, ಆಟಗಾರರ ಕುರಿತು ಭವಿಷ್ಯ ನುಡಿಯುತ್ತಿದ್ದರು. ಕ್ರೀಡಾ ಲೋಕದಲ್ಲಿ ಜೋತಿಷ್ಯ ತಳುಕು ಹಾಕುವ ಮೂಲಕ ಸಿದ್ಧಾಂತ ತಪ್ಪು ಹಾದಿಗೆ ತಲುಪಿದೆ ಎಂದು ವಿಷಾದಿಸಿದರು.

ಒಬ್ಬ ಉತ್ತಮ ಕಲಾಕಾರನಾಗಲು ಸತತ ಪರಿಶ್ರಮ ಮುಖ್ಯ. ಭೀಮಸೇನ್ ಜೋಷಿ ಅವರು ದಿನಕ್ಕೆ 18 ಗಂಟೆಗಳ ಕಾಲ ಕಠಿಣ ಅಭ್ಯಾಸ ಮಾಡುತ್ತಿದ್ದರು. ಹೀಗಾಗಿ ಅವರು ದೇಶದ ಅಗ್ರಗಣ್ಯ ಸಂಗೀತ ವಿದ್ವಾಂಸರಲ್ಲಿ ಒಬ್ಬರಾದರು. ಕ್ರೀಡೆ ಮತ್ತು ಯಾವುದೇ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗುವ ಪ್ರತಿಯೊಬ್ಬರು ಸತತ ಪರಿಶ್ರಮ, ಅಭ್ಯಾಸದ ಮೂಲಕ ಸಾಧನೆ ಮಾಡಬಹುದು ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ಮಹಾನಗರ ಪಾಲಿಕೆ (ಆಡಳಿತ ವಿಭಾಗ) ಉಪ ಆಯುಕ್ತ ಜಿ.ಎಸ್.ಸೋಮಶೇಖರ್, ಮೈಸೂರು ವಿಶ್ವ ವಿದ್ಯಾನಿಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗದ ನಿವೃತ್ತ ಅಧ್ಯಕ್ಷ ಪ್ರೊ.ಎಂ. ಚಂದ್ರಕುಮಾರ್, ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲರಾದ ಡಾ. ಎಸ್.ಪ್ರತಿಭಾ, ಸಾಂಸ್ಕೃತಿಕ ವೇದಿಕೆ ಸಂಚಾಲಕ ಡಾ.ಸಿ.ಆರ್.ಮಧುಸೂದನ್, ಕ್ರೀಡಾ ವೇದಿಕೆ ಸಂಚಾಲಕ ಎಂ.ಕಾರ್ತಿಕ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಕ್ರೈಸ್ಟ್ ಕಾಲೇಜಿನಲ್ಲಿ ನುಡಿ ಹಬ್ಬ ಆಚರಣೆ



ಮೈಸೂರು, ನ. 22– ಮೈಸೂರಿನ ಶ್ರೀರಾಂಪುರದಲ್ಲಿರುವ ಕ್ರೈಸ್ಟ್ ಕಾಲೇಜಿನಲ್ಲಿ 68ನೇ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ನುಡಿ ಹಬ್ಬ–2023 ಕಾರ್ಯಕ್ರಮ ಆಚರಿಸಲಾಯಿತು.

ಕನ್ನಡ ಅಧ್ಯಾಪಕ ವೇದರಾಜ್ ಕೂರ್ಗಲ್ ಮಾತನಾಡಿ, ಕನ್ನಡ ರಾಜ್ಯೋತ್ಸವ ನಾಡು–ನುಡಿ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವನ್ನು ಮೂಡಿಸಬೇಕು. ಕೇವಲ ಬಾವುಟ ಮತ್ತು ಚಪ್ಪಾಳೆಗಳಿಗೆ ಸೀಮಿತ ಆಗಬಾರದೆಂದು ತಿಳಿಸಿದರು. ಇದರ ಅಂಗವಾಗಿ ಕಾಲೇಜಿನ ವಿದ್ಯಾರ್ಥಿಗಳಿಗೆ ನೃತ್ಯ, ಆಶು ಭಾಷಣ, ಆಶು ಕವಿತ್ವ, ಕವಿ–ಕೃತಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಹಾಗೆಯೇ 'ಭಾವ ಕೋಗಿಲೆ' ಶೀರ್ಷಿಕೆಯಡಿಯಲ್ಲಿ ರಾಜ್ಯ ಮಟ್ಟದ ಭಾವಗೀತೆ ಆನ್‌ಲೈನ್ ಗಾಯನ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಇದರಲ್ಲಿ ವಿವೇಕಾನಂದ ಕಾಲೇಜು ಪುತ್ತೂರು ಇಲ್ಲಿನ ಶ್ರದ್ಧಾ ಎಸ್.ಭಟ್ ಪ್ರಥಮ ಸ್ಥಾನ ಹಾಗೂ ಶೇಷಾದ್ರಿಪುರಂ ಕಾಲೇಜು ಮೈಸೂರಿನ ರುಚಿತ ರಾಜೇಶ್ ದ್ವಿತೀಯ ಸ್ಥಾನ ಪಡೆದರು. ಹಾಗೆಯೇ ವಿದ್ಯಾರ್ಥಿಗಳು ಮತ್ತು ಅಧ್ಯಾಪಕ ವೃಂದದವರ ಬರವಣಿಗೆಯ ಅಭಿರುಚಿಗೆ ಸಾಕ್ಷಿಯಾಗಿ 'ಕ್ರೈಸ್ಟ್ ಸಮಾಚಾರ' ಎಂಬ ವಿಶೇಷ ಸಂಚಿಕೆಯ ಪತ್ರಿಕೆಯನ್ನು ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಸರಿಗಮಪ ಖ್ಯಾತಿಯ ಗುರುಪ್ರಸಾದ್ ಅವರನ್ನು ಸನ್ಮಾನಿಸಲಾಯಿತು. ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿ ಆಂಗ್ಲ ಭಾಷಾ ಮಾಧ್ಯಮ ಸಂಸ್ಥೆಗಳಲ್ಲಿ ಕನ್ನಡವೆಂದರೆ ಮೂಗು ಮುರಿಯುವವರ ನಡುವೆ ಕ್ರೈಸ್ಟ್ ಕಾಲೇಜು ಹೀಗೆ ನಾಡು–ನುಡಿಯ ಬಗ್ಗೆ ಅಭಿಮಾನವನ್ನು ಮೆರೆಯಿತು. ಪ್ರಾಂಶುಪಾಲರಾದ ಜಿಂಟೋ ಜೋಸ್, ಆಡಳಿತಾಧಿಕಾರಿಗಳಾದ ರೆಜೊ ಜೆಕಬ್, ಕನ್ನಡ ವಿಭಾಗದ ಅಧ್ಯಾಪಕರುಗಳಾದ ಲಕ್ಷ್ಮಿ ಎಂ.ಎಸ್., ವೇದ ರಾಜ್ ಕೂರಗಲ್ ಹಾಗೂ ಕಾಲೇಜಿನ ಎಲ್ಲಾ ಅಧ್ಯಾಪಕ ವೃಂದದವರು ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ನಾಳೆ ಹಿಮೋಫಿಲಿಯ ಜಾಗೃತಿ ಕಾರ್ಯಕ್ರಮ

ಮೈಸೂರು, ನ. 22–ಮೈಸೂರು ಹಿಮೋಫಿಲಿಯಾ ಸೊಸೈಟಿಯು ಕೆ.ಆರ್. ಆಸ್ಪತ್ರೆ ರಕ್ತನಿಧಿ ಕೇಂದ್ರದ ಸಹಯೋಗದೊಂದಿಗೆ ಹಿಮೋಫಿಲಿಯಾ ಸಂಸ್ಥಾಪಕರ ದಿನಾಚರಣೆ ಅಂಗವಾಗಿ ನ. 24 ರಂದು ಬೆಳಗ್ಗೆ 6 ಗಂಟೆಗೆ ಹಿಮೋಫಿಲಿಯಾ ಜಾಗೃತಿ ಕಾರ್ಯಕ್ರಮ ಮತ್ತು ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ಹಿಮೋಫಿಲಿಯಾ ಸೊಸೈಟಿ ಅಧ್ಯಕ್ಷ ಡಾ.ಎಸ್.ಕೆ.ಮಿತ್ತಲ್ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ವಿಧಾನಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರಾದ ಡಾ.ಎಚ್.ಆರ್.ರಾಜೇಶ್ವರಿದೇವಿ, ಎಂಎಂಸಿ ಮತ್ತು ಆರ್‌ಐ ಡೀನ್ ಡಾ.ಆರ್. ದಾಕ್ಷಾಯಿಣಿ, ಡಾ. ಪುಷ್ಪಲತಾ, ಡಾ. ಶೋಭ, ಡಾ. ಎಂ.ಎಲ್. ನಯಾಜ್ ಪಾಷ, ಡಾ. ಕುಸುಮಾ ಭಾಗವಹಿಸುವರು.

ಫೆ.6ರಿಂದ 11ರವರೆಗೆ ಸುತ್ತೂರು ಜಾತ್ರೆ

ಮೈಸೂರು, ನ. 22– ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವನ್ನು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಫೆ.6 ಮಂಗಳವಾರದಿಂದ 11 ಭಾನುವಾರದವರೆಗೆ ನೆರವೇರಿಸಲು ನ.17 ರಂದು ಮೈಸೂರು ಶ್ರೀಮಠದಲ್ಲಿ ನಡೆದ ಪೂರ್ವಭಾವಿ ಸಮಾಲೋಚನಾ ಸಭೆಯಲ್ಲಿ ತೀರ್ಮಾನಿಸಲಾಯಿತು.

ಜಾತ್ರಾ ಮಹೋತ್ಸವದಲ್ಲಿ ಫೆಬ್ರವರಿ 7ರಂದು ಉಚಿತ ಸಾಮೂಹಿಕ ವಿವಾಹ, 8ರಂದು ರಥೋತ್ಸವ, 9ರಂದು ಶ್ರೀ ಮಹದೇಶ್ವರ ಕೊಂಡೋತ್ಸವ, 10ರಂದು ತೆಪ್ಪೋತ್ಸವಗಳಿರುತ್ತವೆ. ಕರ್ತೃಗದ್ದುಗೆ, ಮಹದೇಶ್ವರ, ವೀರಭದ್ರೇಶ್ವರ ದೇವಸ್ಥಾನ ಮುಂತಾದ ಕಡೆಗಳಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನಡೆಯಲಿವೆ.

ವಸ್ತುಪ್ರದರ್ಶನ, ಸಾಮೂಹಿಕ ವಿವಾಹ, ದೇಶಿ ಆಟಗಳು, ಭಜನಾ ಮೇಳ, ಕೃಷಿ ಮೇಳ, ದನಗಳ ಜಾತ್ರೆ, ಕುಸ್ತಿ ಪಂದ್ಯಾವಳಿ, ಚಿತ್ರಕಲೆ, ರಂಗೋಲಿ, ಸೋಬಾನೆ ಪದ, ಗಾಳಿಪಟ ಸ್ಪರ್ಧೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಮೊದಲಾದವುಗಳನ್ನು ಎಂದಿನಂತೆ ಆಯೋಜಿಸಲಾಗುವುದು.

ಸಾಧಕರಿಗೆ ಸಮಾಜ ಸೇವಾ ರತ್ನ ಪ್ರಶಸ್ತಿ ಪ್ರದಾನ



ಮೈಸೂರು, ನ. 22– ಮೈಸೂರಿನ ಆಲನಹಳ್ಳಿ ಕುದೇರು ಶಾಖಾ ಮಠದ ಶ್ರೀ ವೀರಶೈವ ಲಿಂಗಾಯತ ಸಮಾನ ಮನಸ್ಕರ ಸ್ನೇಹ ಬಳಗದಿಂದ 68 ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಕುದೇರು ಶಾಖಾ ಮಠ ಆಲನಹಳ್ಳಿಯಲ್ಲಿ ರಸಮಂಜರಿ ಕಾರ್ಯಕ್ರಮ ಹಾಗೂ ಹಿರಿಯ ರಂಗಭೂಮಿ ಕಲಾವಿದ ಹೊಸ ಕೋಟೆ ಶಿವಮಲ್ಲಪ್ಪ ಅವರ ಕಲಾ ಸಾಧನೆಯ ಸಾಕ್ಷ್ಯ ಚಿತ್ರ ಬಿಡುಗಡೆ ಮತ್ತು ಕಲಾಚತುರ ಪ್ರಶಸ್ತಿ ನೀಡಿ, ಗೌರವಿಸಲಾಯಿತು.

ಹೊಸಕೋಟೆಯ ಶ್ರೀ ಕಪಿಲೇಶ್ವರ ರೈತ ಸ್ವಸಹಾಯ ಸಂಘದಿಂದ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರನ್ನು ಗುರುತಿಸಿ ಸಮಾಜ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪ್ರಶಸ್ತಿ ಪುರಸ್ಕೃತರು: ಎಂ.ಡಿ.ಶಿವರಾಜ (ಆರಕ್ಷಕ ಕ್ಷೇತ್ರ), ಬೀರಿಹುಂಡಿ ಗೋವಿಂದ ರಾಜು (ರಂಗಭೂಮಿ), ಹರಿಕಥಾ ವಿದ್ವಾನ್ ಶ್ರೀ ಶಿವಕುಮಾರ ಶಾಸ್ತ್ರಿ (ಕಲಾ ಕ್ಷೇತ್ರ), ಎಸ್.ಧನಂಜಯ್ (ಶಿಕ್ಷಣ), ಎಸ್.ಪ್ರಭುಸ್ವಾಮಿ ಚಿಕ್ಕ ಹೊಮ್ಮಾ (ಕೃಷಿ), ಪ್ರಭುಸ್ವಾಮಿ ಹೊಸಕೋಟೆ (ಶಿಕ್ಷಣ), ಎಸ್.ಬಾಲಕೃಷ್ಣ ಸಂಗಾಪುರ (ಸಾಮಾಜಿಕ), ಡಿ.ಮಧು ಮೈಸೂರು (ಕಲಾ ಕ್ಷೇತ್ರ), ಮಹದೇವಸ್ವಾಮಿ ಲಲಿತಾದ್ರಿಪುರ (ಸಾಮಾಜಿಕ), ಚೆನ್ನಪ್ಪ ವಡೆಯನಪುರ (ಸಾಮಾಜಿಕ ಕ್ಷೇತ್ರ), ಎಚ್.ಎಸ್. ತೋಂಟಧಾರಿಯಸ್ವಾಮಿ ಒರೆಯಾಲಾ (ಮಾಧ್ಯಮ ಕ್ಷೇತ್ರ).

ಕಾರ್ಯಕ್ರಮದಲ್ಲಿ ಕುದೇರು ಶಾಖಾ ಮಠದ ಶ್ರೀ ಗುರುಶಾಂತ ಸ್ವಾಮಿಗಳವರು ಮಾತನಾಡಿ, ಸಾಧನೆ ಮಾಡಿರುವಂತಹ ಸಾಧಕರನ್ನು ಗುರುತಿಸುವುದು ಒಂದು ಸಾಧನೆಯೇ, ಅಪಾರವಾದ ಸಾಧನೆಯನ್ನು ಮಾಡಿರುವಂತಹ ಸಾಧಕರು ಮತ್ತಷ್ಟು ಸಮಾಜದಲ್ಲಿ ಸಾಧನೆ ಮಾಡಲು ಸಾಮಾಜಿಕವಾಗಿ ತಮ್ಮ ಕೊಡುಗೆಯನ್ನು ನೀಡಲು ಇದು ಪ್ರೋತ್ಸಾಹದಾಯಕವಾದಂತಹ ಕೆಲಸ, ಅನೇಕ ಸಂಘ ಸಂಸ್ಥೆಗಳಿಗೆ ಈ ಕಾರ್ಯಕ್ರಮ ಮಾದರಿಯ ಕಾರ್ಯಕ್ರಮ, ಸಾಧಕರು ತಮ್ಮ ಸಾಧನೆ ಯುವ ಪೀಳಿಗೆಗೆ ಮಾರ್ಗದರ್ಶನ ನೀಡುವುದರ ಜೊತೆಗೆ ಪ್ರತಿಯೊಬ್ಬರಿಗೂ ಇದರ ಬಗ್ಗೆ ಜಾಗೃತಿ ಮೂಡಿಸಿ ತಮ್ಮ ಸಾಧನೆಗಳು ವಿಶ್ವಮಟ್ಟಕ್ಕೆ ಬೆಳೆಯಬೇಕು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಕಪಿಲೇಶ್ವರ ರೈತ ಸ್ವಸಹಾಯ ಸಂಘದ ಅಧ್ಯಕ್ಷ ಪ್ರಭುಸ್ವಾಮಿ, ಲಯನ್ಸ್ ಜೀವಧಾರ ರಕ್ತ ನಿಧಿ ಕೇಂದ್ರದ ಅಧ್ಯಕ್ಷ ಗಿರೀಶ್, ನಿವೃತ್ತ ಪೊಲೀಸ್ ಅಧಿಕಾರಿಗಳಾದ ಎಂ.ಡಿ.ಶಿವರಾಜು, ಗುರುಸ್ವಾಮಿ, ಕೆರೆಹಳ್ಳಿ ಬಿ.ದೊರೆಸ್ವಾಮಿ, ಬಸವಣ್ಣ, ದೇವಪ್ಪಾಜಿ, ಹಿರಿಯ ರಂಗಭೂಮಿ ಕಲಾವಿದರಾದ ಚಿಕ್ಕಳ್ಳಿ ಪುಟ್ಟಣ್ಣ, ಹೊಸಕೋಟೆ ನಂದೀಶ್, ಮುಳ್ಳೂರು ಪಾರ್ವತಪ್ಪ, ಪಿಡಿಒ ಸೋಮಶೇಖರ್, ಹರಿಕಥೆ ಕಲಾವಿದರಾದ ಭರತ್ ಶಿವಕುಮಾರ್‌ಶಾಸ್ತ್ರಿ, ಸುರೇಶ್, ಮೂರ್ತಿ, ವೀರಗಾಸೆ ಕಲಾವಿದರಾದ ಅಂಬಳೆ ಶಿವಣ್ಣ, ಬಾಗಳಿ ಮಹೇಶ್, ಹೊಸಕೋಟೆ ರಮೇಶ್, ಸೋಸಳ್ಳಿ ಶಿವಣ್ಣ ಗುರು, ರಾಜಪ್ಪ ಮುಂತಾದವರು ಉಪಸ್ಥಿತರಿದ್ದರು.

ಕನ್ನಡ ಭಾಷೆಯೆಂದರೆ ಭಾವೈಕ್ಯತೆಯ ಸಂಕೇತ

ಹಿರಿಯ ಸಾಹಿತಿ ಬನ್ನೂರು ರಾಜು ಅಭಿಮತ



ಮೈಸೂರು, ನ. 22– ಸಾವಿರ ವರ್ಷಗಳ ಹಿಂದೆಯೇ 'ಮನುಷ್ಯ ಜಾತಿ ತಾನೊಂದೇ ವಲಂ' ಎಂದು ಮೊಟ್ಟ ಮೊದಲಿಗೆ ಮಾನವೀಯ ನೆಲೆಯಲ್ಲಿ ಇಡೀ ಜಗತ್ತನ್ನು ನೋಡಿದ ಕನ್ನಡದ ಆದಿ ಕವಿ ಪಂಪನ ಆಶಯದ ಕನ್ನಡ ಭಾಷೆಯೆಂದರೆ ಅದು ಭಾವೈಕ್ಯತೆಯ ಸಂಕೇತ ಮತ್ತು ಸಹಬಾಳ್ವೆಯ ಸಾಕಾರ ಹಾಗೂ ಸೌಹಾರ್ದತೆಯ ಝೇಂಕಾರ ಎಂದು ಪತ್ರಕರ್ತರೂ ಆದ ಸಾಹಿತಿ ಬನ್ನೂರು ಕೆ.ರಾಜು ಹೇಳಿದರು.

ನಗರದ ಹೊರವಲಯದಲ್ಲಿನ ಬೆಮೆಲ್ ಕಾರ್ಖಾನೆಯ ಸಮೀಪದಲ್ಲಿರುವ ಪ್ರತಿಷ್ಠಿತ ಡೀಪೌಲ್ ಇಂಟರ್‌ನ್ಯಾಷನಲ್ ಕಾಲೇಜಿನಲ್ಲಿ ಆಯೋಜಿಸಿದ್ದ 68ನೇ ಕನ್ನಡ ರಾಜ್ಯೋತ್ಸವ ಮತ್ತು 50ನೇ ವರ್ಷದ ಸುವರ್ಣ ಕರ್ನಾಟಕ ರಾಜ್ಯೋತ್ಸವ ಸಮಾರಂಭವನ್ನು ಕನ್ನಡ ಜ್ಯೋತಿ ಬೆಳಗುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಎನೆ ಕುಣಿದಾಡುವುದೆನ್ನೆದೆ ಕನ್ನಡ ಎನೆ ಕಿವಿ ನಿಮಿರುವುದು ಎಂಬ ಕವಿವಾಣಿಯಂದದ ಭಾವನಾತ್ಮಕ ಭಾಷೆ ಕನ್ನಡವಾಗಿದ್ದು, ಕನ್ನಡಿಗರು ಮಾತ್ರವಲ್ಲದೆ ಅನ್ಯ ಭಾಷಿಕರೂ ಸಹ ಪ್ರೀತಿಸಲ್ಪಡುವ ಬಹು ಆಕರ್ಷಣೀಯ ಚೆಂದದ ಭಾಷೆ ಕನ್ನಡವೆಂದರು.

ಆಂಗ್ಲರು ನಮ್ಮ ನೆಲವನ್ನು ಬಿಟ್ಟು ಹೊರಟು ಹೋಗಿದ್ದರೂ ಅವರು ಬಿಟ್ಟು ಹೋಗಿರುವ ಇಂಗ್ಲಿಷ್ ಭಾಷೆ ನಮ್ಮವರ ಕೆಲವೊಂದು ಅರ್ಥಹೀನ ಆಸೆಗಳು ಮತ್ತು ವ್ಯಾಮೋಹಗಳಿಂದಾಗಿ ಕನ್ನಡ ಭಾಷೆಯ ಮೇಲೆ ಸವಾರಿ ಮಾಡುತ್ತಿದೆ. ಆದರೆ ಇದಕ್ಕೆ ಕನ್ನಡ ಯಾವತ್ತೂ ಜಗ್ಗುವುದಿಲ್ಲ.ನಮ್ಮ ಕನ್ನಡ ಅಂತಹ ಸಶಕ್ತವಾದ ಅದ್ಭುತವಾದ ಭಾಷೆ. ಇದನ್ನು ಈಗಾಗಲೇ ಕನ್ನಡದ ಅನೇಕ ಮಹತ್ಸಾಧಕರು ಸಾಧಿಸಿ ತೋರಿಸಿ ವಿಶ್ವದ ಗಮನ ಸೆಳೆದು ಜಗದ್ವಿಖ್ಯಾತರಾಗಿರುವುದನ್ನು ಕನ್ನಡ ಚರಿತ್ರೆಯಲ್ಲಿ ನಾವು ಕಾಣಬಹುದು. ಹಾಗಂತ ಇಂಗ್ಲೀಷ್ ಸೇರಿದಂತೆ ಇತರ ಭಾಷೆಗಳನ್ನು ಕಲಿಯಬಾರದು ಎಂದೇನೂ ಇಲ್ಲ. ಆದರೆ ಅದು ಊಟಕ್ಕೆ ಉಪ್ಪಿನ ಕಾಯಿ ಇದ್ದಂತೆ ಇರಬೇಕಷ್ಟೆ ಎಂದು ಔಚಿತ್ಯಪೂರ್ಣವಾಗಿ ನುಡಿದರು.

ವಿದ್ಯಾರ್ಥಿನಿ ಆರ್ಯ ಅವರ ಸುಶ್ರಾವ್ಯವಾದ ಪ್ರಾರ್ಥನಾ ಗೀತೆಯೊಡನೆ ಪ್ರಾರಂಭವಾದ ಈ ಸಮಾರಂಭದಲ್ಲಿ ವಿದ್ಯಾರ್ಥಿನಿ ಶ್ರೀದೇವಿ ಎಲ್ಲರನ್ನೂ ಆತ್ಮೀಯವಾಗಿ ಸ್ವಾಗತಿಸಿದರು. ಕಾಲೇಜಿನ ಪ್ರಾಂಶುಪಾಲರಾದ ರೆ.ಡಾ. ಬೈಜು ಅಂತೋಣಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.ಉಪ ಪ್ರಾಂಶುಪಾಲರಾದ ರೆ.ಡಾ. ಜಾಯ್ ತುರುತ್ತೇಲ್, ಶಿಂಜೋ ಅಂತೋಣಿ, ಅಧ್ಯಾಪಕರಾದ ಡಾ.ಮಮತಾ ಮತ್ತು ಲಂಕೇಶ್ ಸೇರಿದಂತೆ ಎಲ್ಲಾ ಅಧ್ಯಾಪಕರು, ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದು ಇದೇ ವೇಳೆ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತಲ್ಲದೆ ಪತ್ರಕರ್ತರೂ ಆದ ಸಾಹಿತಿ ಬನ್ನೂರು ರಾಜು ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಕೊನೆಯಲ್ಲಿ ಧನುಷಾ ವಂದನಾರ್ಪಣೆ ಮಾಡಿದರು. ವೇದಿಕೆಯ ಕಾರ್ಯಕ್ರಮದ ನಂತರ ವಿದ್ಯಾರ್ಥಿಗಳಾದ ಚಂದನ್, ವೈಷ್ಣವಿ, ನಿಶಿತ್, ಧನುಷ, ಸಯನಾ, ಲಿಂಜ, ನಿವ್ಯಾ, ಟೀನಾ, ಶ್ರೀದೇವಿ,ಮುಂತಾದ ವಿದ್ಯಾರ್ಥಿಗಳು ಕನ್ನಡ ಸಂಸ್ಕೃತಿ ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿ ಎಲ್ಲರನ್ನೂ ರಂಜಿಸಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸೈಟು ಬೇಕಾಗಿದೆ
ಸಪ್ತಮಾತೃಕೆ ಫೇಸ್ 1/2/3.
ಮಾಲೀಕರು ಸಂಪರ್ಕಿಸಿ:
(Direct Registration)
9986420232, 9945845302

ಕೆಲಸಕ್ಕೆ ಬೇಕಾಗಿದ್ದಾರೆ
ಪುರುಷರು ಹಾಗೂ ಮಹಿಳೆಯರಿಗೆ ಸ್ವಾಗತ. ಅನುಭವವಿಲ್ಲದವರೂ ಸಂಪರ್ಕಿಸಿ;
ಖಾಲಿ ಇರುವ ಹುದ್ದೆ: ಫ್ಯೂಯಲ್ ಅಟೆಂಡೆಂಟ್ಸ್
ಶ್ರೀಯದಿತ ಫ್ಯೂಯಲ್ ಸ್ಟೇಷನ್
ಹೆಚ್‌ಪಿ ಪೆಟ್ರೋಲ್ ಬಂಕ್, 2ನೇ ಹಂತ, ವಿಜಯನಗರ, ಮೈಸೂರು–570 017.
9980766773, 9845100877

ಸೈಟ್ ಮಾರಾಟಕ್ಕಿದೆ
60x40 ಪೂರ್ವದಿಕ್ಕು ವಸಂತನಗರ, ವಿದ್ಯಾವಿಕಾಸ ಕಾಲೇಜು ಹಿಂಭಾಗ,
40x30 ಪೂರ್ವದಿಕ್ಕು (ಜೆ.ಪಿ.ನಗರ) ಗೆಜ್ಜಗಳ್ಳಿ ಹತ್ತಿರ,
9481169973

WANTED
COMPUTER TYPIST (Male / Female) FOR ADVOCATE OFFICE
Qualification: Typing - English & Kannada (Kan - Nudi / Baraha) in M.S. Word & Excel / Page Maker
9.30 am to 2 pm. Sunday: 10.30 to 3 pm. Salary: 8,000/- per month. For evening: (Male only). 6.30 pm to 11.30 pm. Salary: Rs. 8,000/- per month.
7349337469, 9448525072

ಬೇಕಾಗಿದ್ದಾರೆ
ಫರ್ನಿಷಿಂಗ್ ಅಂಗಡಿಯಲ್ಲಿ ಅನುಭವವುಳ್ಳವರು ಕೆಲಸಕ್ಕೆ ಹುಡುಗಿಯರು & ಹುಡುಗರು ಬೇಕಾಗಿದ್ದಾರೆ. ಸಂಬಳ: 8 ರಿಂದ 15 ಸಾವಿರದವರೆಗೆ. ಇರ್ವಿನ್ ರಸ್ತೆ ಮತ್ತು ಶಾರದಾದೇವಿನಗರ, ಮೈಸೂರು
8050744784

ನುಡಿ ಕನ್ನಡ ಟೈಪಿಂಗ್ ಮಾಡಬಲ್ಲ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ
ಶ್ರೀ ರೇಣುಕಾ ಎಂಟರ್‌ಪ್ರೈಸಸ್
ಪೂರ್ವ ಉಪ–ನೋಂದಣಾಧಿಕಾರಿಗಳ ಕಛೇರಿ ಎದುರು ಡಾ|| ರಾಜ್‌ಕುಮಾರ್ ರಸ್ತೆ, ತ್ರಿವೇಣಿ ವೃತ್ತ, ಸಾತಗಳ್ಳಿ ಬಡಾವಣೆ, ಮೈಸೂರು
9535292036

ಹೊಸ ಮನೆ ಮಾರಾಟಕ್ಕಿದೆ
ಸರ್ದಾರ್ ವಲ್ಲಭಾಯಿಪಟೇಲ್ ನಗರ ಮುಡಾ ಅನುಮೋದಿತ ಲೇಔಟ್ 20*40 ಅಡಿ, ಪೂರ್ವ ದಿಕ್ಕು, 3 ಬಿಹೆಚ್‌ಕೆ, ಬೋರ್‌ವೆಲ್ ಮತ್ತು ಪಿಲ್ಲರ್ ಹೊಂದಿದೆ, 100% ವಾಸ್ತು, ಉತ್ತಮ ಗುಣಮಟ್ಟದ ಹೊಸ ಮನೆ
Call: 9380284276

HOUSE FOR SALE
3 BHK Duplex New House
20x30 & 30x40 MUDA, N/F Door at Vijayanagar 4th Stage, Near Marimallappa School.
Price: Rs. 84 Lakhs / 1.59 Cr.
Mob: 8660105902

HOUSE FOR SALE
4 BHK Duplex new house, 30x40, MUDA, E/F Door & site at Ramakrishnanagar 'I' Block, near Andolana Circle.
PRICE: Rs. 1.60 Cr.
(Brokers Excuse)
Mob: 8660105902

ಬೇಕಾಗಿದ್ದಾರೆ
ಟೆಲಿ ಕಾಲಿಂಗ್ ಮಾಡಿ ಅನುಭವ ಇರುವ ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದರೆ.
9916913984

WANTED
Sales Representative
Qualification: Any Degree
Address:
HITECH SOLAR FENCE
Ramavilas Road, Mysore
9448186377
9448247741

Star Solar Renewable Energy
JUST Easy EMI 19,499/- 200 Ltr
5/15 Years Guaranty
ಎಲ್ಲಾ ಕಂಪನಿಯ ಹಳೆಯ ಸೋಲಾರನ್ನು ಸರ್ವೀಸ್ ಮಾಡಿಕೊಡಲಾಗುವುದು.
Old system Exchange offer available
Manufacturing: Belawadi Industrial Sub, Mysore
9945616293 / 9449966293

airtel Wanted
Sim sales Executive
salary 10000/-
Incentive up to 7000
9591501305

DTCP SITES FOR SALE
DTCP Sites
Rs. 699 per sq.ft., Near Jayapura, H.D. Kote Road, Mysore.
9590491194, 9606783264

ಸೈಟುಗಳು ಮಾರಾಟಕ್ಕೆ ಇದೆ
ಮುಡಾ ಅನುಮೋದಿತ ಸೈಟ್‌ಗಳು
30x50 - 50 ಲಕ್ಷಗಳು
75% ವರೆಗೆ ಬ್ಯಾಂಕ್ ಸಾಲ ಸೌಲಭ್ಯ ಪಡೆಯಬಹುದು.
ಜೆಎಸ್‌ಎಸ್ / ಪೊಲೀಸ್ ಲೇಔಟ್ ಹತ್ತಿರ, ಟಿ.ನರಸೀಪುರ ರಸ್ತೆ, ಮೈಸೂರು
1.5 Kms from Ring Road
9900363084, 8660105902

ಸೈಟುಗಳು ಮಾರಾಟಕ್ಕೆ ಇದೆ
30x40, 20x40, 30x35 ಸೈಟುಗಳು ಮಾರಾಟಕ್ಕೆ ಇದೆ. ಗೊರೂರು ಬಸ್ ನಿಲ್ದಾಣ ಹತ್ತಿರ, ರಮಾಬಾಯಿನಗರ, ಮೈಸೂರು. DTCP ಅನುಮೋದಿತ (ಕಾರ್ಪೋರೇಶನ್ ಮಿತಿ).
1.5 kms from JP Nagar Ring Road.
Mob: 8660105902

ಉತ್ತಮ ಅವಕಾಶ
ಮನೆಯಲ್ಲಿ ಬಟ್ಟೆ ವ್ಯಾಪಾರ ಮಾಡಲು ನಮ್ಮಲ್ಲಿ ಹೋಲ್ ಸೇಲ್ ದರದಲ್ಲಿ ಎಲ್ಲಾ ರೀತಿಯ ಸೀರೆಗಳು ಮತ್ತು ಎಲ್ಲಾ ರೀತಿಯ ಬಟ್ಟೆಗಳು ಸಿಗುತ್ತದೆ ಒಮ್ಮೆ ಭೇಟಿ ನೀಡಿ
Call After 10.30 AM
9986731199

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಸೇಲ್ ಮ್ಯಾನ್ ಕೆಲಸ ಮಾಡಲು ಅನುಭವವುಳ್ಳ ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ESI+PF ಮತ್ತು ಇನ್ಸೆಂಟೀವ್ ಸೌಲಭ್ಯದೊಂದಿಗೆ
ಗಾಂಧಿಸರ್ಕಲ್, ಮೈಸೂರು
Call After 10.30 AM
9980620678

SITE FOR SALE
1. Kesare II nd Stage 40x60 East Face
2. Kesare III rd Stage 40x60 West Face
3. 59x70 West Face Fully Commercial Opp. KSRTC Bus Stand
Call After 10.30 AM
9986731199

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethara Road, kuvempunagar, Mysuru
MYSURU 9611028523 MANGALORE 9343142258

COMMERCIAL SPACE FOR RENT
G.F - 3300 Sqft., F.F - 3700 Sqft.,
Opp. Vidyavardhaka Engg., College, H.T Double Road.
Ph: 9916010699

ಮಾರಾಟಕ್ಕಿದೆ
ಉತ್ತಮವಾಗಿ ವ್ಯಾಪಾರವಾಗುತ್ತಿರುವ ಕಾಫಿಪುಡಿ ಅಂಗಡಿ ಮಾರಾಟಕ್ಕಿದೆ
7676840962

WANTED
ಟೆಕ್ನಿಷಿಯನ್ ಹುಡುಗರು
ಐಟಿಐ ಎಲೆಕ್ಟ್ರಿಕಲ್ಸ್ ಆದವರಿಗೆ ಆದ್ಯತೆ
ದ್ವಿಚಕ್ರ ವಾಹನ ಹೊಂದಿರಬೇಕು
ವಯಸ್ಸು 18–25 ವರ್ಷ
ಸರಸ್ವತಿಪುರಂ, ಮೈಸೂರು
98808 28999

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9108566022

ಬ್ಯುಸಿನೆಸ್ ಪ್ಲ್ಯಾನ್
ಬ್ಯುಸಿನೆಸ್ ಪ್ಲ್ಯಾನ್ ನಿಮ್ಮದು. ಬಂಡವಾಳ ನಮ್ಮದು. ಬಂದ ಆದಾಯದಲ್ಲಿ 50–50. ಈ ರೀತಿ ಬ್ಯುಸಿನೆಸ್ ಪ್ಲ್ಯಾನ್ ಇರುವವರು ಕೂಡಲೇ ಸಂಪರ್ಕಿಸಿ
9901080314

ವಿಕೇರ್ ಹೋಮ್ ನರ್ಸಿಂಗ್ ಮೈಸೂರು
ಮೈಸೂರಿನಲ್ಲಿ ರೋಗಿಯ ಆರೈಕೆಯ ಕೆಲಸಕ್ಕೆ ಮಹಿಳಾ ಹೋಮ್ ನರ್ಸ್ ಬೇಕಾಗಿದ್ದಾರೆ.
ವೇತನ 16,000 - 23,000/-
ಮನೆಯಲ್ಲೇ ಉಳಕೊಳ್ಳುವವರಿಗೆ ಮಾತ್ರ ಆದ್ಯತೆ.
ಸಂಪರ್ಕಿಸಿ:
+91 9380 04 3696
+91 6364 48 1333

MICROWAVE OVEN SERVICES
Indian / Imported
Call for Microwave Oven Repair
Mob: 9900237315, 9845963421, 08214266495

Aquaguard & Kent Sales and Service
Service Charge : 300/-
9901200444

ಹೆವಿ ಗೂಡ್ಸ್ ಡ್ರೈವರ್ ಬೇಕಾಗಿದ್ದಾರೆ
ಕೂರ್ಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಕಂಪನಿಗೆ ಗೂಡ್ಸ್ ವಾಹನ ಚಾಲನೆ ಮಾಡುವ ಅನುಭವ ಇರುವ ಹೆವಿ ಗೂಡ್ಸ್ ಡ್ರೈವರ್ ಬೇಕಾಗಿದ್ದಾರೆ. ಸಂಬಳ:
21000+ESI+PF+Allowance
ಸಾಯಿಕೃಪ ಎಂಟರ್‌ಪ್ರೈಸಸ್
0821-4191667
ರತ್ನಯ್ಯ: 9900889325
ಡಿ.ಎಲ್.ಆಧಾರ್‌ಕಾರ್ಡ್ ಮತ್ತು ಬ್ಯಾಂಕ್ ಪಾಸ್ ಪುಸ್ತಕ ಪ್ರತಿ ಜೊತೆಯಲ್ಲಿ ತರಬೇಕು.

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಸೂಪರ್‌ವೈಸರ್–12th Pass (ಕುವೆಂಪುನಗರ, ಹೂಟಗಳ್ಳಿ)
2) ಸೆಕ್ಯೂರಿಟಿ ಗಾರ್ಡ್ಸ್ (ಪುರುಷರು & ಮಹಿಳೆಯರು)
ESI & PF ಸೌಲಭ್ಯವಿರುತ್ತದೆ.
9739166772

ಬೇಕಾಗಿದ್ದಾರೆ
ಕಂಪ್ಯೂಟರ್ ಟೈಪಿಂಗ್ ಮಾಡಲು ಬರುವಂತಹ ಅಭ್ಯರ್ಥಿಗಳು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಶೇಖರ್ : 9945911118
ಅನಿಲ್ : 7026996123
Arthor Services Pvt. Ltd.
No. L-89, 2nd Floor, 'M' Block, Opp. Karuna Hospital, Kuvempunagar, Mysroe-570 023

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 7975101020

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ತಕ್ಷಣ ಬೇಕಾಗಿದ್ದಾರೆ
ಅಡುಗೆ ಕೆಲಸ (ಶುದ್ಧ ಸಸ್ಯಾಹಾರಿ) ಅಡುಗೆ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
ಸಂಬಳ: 15,000 (ತಿಂಗಳಿಗೆ)
ಸಮಯ: ಬೆಳಿಗ್ಗೆ 7 ರಿಂದ 8.30 ರವರೆಗೆ ಸಂಜೆ 5 ರಿಂದ 7.00 ರವರೆಗೆ
ಸ್ಥಳ: ವಿಜಯನಗರ (3ನೇ ಹಂತ)
9916739611
8310604379

ಬೇಕಾಗಿದ್ದಾರೆ
ಟೀಮ್ ಲೀಡರ್ (ಸಂಬಳ 13000)
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
(ಕನ್ನಡ ಮಾತನಾಡುವವರು)
ಸ್ಥಳ : ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ
ಸಂಬಳ: 8000 ರಿಂದ 11000ರವರೆಗೆ
ಮೊಬೈಲ್ ನಂಬರ್
8150005111

Ekadantha Ventures SITE FOR SALE
30X40 Hale Kesare Main Road, Attached to Army Layout Compound Only 1 km From Banagalore Mysore Main Road, Mysore
9900375763

Wanted (Female)
Receptionist (Hotel)
Front Office Executive
Qualification: Any Degree with computer knowledge, accounting and good English.
J.P. Nagar, Mysore
Mob: 9686225522

V-GUARD
10 ವರ್ಷಗಳ ವ್ಯಾರಂಟಿ
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

Change of Name
I, Fauad Ahmed, residing at DoNo. 4543/1, 2nd Cross, St. Marys Road, Near Radio Park, N.R. Mohalla, Mysuru, have changed my name as **Fauad Ahmed Najeeb Ahmed,** on my own free will, in front of Notary Syed Ameer on 19-11.2023.
Sd/- **Fauad Ahmed Najeeb**

ಪ್ರಮಾಣ ಪತ್ರ
ಮೈಸೂರು ಸಿಟಿ, ಇಟ್ಟಿಗೆ ಗೂಡು, ಎಂ.ಜಿ. ರಸ್ತೆ ಹತ್ತಿರ, ದಕ್ಷಿಣದ ಹೊಸ ರಸ್ತೆ, ಮನೆ ನಂ. 18ರಲ್ಲಿ ವಾಸವಾಗಿರುವ ಶ್ರೀ ಹಿರಲಾಲ್ ಜೈನ್, ಆದ ನಾನು ಪ್ರಮಾಣೀಕರಿಸುವುದೇನೆಂದರೆ, ಆಧಾರ್ ಕಾರ್ಡ್, ಪಾನ್ ಕಾರ್ಡ್ ಹಾಗೂ ಇತ್ಯಾದಿ ದಾಖಲೆಗಳಲ್ಲಿ ನನ್ನ ಹೆಸರು ಹಿರಲಾಲ್ ಜೈನ್ ಎಂದು ನಮೂದಾಗಿರುತ್ತದೆ. ಹಾಗೂ ನನ್ನ ಹೆಸರು ಹಿರಲಾಲ್ ಪಿತಲ್ಯ ಎಂದು ಪಾಸ್ ಪೋರ್ಟ್ (No. P3900369) ನಲ್ಲಿ ನಮೂದಾಗಿರುತ್ತದೆ. ನನ್ನ ಹೆಸರನ್ನು ಹಿರಲಾಲ್ ಪಿತಲ್ಯ ದಿಂದ ಹಿರಲಾಲ್ ಜೈನ್ ಎಂದು ನೋಟರಿ ಅಮಾರ್ತ್ ಮೂರ್ತಿ ರವರು ಎದುರು ಬದಲಾಯಿಸಿ ಪ್ರಮಾಣೀಕರಿಸಿರುತ್ತೇನೆ.
ಸಹಿ/– ಹಿರಲಾಲ್ ಜೈನ್

ಗಾರ್ಡನ್ ರೆಸ್ಟೋರೆಂಟ್‌ಗೆ ಬೇಕಾಗಿದ್ದಾರೆ
1) ಕುಕ್, 2) ವೈಟರ್
3) ಕ್ಯಾಪ್ಟನ್, 4) ಕ್ಲೀನರ್
Contact: 8618009566

WANTED
Urgent experienced Sales Executives, Wanted Urgent Female Accountant
Monarch Distributor
House No.44/C, Industrial Sub-Urb 2nd Phase, Vishweshwaranagar, Near Sterling Theatre, Mysore-08
0821-3503668, 9482210793, 897153235

ಬೇಕಾಗಿದ್ದಾರೆ
ಟೆಲಿಮಾರ್ಕೆಟಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ:
Salary: 12000/- to 15000/-
9591233303
7676841708

ಅಂಗಡಿ ಮಾರಾಟಕ್ಕಿದೆ
ಚೆನ್ನಾಗಿ ವ್ಯಾಪಾರ ನಡೆಯುತ್ತಿರುವ ಟೈಲರಿಂಗ್ ಮೆಟೀರಿಯಲ್ ಅಂಗಡಿ, ಮೆಟೀರಿಯಲ್ ಮತ್ತು ಶೋಕೇಸ್ ಸಮೇತ ಮಾರಾಟಕ್ಕಿದೆ. ಸ್ಥಳ: ಹೆಬ್ಬಾಳ್ ಸೂರ್ಯ ಬೇಕರಿ ಹತ್ತಿರ.
9986784607

ಬೇಕಾಗಿದ್ದಾರೆ
1) ರಿಸೆಪ್ಷನಿಸ್ಟ್
2) ಬೆಲ್ ಬಾಯ್ – 2 ಹುದ್ದೆ
(ಅನುಭವವುಳ್ಳವರಿಗೆ ಆದ್ಯತೆ, ಬೆಳಗಿನ ಶಿಫ್ಟ್‌ಗೆ ಒಬ್ಬರು, ರಾತ್ರಿ ಶಿಫ್ಟ್‌ಗೆ ಒಬ್ಬರು ಮಾತ್ರ).
ಹೋಟೆಲ್ ಗುಪ್ತ
#252/ಬಿ, ಅಶೋಕ ರಸ್ತೆ, ಮುಖ್ಯ ಅಂಚೆ ಕಛೇರಿ ಹತ್ತಿರ, ಮೈಸೂರು, ಲಷ್ಕರ್ ಮೊಹಲ್ಲಾ. ಸಂಪರ್ಕಿಸಿ:
9886577795, 9886166044

AFFIDAVIT
I, Disha Dilip Babu, D/o T.K. Dilip Babu, aged 21, residing at Door No. 5181/A, High Tension Double Road, Vijayanagar 2nd Stage, Mysuru-570 017, Karnataka, I am changing my name from **Disha Dilip Babu** to **Disha Dilip.** I have declared this in front of Notary C. Mangala on 19-8-2023.
Sd/- **Disha Dilip**

ಬಸವ ಮಾರ್ಗ ಫೌಂಡೇಷನ್‌ಗೆ
ಅಡುಗೆ ಭಟ್ಟರು ಬೇಕಾಗಿದ್ದಾರೆ
ಅತ್ಯಾಕರ್ಷಕ ಸಂಬಳ, ಅಡ್ವಾನ್ಸ್ ಸೌಲಭ್ಯ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ:
Mob: 9742919191

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
97318 91409

HOUSES & OFFICE SPACE FOR RENT
@ SARASWATHIPURAM, KUVEMPUNAGAR & SURROUNDINGS
S.S. PROPERTY SERVICES
(Opp. Kuvempu School)
S.S.Puram, Mysore
9342125252

ಬೇಕಾಗಿದ್ದಾರೆ
ಸೆಕ್ಯೂರಿಟಿ ಕೆಲಸ ಮಾಡಲು ಅನುಭವವುಳ್ಳ ಪುರುಷ ಅಭ್ಯರ್ಥಿಗಳು ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ವೇತನ ESI+PF ವ್ಯವಸ್ಥೆ ಇರುತ್ತದೆ. ಮೈಸೂರು ಸಿಟಿ ಏರಿಯಾದಲ್ಲಿ
9060075860
8618971363
9035802909

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training.
www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
9740733021, 9535028750

ಸೈಟು ಮಾರಾಟಕ್ಕಿದೆ
30x50, KHB (ಕರ್ನಾಟಕ ಗೃಹ ಮಂಡಳಿ) ಸೈಟು ಮಾರಾಟಕ್ಕಿದೆ. 25 ಲಕ್ಷಗಳು. ಇಲವಾಲ ಗುಂಗ್ರಾಲ್ ಛತ್ರದ ಹತ್ತಿರ, ಮೈಸೂರು.
Mob: 9742198093

ತಕ್ಷಣ ಬೇಕಾಗಿದ್ದಾರೆ
NGO ಯೊಂದರಲ್ಲಿ Telecalling ಮಾಡಲು ಆಸಕ್ತಿಯುಳ್ಳ 12 ಯುವತಿಯರು ಬೇಕಾಗಿದ್ದಾರೆ. ಯಾವುದೇ ಪ್ರವೇಶ ಶುಲ್ಕ ಇರುವುದಿಲ್ಲ. ಕನ್ನಡ ಓದಲು, ಬರೆಯಲು ಬರುವವರಿಗೆ ಮೊದಲ ಆದ್ಯತೆ. ಸಂಬಳ: 7000 – 12000. ವಿದ್ಯಾರ್ಹತೆ: 10th / PUC / Any Degree / ITI. ಸಮಯ: 9.30 am to 6 pm. ಸ್ಥಳ: ಬಸವನಗುಡಿ ಸರ್ಕಲ್, ಮೈಸೂರು. ಕರೆಮಾಡಿ:
ನಿಧಿ : 9611650747

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಕೈಗಾರಿಕಾ ಪ್ರದೇಶದಲ್ಲಿ ಕಾರ್ಯನಿರ್ವಹಿಸಲು ಭದ್ರತಾ ಸಿಬ್ಬಂದಿ ಬೇಕಾಗಿದ್ದಾರೆ. ಉತ್ತಮ ಸಂಬಳ ಮತ್ತು ESI, PF ಸೌಲಭ್ಯ ಇರುತ್ತದೆ. ಆಸಕ್ತ ಅಭ್ಯರ್ಥಿಗಳು ಈ ಕೆಳಕಂಡ ದೂರವಾಣಿ ನಂಬರಿಗೆ ಸಂಪರ್ಕಿಸಿ
6364857751
6364857753

JOB'S @ MYSORE
10th PUC, ಯಾದ 18-23 (Age)
Trainee Manager ಗಳಾಗಿ
Earn (8500/- ರಿಂದ 16500/-) PM,
ಹೊಸಬರಿಗೆ ಆದ್ಯತೆ ಪರಸ್ಥಳದವರಿಗೆ ಮಾತ್ರ ವಸತಿ *'No Fee' *
ಕಾವ್ಯ: 9342827788
ನೇರ ಸಂಪರ್ಕಿಸಿ:

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸ್‌ನಲ್ಲಿ "ಸರ್ವೀಸ್ ಎಂಜಿನಿಯರ್" ಕೆಲಸಕ್ಕೆ, ITI ಅಥವಾ Diploma ಮಾಡಿರುವ ಕಂಪ್ಯೂಟರ್ ರಿಪೇರಿ ಗೊತ್ತಿರುವ, 25 ವರ್ಷದೊಳಗಿನ ದ್ವಿಚಕ್ರ ವಾಹನ ಮತ್ತು ಲೈಸೆನ್ಸ್ ಹೊಂದಿರುವ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಸಂಪರ್ಕಿಸಿ:
Mob: 8073393505

ಅನುಬಂಧ ಮ್ಯಾರೇಜಸ್
ಎಲ್ಲಾ ಜಾತಿಯ ಸುಂದರ, ಶ್ರೀಮಂತ, ವಿದ್ಯಾವಂತ ವಧುವರರು, ವಿಧುರರು, ವಿಧವೆಯರು, ವಿಚ್ಛೇದಿತರು
ನೇರ ಸಂಪರ್ಕಿಸಿ:
Mob: 6361740552

WANTED
Female Office Manager for sports showroom
SALARY 15000-20000/-
Ph.9980112200

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು
Mob.: 9986926101

MATCH MAKERS, BRIDE / GROOM
ಮದುವೆಗೆ ವಧು/ವರರ ಆಯ್ಕೆಗೆ
ಎಲ್ಲಾ ಜಾತಿಯ Govt Job, Private, ಸ್ವಂತ/ವ್ಯಾಪಾರ/ ಪ್ರಗತಿಪರ ರೈತರು, ಡಾಕ್ಟರ್/ಇಂಜೀನಿಯರ್, ಎಲ್ಲಾ ಡಿಗ್ರಿ ಇತರೆ Educations ನಮ್ಮ ಕರ್ನಾಟಕದ್ಯಂತ ಇರುವ ಕಛೇರಿಗಳಲ್ಲಿರುವ ಲಕ್ಷಾಂತರ ವಧು/ವರರಲ್ಲಿ ಮದುವೆ ಆಯ್ಕೆಗೆ ಭೇಟಿನೀಡಿ SSLC, PUC, Degree, 2200 ವಧುಗಳಿಗೆ ವರ ಬೇಕು. ಡೈವೋರ್ಸಿಗಳು/ವಿಧವೆಯರು/ವಿಧುರರು Life Partner ಗಾಗಿ ಬಡವರ ವಧುಗಳಿಗೆ ಉಚಿತ ಮದುವೆ+ಉದ್ಯೋಗ+ವಸತಿ+ಊಟ
7975728012

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಹುಡುಗಿಯರು ಬೇಕಾಗಿದ್ದಾರೆ.
ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್, ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು.

ತಕ್ಷಣ ಬೇಕಾಗಿದ್ದಾರೆ
ಮೈಸೂರು, ಬೆಂಗಳೂರು, ತುಮಕೂರು ಭಾಗಗಳಲ್ಲಿ ಕಂಪನಿ, ಶೋರೂಂ, ಹಾಗೂ ಆಫೀಸ್ ಕೆಲಸಗಳಿಗಾಗಿ ಯುವಕ–ಯುವತಿಯರು ಬೇಕಾಗಿದ್ದಾರೆ. ಸಂಬಳ: 18000 ದಿಂದ 38000 ಉಚಿತ ಊಟ ವಸತಿ ವಾಹನ ಸೌಲಭ್ಯವಿದೆ.
8861430488
9611237045

HOUSE FOR LEASE
Newly Built 2BHK Independent House, Fully Furnished with Solar & UPS @ Lalithadri Nagar, Near Ring Road, Behind Indian Oil Petrol Bunk
9964414484

PART TIME JOBS
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸಕ ಬರವಣಿಗೆ ಹಾಗೂ ಫಾರಂ ಫಿಲ್ಲಿಂಗ್, ಪ್ಯಾಕಿಂಗ್, ಟೆಲಿಕಾಲಿಂಗ್, ಡಾಟಾ ಎಂಟ್ರಿ ಹಾಗೂ ಮೊಬೈಲ್ ಮೂಲಕ ತಿಂಗಳಿಗೆ 15,000 ದಿಂದ 30,000 ಸಂಪಾದಿಸಿ + (ಕೋರಿಯರ್ ಸೌಲಭ್ಯವಿದೆ)
9148733213

FOR SALE
1) 30x40 16 lakhs KOTE ROAD
2) 30@40 T Narasipura road
3) 20@30 g+1 house SRIRAMPURA
4) BOGADI Rd 20x30,30x40 trenz apartments near
5) 20@30 house LB Shastri nagr
6)10 gunts land doctor lyt attach
Prakruthi properties
9538690359, 9035990359

ಬೇಕಾಗಿದ್ದಾರೆ
ಪ್ಲೇನಿಂಗ್ ಕೆಲಸಕ್ಕೆ ಹಾಗೂ ಹೆಲ್ಪರ್ ಹುಡುಗರು ಬೇಕಾಗಿದ್ದಾರೆ.
ಬಸವೇಶ್ವರ ಟಿಂಬರ್ ಟ್ರೇಡರ್ಸ್ ಮೈಸೂರು ಸೌತ್
9632464199

ಮನೆ ಬಾಡಿಗೆಗಿದೆ
30x40 ಅಳತೆ ಪೂರ್ವಕ್ಕೆ ಬಾಗಿಲು ಗ್ರೌಂಡ್ ಫ್ಲೋರ್, 2BHK ಸೋಲಾರ್, ನೀರು, ವಾಡ್‌ಡ್ರೂಬ್ ವ್ಯವಸ್ಥೆ ಇರುತ್ತದೆ. ಸಸ್ಯಹಾರಿಗಳಿಗೆ ಮಾತ್ರ ಮಧ್ಯವರ್ತಿಗಳಿಗೆ ಅವಕಾಶವಿಲ್ಲ ಮನೆ ನಂ. 40, ಶಿಕ್ಷಕರ ಬಡಾವಣೆ ರಾಜಕುಮಾರ್ ರಸ್ತೆ,
9035085532
9901259464

ಮನೆ ಭೋಗ್ಯಕ್ಕಿದೆ
1) 2 Bed Room Hall Ground Floor,
2) Duplex 3 Bed Room Hall - 1st Floor
104, Gurukula Badavane, J.P.Nagar, (Near Ring Road) Mysore
8073791800

SITE FOR SALE
30x40 N/F MUDA APPROVED BASAVESHWARA ENCLAVE, RING ROAD, LALITHADRIPURA
30X40 N/F MUDA APPROVED BVL PREMIO 4TH PHASE V.T.UNIVERSITY
9036633985

MUDA & RERA APPROVED SITES FOR SALE
30X40 @ 26 Lakhs
Ready For Registration
Bank Loan Available
Near Kit Eng. College Next to Lalabahadur Shastri Nagar, Mysore
7795609173

ಸಪ್ತಪದಿ ಮ್ಯಾರೇಜ್ ಬ್ಯೂರೋ (ರಿ)
BE, MBA, M.Tech, MBBS, MD, MS ಎಲ್ಲಾ ಡಿಗ್ರಿಯ India/USA/UK ಹಾಗೂ ಎಲ್ಲಾ ದೇಶದ ವಧು–ವರರ ಮಾಹಿತಿ ಮತ್ತು ಉಚಿತ ನೊಂದಣಿಗೆ ಸಂಪರ್ಕಿಸಿ:
ಕಂಪ್ಯೂಟರ್ ಗೊತ್ತಿರುವ ಮಹಿಳೆ ಕೆಲಸಕ್ಕೆ ಬೇಕಾಗಿದ್ದಾರೆ
963199511, 8088776211

ಲಿಂಗಾಯಿತ ವಧು ಬೇಕು
ನನಗೆ 60 ವರ್ಷ 2ನೇ ಮದುವೆಗೆ ವಧು ಬೇಕು 35 ಸಾವಿರ ಪೆನ್‌ಶನ್ ಬರುತ್ತದೆ ಸ್ವಂತ ಮನೆ ಇದೆ. ಮಕ್ಕಳು ಇಲ್ಲದ ವಿಧವೆಯರು ಫೋಟೊ ಬಯೋಡೆಟಾ ಕಳುಹಿಸಿ ಕೆಳಗಿನ ನಂಬರಿಗೆ ಕಳುಹಿಸಿ (ನನಗೆ ಯಾವುದೇ ಕೆಟ್ಟ ಅಭ್ಯಾಸ ಇರುವುದಿಲ್ಲ)
9945721565

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಸಚಿವಾಕಾಂಕ್ಷಿಗಳಿಗೆ ನಿಗಮ-ಮಂಡಳಿ ನೇಮಕಾತಿಯಲ್ಲಿ ಮೊದಲ ಆದ್ಯತೆ



ಬೆಂಗಳೂರು, ನ.22(ಕೆಎಂಶಿ)- ಸಚಿವ ಆಕಾಂಕ್ಷಿಗಳಿಗೆ ನಿಗಮ-ಮಂಡಳಿಗಳ ನೇಮಕಾತಿಯಲ್ಲಿ ಮೊದಲ ಆದ್ಯತೆ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ಧರಿಸಿದ್ದಾರೆ. ರಾಜ್ಯ ಕಾಂಗ್ರೆಸ್ ಉಸ್ತುವಾರಿ ಹೊಣೆ ಹೊತ್ತಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

ಮುಖ್ಯಮಂತ್ರಿ ಅವರ ಕಾವೇರಿ ನಿವಾಸದಲ್ಲಿ ಇಂದು ಬೆಳಗ್ಗೆ ನಡೆದ ಸಭೆಯಲ್ಲಿ ಮೊದಲ ಹಂತದಲ್ಲಿ 25 ಮಂದಿಗೆ ಅವಕಾಶ ಮಾಡಿಕೊಡಲು ತೀರ್ಮಾನಿಸಲಾಗಿದೆ.

ನಿನ್ನೆ ತಡರಾತ್ರಿವರೆಗೂ ನಗರದ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಸಭೆ ನಡೆಸಿದರಾದರೂ ಪಟ್ಟಿ ಅಂತಿಮಗೊಳಿಸಲು ಸಾಧ್ಯವಾಗಿರಲಿಲ್ಲ, ಇಂದು ಬೆಳಗ್ಗೆ ಮುಖ್ಯಮಂತ್ರಿ ಅವರು ಏರ್ಪಡಿಸಿದ್ದ ಉಪಾಹಾರ ಕೂಟ ಸಭೆಯಲ್ಲಿ ಮೂರು ಶ್ರೇಣಿಯಲ್ಲಿ ವರ್ಗೀಕರಿಸಿ ಪಕ್ಷದ ಶಾಸಕರಿಗೆ ಅವಕಾಶ ಮಾಡಿಕೊಡಲು ನಿರ್ಧರಿಸಲಾಯಿತು.

ಪ್ರಮುಖ ಹಾಗೂ ಲಾಭದಾಯಕವಾಗಿರುವ ನಿಗಮ-ಮಂಡಳಿಗಳನ್ನು ಸಚಿವ ಆಕಾಂಕ್ಷಿಗಳಿಗೆ ಅವಕಾಶ ಮಾಡಿಕೊಡಲಾಗುವುದು. ನಂತರ ಎರಡು-ಮೂರು ಬಾರಿ ಶಾಸಕರಾಗಿರುವವರಿಗೆ ಮೊದಲ ಸುತ್ತಿನಲ್ಲೇ ಅಧ್ಯಕ್ಷಗಿರಿ ದೊರೆಯಲಿದೆ. ಕಾರ್ಯಕರ್ತರಿಗೂ ಮೊದಲ ಪಟ್ಟಿಯಲ್ಲಿ ಅವಕಾಶ ಮಾಡಿಕೊಡಬೇಕೆಂಬ ಬಗ್ಗೆ ಚರ್ಚೆ ನಡೆಯಿತಾದರೂ ಪ್ರಧಾನ ಕಾರ್ಯದರ್ಶಿ ಅವರು, ಸದ್ಯಕ್ಕೆ ಶಾಸಕರಿಗೆ ಅವಕಾಶ ಮಾಡಿಕೊಡೋಣ. ಲೋಕಸಭಾ ಚುನಾವಣೆ ನಂತರ ಉಳಿದ ನಿಗಮ-ಮಂಡಳಿಗಳಿಗೆ ನೇಮಕಾತಿ ಮಾಡುವ ಸಂದರ್ಭದಲ್ಲಿ ಶಾಸಕರು ಮತ್ತು ಕಾರ್ಯಕರ್ತರಿಗೆ ಸಮನಾಗಿ ನೀಡೋಣ ಎಂದಿದ್ದಾರೆ.

ಮೊದಲ ಪಟ್ಟಿಯಲ್ಲಿ ಅವಕಾಶ ಪಡೆದವರಿಗೆ ಈಗಾಗಲೇ 'ಒಪ್ಪಿಗೆ ಇದೆಯೇ' ಎಂಬ ಸಂದೇಶ ಕಳುಹಿಸಲಾಗಿದೆ. ಎರಡು-ಮೂರು ದಿನದಲ್ಲಿ ಸಂಬಂಧಪಟ್ಟ ಇಲಾಖೆಗಳು ಮುಖ್ಯಮಂತ್ರಿ ಸೂಚನೆ ಅನುಸರಿಸಿ ಆದೇಶ ಹೊರಡಿಸಲಿವೆ. ಈ ಮಧ್ಯೆ ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪಂಚರಾಜ್ಯಗಳ ಚುನಾವಣೆ ನಂತರ ನಿಗಮ-ಮಂಡಳಿ ಅಧ್ಯಕ್ಷರುಗಳ ಪಟ್ಟಿ ಹೊರಬೀಳಲಿದೆ ಎಂದರು.

ಪೊಲೀಸ್ ಇಲಾಖೆಯಲ್ಲಿ ಎಸ್‌ಐ, ಕಾನ್ಸ್‌ಟೇಬಲ್ ಸೇರಿ

4547 ಹುದ್ದೆ ಆರು ತಿಂಗಳಲ್ಲಿ ಭರ್ತಿ

●ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮಾಹಿತಿ ●ಕೋರ್ಟ್ ಅನುಮತಿಸಿದ 545 ಎಸ್‌ಐ ಹುದ್ದೆಗೆ ಹಿಂದೆ ಪರೀಕ್ಷೆ ಬರೆದವರಿಗೆ ಮಾತ್ರ ಅವಕಾಶ: ಡಿ.23ಕ್ಕೆ ಮರು ಪರೀಕ್ಷೆ ●ನಂತರ 402 ಎಸ್‌ಐ ಹುದ್ದೆ ಭರ್ತಿಗೆ ಚಾಲನೆ

ಬೆಂಗಳೂರು, ನ.22(ಕೆಎಂಶಿ)- ಇಲಾಖೆಯಲ್ಲಿ ಖಾಲಿ ಇರುವ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಸೇರಿದಂತೆ 4,547 ಹುದ್ದೆಗಳನ್ನು ಮುಂದಿನ ಆರು ತಿಂಗಳಲ್ಲಿ ಭರ್ತಿ ಮಾಡಲಾಗುವುದು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 1547 ಪೊಲೀಸ್ ಸಬ್ ಇನ್ಸ್‌ಪೆಕ್ಟರ್, 3000 ಪೊಲೀಸ್ ಕಾನ್ಸ್‌ಟೇಬಲ್‌ಗಳ ನೇಮಕಾತಿ ಆಗಲಿದೆ ಎಂದರು.

ನ್ಯಾಯಾಲಯದಿಂದ ಒಪ್ಪಿಗೆ ದೊರೆತ ಹಿನ್ನೆಲೆಯಲ್ಲಿ 545 ಮಂದಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗಳನ್ನು ಡಿಸೆಂಬರ್ ಅಂತ್ಯದೊಳಗಾಗಿ ಭರ್ತಿ ಮಾಡಲಾಗುವುದು, ಇದಕ್ಕಾಗಿ ಡಿಸೆಂಬರ್ 23ರಂದು ಇವರಿಗಾಗಿ ಮರುಪರೀಕ್ಷೆ ನಡೆಯಲಿದೆ, ಈ ಹುದ್ದೆಗೆ ಯಾರು ಮೊದಲು ಪರೀಕ್ಷೆ ತೆಗೆದುಕೊಂಡಿದ್ದರೋ ಅಂತಹವರಿಗೆ ಮಾತ್ರ ಅವಕಾಶ. ನಂತರ 402 ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳ ಹುದ್ದೆ ಭರ್ತಿಗೆ ಚಾಲನೆ ನೀಡಲಾಗುವುದು ಎಂದರು.

ಈ ಎರಡು ಪ್ರಕ್ರಿಯೆಗಳು ಒಂದೆರಡು ತಿಂಗಳಲ್ಲಿ ಮುಗಿಯಲಿದ್ದು, ನಂತರ 600 ಮಂದಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಯನ್ನು ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗುವುದು ಎಂದು ತಿಳಿಸಿದರು.



ಇದೇ ರೀತಿ ಮೂರು ಸಾವಿರ ಕಾನ್ಸ್‌ಟೇಬಲ್‌ಗಳನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ಪ್ರಾರಂಭವಾಗಿದ್ದು ಇದೂ ಸೇರಿದಂತೆ ಎಲ್ಲಾ ನೇಮಕಾತಿಯು ಮುಂದಿನ ಆರು ತಿಂಗಳಲ್ಲಿ ಪೂರ್ಣಗೊಳ್ಳಲಿದೆ. ಪೊಲೀಸ್ ಇಲಾಖೆಗೆ ಇನ್ನೂ ಹದಿನೈದು ಸಾವಿರ ಕಾನ್ಸ್‌ಟೇಬಲ್‌ಗಳ ಅಗತ್ಯವಿದ್ದು, ಹಂತಹಂತವಾಗಿ ಇದನ್ನು ಭರ್ತಿ ಮಾಡಿಕೊಳ್ಳಲಾಗುವುದು ಎಂದ ಅವರು,ಆಯ್ಕೆಯಾಗುವವರಿಗೆ ತರಬೇತಿ ನೀಡುವ ಅಗತ್ಯವಿರುವುದರಿಂದ ಒಂದೇ ಕಂತಿನಲ್ಲಿ ಇಷ್ಟು ಮಂದಿಯನ್ನು ನೇಮಕ ಮಾಡಿಕೊಳ್ಳುವುದು ಕಷ್ಟ ಎಂದರು. ಪ್ರತಿ ವರ್ಷ ನಿವೃತ್ತಿಯಾಗುವ ಪೊಲೀಸ್ ಸಿಬ್ಬಂದಿಗಳ ಜಾಗಕ್ಕೆ ಹೊಸ ನೇಮಕಾತಿ ಮಾಡಿಕೊಳ್ಳಲು ಈಗ ಹಣಕಾಸು ಇಲಾಖೆಯ ಒಪ್ಪಿಗೆ ಪಡೆಯಬೇಕು. ಆದರೆ ನಿವೃತ್ತರ ಜಾಗಕ್ಕೆ ಹೊಸಬರನ್ನು ನೇಮಕ ಮಾಡಿಕೊಳ್ಳಲು ಹಣಕಾಸು ಇಲಾಖೆಯ ಒಪ್ಪಿಗೆ ಬೇಕಿಲ್ಲ ಎಂದವರು ಪ್ರತಿಪಾದಿಸಿದರು.



ಆದರೆ ಹೊಸ ಹುದ್ದೆಗಳ ಸೃಷ್ಟಿಗೆ ಹಣಕಾಸು ಇಲಾಖೆ ಒಪ್ಪಿಗೆ ನೀಡುವುದು ಸರಿ. ಆದರೆ ಅಸ್ತಿತ್ವದಲ್ಲಿರುವ ಹುದ್ದೆಗಳ ಅನುಮತಿಗೆ ಅದರ ಅನುಮತಿ ಬೇಕಿಲ್ಲ ಎಂದ ಅವರು,ಮುಂದಿನ ದಿನಗಳಲ್ಲಿ ಈ ನಿಯಮವನ್ನು ಬದಲಿಸಿ ಕಾನೂನು ರೂಪಿಸಲಾಗುವುದು ಎಂದರು. ಪೊಲೀಸ್ ಇಲಾಖೆಯಲ್ಲಿ ಪ್ರತಿ ವರ್ಷ ವರ್ಗಾವಣೆ ಮಾಡಲಾಗುತ್ತಿದ್ದು ಇನ್ನು ಮುಂದೆ ಎರಡು ವರ್ಷಗಳ ನಂತರ ವರ್ಗಾವಣೆ ಮಾಡಬೇಕು ಎಂಬ ಕಾನೂನನ್ನು ರೂಪಿಸಲಾಗುವುದು ಎಂದು ಇದೇ ಸಂದರ್ಭದಲ್ಲಿ ಅವರು ಸ್ಪಷ್ಟಪಡಿಸಿದರು.

ಡ್ರಗ್ ಮುಕ್ತ ಜಿಲ್ಲೆ: ರಾಜ್ಯದಲ್ಲಿ ಡ್ರಗ್ಸ್ ಜಾಲದ ವಿರುದ್ಧ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುತ್ತಿದ್ದು ಮುಂದಿನ ಕೆಲವು ದಿನಗಳಲ್ಲಿ ರಾಜ್ಯದ ಹಲವು ಜಿಲ್ಲೆಗಳನ್ನು ಡ್ರಗ್ ಮುಕ್ತ ಜಿಲ್ಲೆಗಳೆಂದು ಘೋಷಿಸಲು ಸಿದ್ಧತೆ ನಡೆಸಲಾಗಿದೆ ಎಂದು ನುಡಿದರು.

ಸಿಂಥೆಟಿಕ್ ಡ್ರಗ್ ವಿಷಯದಲ್ಲಿ ಸರ್ಕಾರಕ್ಕೆ ಆತಂಕವಿದ್ದು ಗಾಂಜಾದಂತಹ ಮಾದಕ ವಸ್ತುಗಳಿಗಿಂತ ಎಂ.ಡಿ.ಎಂ.ಎನಂತಹ ಸಿಂಥೆಟಿಕ್ ಡ್ರಗ್‌ಗಳು ತುಂಬ ಅಪಾಯಕಾರಿ ಎಂದರಲ್ಲದೆ, ಡ್ರಗ್ಸ್ ಜಾಲದ ವಿರುದ್ಧ ಪೊಲೀಸ್ ಇಲಾಖೆ ಹಿಂದೆಂದಿಗಿಂತ ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಸ್ಪಷ್ಟಪಡಿಸಿದರು.

ಸೈಬರ್ ಅಪರಾಧಗಳನ್ನು ತಡೆಗಟ್ಟಲು ಸೂಕ್ತ ಕಾನೂನು ರೂಪಿಸುವ ಸಂಬಂಧ ಚರ್ಚೆ ನಡೆದಿದ್ದು, ಮುಂದಿನ ಕೆಲವೇ ದಿನಗಳಲ್ಲಿ ಪರಿಣಾಮಕಾರಿಯಾದ ಹೆಜ್ಜೆ ಇಡಲಾಗುವುದು ಎಂದು ವಿವರಿಸಿದರು.

ಗುಜರಾತ್‌ನಲ್ಲಿ ಅಪೌಷ್ಟಿಕತೆ ಸೂಚ್ಯಂಕದಲ್ಲಿ ಏರಿಕೆ; ಪ್ರಧಾನಿ ಮೋದಿಗೆ ಸಿಎಂ ಸಿದ್ದರಾಮಯ್ಯ ಟಾಂಗ್

ಬೆಂಗಳೂರು, ನ.22(ಕೆಎಂಶಿ)- ಅಪೌಷ್ಟಿಕತೆ ಸೂಚ್ಯಂಕದಲ್ಲಿ ಗುಜರಾತ್ ರಾಜ್ಯ ಮತ್ತು ಭಾರತದ ಸೂಚ್ಯಂಕ ಏರಿಕೆ ಆಗುತ್ತಲೇ ಇದೆ. ಏಕೆ ಹೀಗಾಯ್ತು ಎಂದು ತನ್ನನ್ನು ತಾನು ವಿಶ್ವಗುರು ಎಂದು ಕರೆದುಕೊಳ್ಳುವ ಪ್ರಧಾನಮಂತ್ರಿ ಮೋದಿಯವರು ಉತ್ತರಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ರಾಜ್ಯ ಸರ್ಕಾರದ ಅತ್ಯಂತ ಮಹತ್ವಪೂರ್ಣ ಮತ್ತು ಅತ್ಯಂತ ಜನಾರೋಗ್ಯ ಕಾರ್ಯಕ್ರಮವಾದ ಅನೀಮಿಯ ಮುಕ್ತ ಪೌಷ್ಟಿಕ ಕರ್ನಾಟಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಗುಜರಾತ್ ಮಾದರಿ, ಗುಜರಾತ್ ಮಾದರಿ ಎನ್ನುವವರು ಗುಜರಾತ್ ಅಪೌಷ್ಟಿಕತೆ ಸೂಚ್ಯಂಕದಲ್ಲಿ ಮೇಲಕ್ಕೆ ಏರುತ್ತಿರುವುದು ಏಕೆ ಎನ್ನುವುದಕ್ಕೆ ಉತ್ತರಿಸಬೇಕು. ಗುಜರಾತ್‌ನ ಈ ಸ್ಥಿತಿ ಮಾದರಿ ಆಗಲು ಸಾಧ್ಯವೇ ಎಂದು ರಾಷ್ಟ್ರೀಯ ಕುಟುಂಬ ಮತ್ತು ಆರೋಗ್ಯ ಸಮೀಕ್ಷೆ 4 ಮತ್ತು 5ರಲ್ಲಿ ಇರುವ ಅಂಕಿ ಅಂಶಗಳನ್ನು ತುಲನೆ ಮಾಡಿ ಲೇವಡಿ ಮಾಡಿದರು.

ಬಡತನ-ದಾರಿದ್ರ್ಯ-ಅನಕ್ಷರತೆ ಹೋಗದೆ ಎಲ್ಲರಿಗೂ ಉತ್ತಮ ಆರೋಗ್ಯ ಸಿಗುವುದಿಲ್ಲ. ಆದ್ದರಿಂದ ಈ ಮೂರು ಪಿಡುಗುಗಳಿಗೆ ಚಿಕಿತ್ಸೆ ಕೊಡುವುದು ನಮ್ಮ ಸರ್ಕಾರದ ಪ್ರಥಮ ಆದ್ಯತೆಯಾಗಿದೆ.

ಪ್ರತಿಯೊಬ್ಬರ ಮನೆ ಬಾಗಿಲಿಗೆ ಆರೋಗ್ಯದ ಸವಲತ್ತು ತಲುಪಿಸುವುದು ನಮ್ಮ ಸರ್ಕಾರದ ಗುರಿಯಾಗಿದೆ. ಇದಕ್ಕಾಗಿ ಸರ್ಕಾರ ಅಗತ್ಯವಿದ್ದಷ್ಟು ಹಣ ನೀಡಲು ಸಿದ್ಧವಿದೆ ಎಂದರು.

ಮಹಿಳಾ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮತ್ತು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಇಬ್ಬರೂ ಸೇರಿ ನಮ್ಮ ರಾಜ್ಯದ ಮಕ್ಕಳು ಮತ್ತು ಪ್ರತಿಯೊಬ್ಬರೂ ಅತ್ಯಂತ ಆರೋಗ್ಯವಂತರಾಗುವಂತೆ ಇನ್ನಷ್ಟು ಹೆಚ್ಚೆಚ್ಚು ಶ್ರಮಿಸಿ ಸರ್ಕಾರದ ಗುರಿಯನ್ನು ಸಾಧಿಸಿ ತೋರಿಸಬೇಕು ಎಂದು ಕರೆ ನೀಡಿದರು.

ರಜೌರಿಯಲ್ಲಿ ಉಗ್ರರೊಂದಿಗೆ ಗುಂಡಿನ ಕಾಳಗ; ಇಬ್ಬರು ಸೇನಾ ಸಿಬ್ಬಂದಿ ಹುತಾತ್ಮ



ಜಮ್ಮು: ಜಮ್ಮು ಮತ್ತು ಕಾಶ್ಮೀರದ ರಾಜೌರಿ ಜಿಲ್ಲೆಯಲ್ಲಿ ಬುಧವಾರ ಭದ್ರತಾ ಪಡೆಗಳು ಮತ್ತು ಭಯೋತ್ಪಾದಕರ ನಡುವೆ ನಡೆದ ಎನ್‌ಕೌಂಟರ್‌ನಲ್ಲಿ ಇಬ್ಬರು ಸೇನಾ ಸಿಬ್ಬಂದಿ ಹುತಾತ್ಮರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಜೌರಿಯ ಕಲಕೋಟೆ ತಹಸಿಲ್‌ನ ಬಾಜಿ ಮಾಲ್ ಪ್ರದೇಶದಲ್ಲಿ ಭದ್ರತಾಪಡೆಗಳು ಹಾಗೂ ಉಗ್ರರ ನಡುವೆ ಭಾರೀ ಗುಂಡಿನ ಚಕಮಕಿ ನಡೆಯುತ್ತಿದೆ ಎಂದು ಅವರು ಹೇಳಿದ್ದಾರೆ. ಇಬ್ಬರು ಉಗ್ರರು ಅಡಗಿ ಕುಳಿತಿರುವ ಖಚಿತ ಮಾಹಿತಿ ಮೇರೆಗೆ ಭಾರತೀಯ ಸೇನೆ ಮತ್ತು ಜಮ್ಮು ಮತ್ತು ಕಾಶ್ಮೀರ ಪೊಲೀಸರ ಶೋಧ ಕಾರ್ಯಾಚರಣೆ ನಡೆಸಿದ್ದು,ಈ ವೇಳೆ ಉಗ್ರರೊಂದಿಗೆ ಗುಂಡಿನ ಚಕಮಕಿ ನಡೆಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಗುಂಡಿನ ಚಕಮಕಿಯಲ್ಲಿ ಒಬ್ಬ ಅಧಿಕಾರಿ ಹಾಗೂ ಒಬ್ಬ ಯೋಧ ಪ್ರಾಣ ಕಳೆದುಕೊಂಡಿದ್ದಾರೆ ಮತ್ತು ಇನ್ನೊಬ್ಬರು ಗಾಯಗೊಂಡಿದ್ದಾರೆ. ಅವರನ್ನು ಆಸ್ಪತ್ರೆಗೆ ರವಾನಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೇವಾ ವಲಯದಲ್ಲಿ ಪಾಲ್ಗೊಂಡು ನಾಯಕತ್ವ ಗುಣಗಳ ಬೆಳೆಸಿಕೊಳ್ಳಿ

ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ವಿದ್ಯಾರ್ಥಿಗಳಿಗೆ ಕಿವಿಮಾತು



ಮೈಸೂರು, ನ.22(ಎಸ್‌ಪಿಎನ್)- ಕಾಲೇಜು ವ್ಯಾಸಂಗ ಅವಧಿಯಲ್ಲೇ ಯುವಕರು ಸಂಘ-ಸಂಸ್ಥೆಗಳ ಸೇವಾ ವಲಯದಲ್ಲಿ ಗುರುತಿಸಿಕೊಂಡು ಉತ್ತಮ ನಾಯಕತ್ವ, ವ್ಯಕ್ತಿತ್ವ ಹಾಗೂ ದೇಶ ಪ್ರೇಮದ ಗುಣಗಳನ್ನು ಬೆಳೆಸಿಕೊಳ್ಳಬಹುದು ಎಂದು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್. ಮಹಾದೇವಸ್ವಾಮಿ ಅಭಿಪ್ರಾಯಪಟ್ಟರು.

ಮೈಸೂರು ಕುವೆಂಪುನಗರ ಜೆಎಸ್‌ಎಸ್ ಕಾನೂನು ಕಾಲೇಜಿನ ಸಿಲ್ವರ್ ಜೂಬಿಲಿ ಹಾಲ್‌ನಲ್ಲಿ ರೋಟರಾಕ್ಟ್ ಕ್ಲಬ್ ಆಫ್ ಜೆಎಸ್‌ಎಸ್ ಲಾ ಕಾಲೇಜು ಹಾಗೂ ರೋಟರಿ ಮೈಸೂರು ಉತ್ತರ ಸಹಯೋಗದೊಂದಿಗ ಆಯೋಜಿಸಿದ್ದ ಪದಗ್ರಹಣ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾನಾಡಿದ ಅವರು, ಸೇವಾ ಕ್ಷೇತ್ರದ ಜತೆಜತೆಗೆ ರಾಜಕೀಯ, ವೃತ್ತಿ ಹಾಗೂ ಉದ್ಯಮದಲ್ಲಿ ಉನ್ನತ ಸ್ಥಾನ ತಲುಪಬಹುದು ಎಂದು ತಿಳಿಸಿದರು.


ಪ್ರಸ್ತುತ ರೋಟರಾಕ್ಟ್ ಕ್ಲಬ್ ಸದಸ್ಯನಾಗಿ, ರೋಟರಿ ಮೈಸೂರು ಉತ್ತರದ ಸದಸ್ಯನಾಗಿ ಗ್ರಾಮೀಣ ಭಾಗದಲ್ಲಿ ಸಾಕಷ್ಟು ಸೇವೆ ಸಲ್ಲಿಸಲು ಹಲವು ಸಂದರ್ಭಗಳಲ್ಲಿ ಉತ್ತಮ ವೇದಿಕೆ ಒದಗಿಸಿಕೊಟ್ಟಿತು. ಇದರಿಂದ ರಾಜಕೀಯವಾಗಿ ಮೈಸೂರು ತಾಪಂ ಅಧ್ಯಕ್ಷನಾಗಿ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷನಾಗಿ ಸೇವೆ ಸಲ್ಲಿಸಲು ಅವಕಾಶ ಸಿಕ್ಕಿದ್ದು, ರೋಟರಿ ಸಂಸ್ಥೆಯ ಸೇವಾವಲಯದಲ್ಲಿ ಗುರುತಿಸಿಕೊಂಡಿದ್ದರಿಂದ ಎಂದರೆ ತಪ್ಪಾಗಲಾರದು ಎಂದರು.

ರೋಟರಾಕ್ಟ್ ಕ್ಲಬ್ ಅಧ್ಯಕ್ಷ, ಕಾರ್ಯದರ್ಶಿ ಪದಗ್ರಹಣ: ಈ ಸಾಲಿನ(2023-24ನೇ) ರೋಟರಾಕ್ಟ್ ಕ್ಲಬ್ ಜೆಎಸ್‌ಎಸ್ ಲಾ ಕಾಲೇಜು ಸಂಸ್ಥೆಗೆ ರೋ.ಪವನ್ ಆರ್.ಗೌಡ ಅಧ್ಯಕ್ಷರಾಗಿ ಹಾಗೂ ರೋ. ಹೆಚ್.ವಿ.ಸೃಷ್ಟಿ ಕಾರ್ಯದರ್ಶಿಯಾಗಿ ಬುಧವಾರ ಪದಗ್ರಹಣ ಮಾಡಿದರು.

ಇವರೊಂದಿಗೆ ರೋಟರಾಕ್ಟ್ ಕ್ಲಬ್ ಛೇರ್ಮನ್ ರೋ.ವಿಸ್ಮಯ ಗೌಡ, ವೈಸ್ ಛೇರ್ಮನ್ ಮೇಘರಾಜ್, ಉಪಾಧ್ಯಕ್ಷ ರೋ.ಆರ್.ಅನಿಷ್, ಜಂಟಿ ಕಾರ್ಯದರ್ಶಿ ರೋ.ಎಸ್.ಹರ್ಷಿತ, ಕ್ಲಬ್ ಸರ್ವೀಸ್ ಡೈರೆಕ್ಟರ್ ರೋ.ಕೆ.ಬಿ.ಅನಘಾ, ಸಹ ನಿರ್ದೇಶಕ ರೋ.ಎಸ್.ಸೋಮದತ್ತ, ಖಜಾಂಚಿ ರೋ.ಭಾನುಶ್ರೀ, ಅಂತರ ರಾಷ್ಟ್ರೀಯ ಸೇವಾ ನಿರ್ದೇಶಕಿಯಾಗಿ ರೋ.ಪಿ.ಡಿ.ದೀಪ್ತಿ, ಸಹ ನಿರ್ದೇಶಕಿ ರೋ.ಕವೀಶ, ಸಮುದಾಯ ಸೇವಾ ನಿರ್ದೇಶಕ ರೋ.ಮನು ಡಿ.ಗೌಡ, ಸಾಂಸ್ಕೃತಿಕ ಸಮಿತಿ ನಿರ್ದೇಶಕರಾಗಿ ರೋ.ಎಸ್.ಪೂರ್ಣ, ಸಹ ನಿರ್ದೇಶಕ ರೋ.ಚಂದನ, ವೃತ್ತಿಪರ ಸೇವಾ ನಿರ್ದೇಶಕರಾಗಿ ಅಂಕಿತ, ಸಹ ನಿರ್ದೇಶಕರಾಗಿ ಅನುರಾಗ್, ಯುವ ಸೇವಾ ನಿರ್ದೇಶಕರಾಗಿ ಅಂತರಿಕ್ಷಾ, ಸಹ ನಿರ್ದೇಶಕರಾಗಿ ದೇವರಾಜ್, ಮಾಧ್ಯಮ ಸಮಿತಿ ನಿರ್ದೇಶಕ ಭ್ರಮೇಶ್, ಸಂಪಾದಕೀಯ ಸಮಿತಿ ನಿರ್ದೇಶಕ ರೋ.ಅಮೋಘ, ಸಹ ನಿರ್ದೇಶಕ ಸುಷ್ಮಿತ, ಸಾರ್ಜೆಂಟ್ ಅಟ್ ಆರ್ಮ್ಸ್, ರೋ.ಲಿಖಿತ್ ಗೌಡ, ಮಾಧ್ಯಮ ಸಮಿತಿ ನಿರ್ದೇಶಕ ನಿಶ್ಚಲ್, ಸಹ ನಿರ್ದೇಶಕಿ ತ್ರಿಷಾ, ಈವೆಂಟ್ ಆರ್ಗನೈಜೇಷನ್ ಸಮಿತಿ ನಿರ್ದೇಶಕರಾಗಿ ಶಿವಪ್ರಸಾದ್, ಸಹನಿರ್ದೇಶಕರಾಗಿ ಈ.ಬಿ.ಚಂದನ ಪದಗ್ರಹಣ ಮಾಡಿದರು.

ಈ ಸಂದರ್ಭದಲ್ಲಿ ಸಹಾಯಕ ಗವರ್ನರ್ ಬಿಬಿಎಂಪಿ ನಿವೃತ್ತ ಇಂಜಿನಿಯರ್ ರೋ.ಎಂ.ಕೆ.ನಂಜಯ್ಯ ನೂತನ ರೋಟರಾಕ್ಟ್ ಕ್ಲಬ್ ಅಧ್ಯಕ್ಷ, ಉಪಾಧ್ಯಕ್ಷರು, ಪದಾಧಿಕಾರಿಗಳಿಗೆ ಕ್ಲಬ್ ಚಿಹ್ನೆ ನೀಡಿ, ಅಧಿಕಾರ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಈ ವೇಳೆ 2022-23ನೇ ಸಾಲಿನ ಅಧ್ಯಕ್ಷ ಸಿ.ಎಚ್.ಪವನ್ ಕುಮಾರ್ ತಮ್ಮ ಸೇವಾವಧಿ ವರದಿ ಮಂಡಿಸಿದರು. ಕಾರ್ಯದರ್ಶಿ ಎ.ಬಿ.ಚಿತ್ತಿನ್ ಚಿನ್ನಪ್ಪ, ಜೆಎಸ್‌ಎಸ್ ಲಾ ಕಾಲೇಜಿನ ಡಾ.ಎಸ್. ನಟರಾಜು, ರೋ.ರಾಜು, ರೋ.ಎಸ್. ಎಚ್.ಜಗದೀಶ್, ರೋ.ರಾಜಶೇಖರ ಕದಂಬ ಉಪಸ್ಥಿತರಿದ್ದರು.

ಪತ್ರಿಕಾ ವಿತರಣೆಯಲ್ಲೇ ಮೈಸೂರು ಕನಕ ರತ್ನರ ಸಾರ್ಥಕ ಬದುಕು



■ ಗಣೇಶ್.ಎ

ಮೈಸೂರು, ನ.22-ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿದ್ದು, ಅದೇ ಸಾಲಿಗೆ ಮೈಸೂರಿನ ಏಕೈಕ ಮಹಿಳಾ ಪತ್ರಿಕಾ ವಿತರಕರಾಗಿ ಕನಕ ರತ್ನ ಯುವ ಸಮೂಹಕ್ಕೆ ಸ್ಫೂರ್ತಿಯಾಗಿದ್ದಾರೆ.

ಹೌದು, ಒಂದು ಕಾಲದಲ್ಲಿ ಅಡುಗೆ ಮನೆಗೆ ಸೀಮಿತವಾಗಿದ್ದ ಮಹಿಳೆಯರು ಸೌಟು ಹಿಡಿಯುವುದರಿಂದ ಆರಂಭಿಸಿ, ಆಟೋ ಓಡಿಸುವುದು, ಲಾರಿ, ಬಸ್ ಚಾಲನೆ, ಕೊನೆಗೆ ವಿಮಾನ ಹಾರಾಟದಲ್ಲೂ ಸೈ ಎನಿಸಿಕೊಂಡರು. ಬಾಹ್ಯಾಕಾಶ ಸಂಶೋಧನೆಯಲ್ಲಿ ಅವಿರತ ಶ್ರಮಿಸುತ್ತಿದ್ದಾರೆ. ಪ್ರಧಾನಿ, ರಾಷ್ಟ್ರಪತಿ, ಹಣಕಾಸು ಸಚಿವರು ಮತ್ತು ಕ್ರೀಡಾ ಕ್ಷೇತ್ರ ಸೇರಿದಂತೆ ಎಲ್ಲಾ ಕ್ಷೇತ್ರದಲ್ಲಿಯೂ ಮಹಿಳೆಯರು ಹೆಗ್ಗುರುತು ಮೂಡಿಸುತ್ತಿದ್ದು, ಎಲ್ಲಾ ಕಡೆಯೂ ಪುರುಷರಿಗೆ ಸರಿಸಾಟಿಯಾಗಿ ನಿಂತಿದ್ದಾರೆ. ಪರಿಶ್ರಮದಲ್ಲಿ ಮಹಿಳೆಯ ಸಂಯಮ ಅನನ್ಯವಾದುದು. 71 ವರ್ಷದ ಹಿರಿಯ ಜೀವ ಕನಕ ರತ್ನ ಪತ್ರಿಕಾ ವಿತರಕರಾಗಿ ಜೀವನ ಕಟ್ಟಿಕೊಂಡವರು.

ಮಾರುಕಟ್ಟೆಗೆ ಹೆಸರುವಾಸಿ

ಮೈಸೂರಿನ ದೇವರಾಜ ಮಾರುಕಟ್ಟೆಯಲ್ಲಿ ಹೂ, ಹಣ್ಣು, ತರಕಾರಿ, ಪೂಜಾ ಸಾಮಗ್ರಿ, ಪಾತ್ರೆ, ಪುಸ್ತಕ ಸೇರಿದಂತೆ ಅನೇಕ ಅಂಗಡಿಗಳಿಂದ ಕೂಡಿದ್ದು, ಯಾವುದೇ ಅಂಗಡಿ ಅಥವಾ ಆಟೋ ಚಾಲಕರ ಬಳಿ ತೆರಳಿ ಕನಕ ರತ್ನ ಅವರ ಬಗ್ಗೆ ವಿಚಾರಿಸಿದರೆ, ಎಲ್ಲರೂ 'ಓ ಅವರಾ ಇಲ್ಲೇ ಇದ್ದಾರೆ ಶ್ರಮ ಜೀವಿ' ಎಂದು ಮೆಚ್ಚುಗೆಯ ಮಾತುಗಳು ಕೇಳಿ ಬರುತ್ತವೆ.

ಕಡೇ ದಿನದವರೆಗೂ ಪತ್ರಿಕಾ ವಿತರಕಿ

> "ನನಗೆ ಈಗ 71 ವರ್ಷ. ಬಹಳಷ್ಟು ಗಟ್ಟಿಮುಟ್ಟಾಗಿ ಇದ್ದೇನೆ. ಜೊತೆಗೆ ಬಿಪಿ, ಶುಗರ್ ಸೇರಿದಂತೆ ಯಾವುದೇ ಸಮಸ್ಯೆಗಳಿಲ್ಲ. ಜೀವನದ ಕಟ್ಟಕಡೆಯ ದಿನದವರೆಗೂ ಯಾರಿಗೂ ಹೊರೆಯಾಗದಂತೆ ಪತ್ರಿಕೆ ಮಾರಾಟ ಮಾಡಿ ಜೀವನ ಸಾಗಿಸುತ್ತೇನೆ. ಕಳೆದ 18 ವರ್ಷದಿಂದ ನಾನು ಮಾಡುತ್ತಿರುವ ಕೆಲಸಕ್ಕೆ ಯಾರಿಂದಲೂ ಸಮಸ್ಯೆಯಾಗಿಲ್ಲ. ಅದರಲ್ಲೂ ಆಟೋ ಚಾಲಕರು ಮತ್ತು ಪೊಲೀಸರು ಹೆಚ್ಚಿನ ಪ್ರೋತ್ಸಾಹ ನೀಡುತ್ತಾರೆ. ನಿತ್ಯವೂ ರಾಜ್ಯದ ಎಲ್ಲಾ ಕನ್ನಡ ಪತ್ರಿಕೆಗಳನ್ನು ಮಾರಾಟ ಮಾಡುತ್ತಿದ್ದೇನೆ. ಆದರೆ, 'ಮೈಸೂರು ಮಿತ್ರ' ಪತ್ರಿಕೆಗೆ ಹೆಚ್ಚು ಬೇಡಿಕೆ ಇದ್ದು, ನಿತ್ಯವೂ 80ಕ್ಕೂ ಹೆಚ್ಚು ಪತ್ರಿಕೆ ಮಾರಾಟವಾಗುತ್ತವೆ.
> -ಕನಕ ರತ್ನ, ಮೈಸೂರಿನ ಏಕೈಕ ಮಹಿಳಾ ಪತ್ರಿಕಾ ವಿತರಕರು.

ಮೈಸೂರಿನ ಮಂಡಿ ಮೊಹಲ್ಲಾ ನಿವಾಸಿಯಾದ ಪತ್ರಿಕಾ ವಿತರಕರಾದ ಸತ್ಯನಾರಾಯಣ ಶೆಟ್ಟಿ ಅವರನ್ನು 38 ವರ್ಷಗಳ ಹಿಂದೆ ವಿವಾಹವಾದ ಕನಕ ರತ್ನ, ಪತಿಯ ವೃತ್ತಿಗೆ ಸಾಥ್ ನೀಡಿದ್ದರು. ಬೆಳಗ್ಗೆ ಸತ್ಯನಾರಾಯಣ ಶೆಟ್ಟಿ ಅವರು ದಿನಪತ್ರಿಕೆಗಳನ್ನು ಏಜೆಂಟ್‌ಗಳ ಬಳಿ ಖರೀದಿಸಿ ಮನೆಗಳಿಗೆ ತಲುಪಿಸುತ್ತಿದ್ದರು. ನಂತರ ರೇಸ್‌ಕೋರ್ಸ್ ಬಳಿ ಮ್ಯಾಗಜಿನ್‌ಗಳನ್ನು ಮಾರಾಟ ಮಾಡುತ್ತಿದ್ದರು.

ಈ ವೇಳೆ ಮನೆ ಕೆಲಸ ಮುಗಿಸಿ, ಕನಕ ರತ್ನ ಮೈಸೂರು ದೇವರಾಜ ಮಾರುಕಟ್ಟೆ ಬಳಿಯ ಗುರು ಸ್ವೀಟ್ಸ್ ಮುಂಭಾಗದ ಆಟೋ ನಿಲ್ದಾಣದ ಬಳಿ ಕುಳಿತು ಮೈಸೂರಿನ ಸ್ಥಳೀಯ ಪತ್ರಿಕೆಗಳು ಸೇರಿದಂತೆ ಎಲ್ಲಾ ಪತ್ರಿಕೆಗಳನ್ನು ಮಾರಾಟ ಮಾಡುತ್ತಿದ್ದರು. ಮಧ್ಯಾಹ್ನದ ನಂತರ ದಂಪತಿ ವಿಶ್ರಾಂತಿ ಪಡೆಯುತ್ತಿದ್ದರು. ಈ ದಂಪತಿಗೆ ಮಕ್ಕಳಿಲ್ಲ. ಹೀಗೆ ಇಬ್ಬರ ಪತ್ರಿಕಾ ವಿತರಕ ಜೀವನ ಸಾಗುತ್ತಿದ್ದ ಕಾಲಮಾನದಲ್ಲೇ ಪತಿ ಸತ್ಯನಾರಾಯಣ ಶೆಟ್ಟಿ ಕಾಲವಾದರು.

> "ಕನಕ ರತ್ನ ಅವರ ಪತಿ ಮೊದಲು ಈ ವೃತ್ತಿಯನ್ನು ಮಾಡಿಕೊಂಡು ಬರುತ್ತಿದ್ದರು. ಅವರು ಕಾಲವಾದ ನಂತರ ಈ ವೃತ್ತಿಯನ್ನು ಇವರು 18 ವರ್ಷಗಳಿಂದ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಆದರೆ, ಅವರಿಗೆ ಸ್ವಂತ ಸೂರಿಲ್ಲ. ಸರ್ಕಾರ ಈ ರೀತಿಯ ಶ್ರಮಜೀವಿಗಳನ್ನು ಗುರುತಿಸಿ ನಿವೇಶನ ನೀಡಬೇಕು.
> -ಹೋಮದೇವ್, ಅಧ್ಯಕ್ಷ, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘ

ಈ ಘಟನೆ ನಂತರ ಮನೆಯಲ್ಲಿ ಏಕಾಂಗಿಯಾಗಿದ್ದ ಕನಕ ರತ್ನರಿಗೆ ನೆರೆಯ ಮನೆಯ ಕುಮುದಾ ಅವರು ಆಸರೆಯಾದರು. ಕಳೆದ 18 ವರ್ಷಗಳಿಂದ ಯಾವುದೇ ಬಾಡಿಗೆ ಪಡೆಯದೇ ತಮ್ಮ ಮನೆಯಲ್ಲಿಯೇ ಕನಕ ರತ್ನರಿಗೆ ಆಶ್ರಯ ನೀಡಿದ್ದಾರೆ. ಅವರ ಊಟಕ್ಕೆ ಅವರ ಸಮುದಾಯವು ಬೆನ್ನೆಲುಬಾಗಿ ನಿಂತಿದ್ದು, ನಿತ್ಯವೂ ಊಟದ ವ್ಯವಸ್ಥೆ ಕಲ್ಪಿಸುತ್ತಿದ್ದಾರೆ.

ಪತಿ ಕಳೆದುಕೊಂಡು ಏಕಾಂಗಿಯಾದ ಕನಕ ರತ್ನ ಅವರು ಪ್ರೀತಿಯ ವೃತ್ತಿಯನ್ನು ಬಿಡಲಿಲ್ಲ. ಅವರೇ ಬೆಳಗ್ಗೆ 4.30ಕ್ಕೆ ಎದ್ದು, ನಿತ್ಯ ಕರ್ಮಗಳನ್ನು ಮುಗಿಸಿಕೊಂಡು ನಂತರ ಮನೆಯಿಂದ ನಡೆದುಕೊಂಡು 5 ಗಂಟೆಗೆ ದೇವರಾಜ ಮಾರುಕಟ್ಟೆ ಬಳಿಯ ಪತ್ರಿಕಾ ಏಜೆಂಟ್‌ಗಳ ಬಳಿ ತೆರಳಿ ಪತ್ರಿಕೆಗಳನ್ನು ಖರೀದಿ ಮಾಡುತ್ತಾರೆ. ತದನಂತರ ದೇವರಾಜ ಮಾರುಕಟ್ಟೆಯ ಬಹುತೇಕ ಅಂಗಡಿಗಳಿಗೆ ಮತ್ತು ಕೆಲ ಮನೆಗಳಿಗೂ ಪತ್ರಿಕೆಗಳನ್ನು ಹಾಕುತ್ತಾರೆ. ನಂತರ ಗುರು ಸ್ವೀಟ್ಸ್ ಮುಂಭಾಗದ ಆಟೋ ನಿಲ್ದಾಣದ ಬಳಿ ಕುಳಿತುಕೊಂಡು ಬಾಕಿ ಪತ್ರಿಕೆಗಳನ್ನು ಮಾರಾಟ ಮಾಡುತ್ತಾರೆ. ಇದನ್ನು ಕಳೆದ 18 ವರ್ಷಗಳಿಂದ ನಿರಂತರವಾಗಿ ಮಾಡಿಕೊಂಡು ಬರುತ್ತಿದ್ದಾರೆ. ಕೊರೊನಾ ಸಂದರ್ಭದಲ್ಲಿಯೂ ಧೃತಿಗೆಡದೇ ಪತ್ರಿಕೆ ವಿತರಣೆ ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ಇವರ ಈ ಸೇವೆಯನ್ನು ಗುರುತಿಸಿ ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಮತ್ತು ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಇತ್ತೀಚೆಗೆ ನಗರದ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಅಭಿಮಾನದ ಅಭಿನಂದನಾ ಸಮಾರಂಭದಲ್ಲಿ ಅಭಿನಂದಿಸಲಾಯಿತು.

ಜನರ ಮನೆ ಬಾಗಿಲಿಗೆ ಸವಲತ್ತು ಕಲ್ಪಿಸಿ

ಅಧಿಕಾರಿಗಳಿಗೆ ಜನ ಸೇವೆ ಪಾಠ ಹೇಳಿದ ಶಾಸಕ ಜಿ.ಡಿ.ಹರೀಶ್‌ಗೌಡ

ಹುಣಸೂರು, ಹಿರೀಕ್ಯಾತನಹಳ್ಳಿ, ನ.22– ಜನರ ಮನೆ ಬಾಗಿಲಿಗೆ ಸೌಲತ್ತುಗಳನ್ನು ತಲುಪಿಸುವ ಗುರಿ ನನ್ನದು. ರೈತರ ಕಷ್ಟಕ್ಕೆ ಅಧಿಕಾರಿಗಳು ಸ್ಪಂದಿಸಬೇಕು. ಅಧಿಕಾರಿಗಳು ಸಹ ಶಾಸಕರ ಜೊತೆ ಕೈಜೋಡಿಸಿ ಕೆಲಸ ಮಾಡಬೇಕು. ಜನರ ಕೆಲಸಗಳನ್ನು ಶಾಸಕರ ಗಮನಕ್ಕೆ ಬಂದ ಮೇಲೆ ಮಾಡುವ ಬದಲು ಮುಂಚಿತವಾಗಿ ಮಾಡಿಕೊಟ್ಟರೆ ಜನರು ನಿಮಗೂ ಕೂಡ ಋಣಿಯಾಗಿರುತ್ತಾರೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದ್ದಾರೆ.

ತಾಲೂಕಿನ ಗಾವಡಗೆರೆ ಗ್ರಾಮದ ಶಿವಾಜಿ ಛತ್ರಪತಿ ಮರಾಠ ಸಮುದಾಯ ಭವನದಲ್ಲಿ ತಾಲೂಕು ಆಡಳಿತ ವತಿಯಿಂದ ಆಯೋಜಿಸಿದ್ದ ಹೋಬಳಿಯ ಮಟ್ಟದ ಜನಸಂಪರ್ಕ ಸಭೆಯಲ್ಲಿ ಜನರ ಸೇವೆ ಬಗ್ಗೆ ಅಧಿಕಾರಿಗಳಿಗೆ ಪಾಠ ಮಾಡಿದ ಅವರು, ಜೊತೆಗೆ 2–3 ಬಾರಿ ಕಚೇರಿಗೆ ಜನರು ಅಲೆದಾಡುವುದು ಬೇಡ. ಬಡವರ ಸೇವೆಗಾಗಿ ಅಧಿಕಾರಿಗಳು ಕೆಲಸ ಮಾಡಬೇಕು ಎಂದರು.

ಈ ಭಾಗದ ಜನರ ಕಷ್ಟ ಸುಖಗಳನ್ನು ತಿಳಿದುಕೊಳ್ಳಲು ಮತ್ತು ಮೂಲಸೌಕರ್ಯವನ್ನು ಕಲ್ಪಿಸುವ ನಿಟ್ಟಿನಲ್ಲಿ ಯಾವ ಹೆಜ್ಜೆ ಇಡಬೇಕು ಎಂಬ ಬಗ್ಗೆ ಮಾಹಿತಿ ಪಡೆದುಕೊಳ್ಳಲು ಅನುಕೂಲವಾಗುವಂತೆ ಜನಸಂಪರ್ಕ ಸಭೆ ನಡೆಸಲಾಗುತ್ತಿದೆ ಎಂದರು.

ಕ್ಷೇತ್ರದಲ್ಲಿನ ಕುಡಿಯುವ ನೀರು, ರಸ್ತೆ ಸೌಕರ್ಯ ಸೇರಿದಂತೆ ಹತ್ತು ಹಲವು ಉದ್ದೇಶಗಳನ್ನು ಒಳಗೊಂಡ



ಯೋಜನೆಗಳನ್ನು ತಯಾರಿಸಿದ್ದು, ಹಂತ ಹಂತವಾಗಿ ಅನುಷ್ಠಾನಕ್ಕೆ ತರಲಾಗುವುದು. ಈ ನಿಟ್ಟಿನಲ್ಲಿ ಮತ್ತಷ್ಟು ಸೌಲಭ್ಯವಂಚಿತ ಗ್ರಾಮಗಳ ಬಗ್ಗೆ ತಿಳಿದುಕೊಳ್ಳಲು ಹಾಗೂ ಅಭಿವೃದ್ಧಿಪಡಿಸಲು ಅನುಕೂಲವಾಗುವಂತೆ ಮಾಡಲು ಉದ್ದೇಶಿಸಲಾಗಿದೆ ಎಂದು ಶಾಸಕರು ನುಡಿದರು.

ಗ್ರಾಮದಲ್ಲಿ ಸಮರ್ಪಕವಾಗಿ ಕುಡಿಯುವ ನೀರಿನ ಸರಬರಾಜು ಇಲ್ಲ. ನಾಡ ಕಚೇರಿಗೆ ಸ್ವಂತ ಕಟ್ಟಡವಿಲ್ಲ, ಅಂಬೇಡ್ಕರ್ ಭವನ ನಿರ್ಮಾಣಕ್ಕೆ ನಿವೇಶನ ಗುರುತಿಸಬೇಕು. ಶಾಲೆಗಳಿಗೆ ಸುಸಜ್ಜಿತವಾದ ಕೊಠಡಿಗಳ ಕೊರತೆ ಇದೆ, ನಿವೇಶನ ರಹಿತರಿಗೆ ನಿವೇಶನ ನೀಡಬೇಕು, ಸಮರ್ಪಕವಾದ ರಸ್ತೆ ವ್ಯವಸ್ಥೆ ಇಲ್ಲ... ಎಂಬಿತ್ಯಾದಿ ದೂರುಗಳನ್ನು ಗ್ರಾಮಸ್ಥರು ಶಾಸಕರ ಸಮ್ಮುಖದಲ್ಲಿ ತಹಶೀಲ್ದಾರ್ ಮಂಜುನಾಥ್ ಅವರ ಗಮನಕ್ಕೆ ತಂದರು.

ದೂರುಗಳನ್ನು ಆಲಿಸಿದ ಶಾಸಕರು ಆದ್ಯತೆ ಮೇರೆಗೆ ಸಮಸ್ಯೆಗಳನ್ನು ಬಗೆಹರಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಇದೇ ಸಂದರ್ಭದಲ್ಲಿ ವಿವಿಧ ಯೋಜನೆಯ 67 ವೃದ್ಧರಿಗೆ ಮಾಸಾಶನ ಪತ್ರ ವಿತರಿಸಲಾಯಿತು. ಜೊತೆಗೆ ಸುಮಾರು 254ಕ್ಕೂ ಹೆಚ್ಚು ಜನರು ತಮ್ಮ

> ‘ಜನ ಅಧಿಕಾರ ನೀಡಿದ್ದಾರೆ. ಅದೂ ನಮ್ಮ ಸೇವೆ ಮಾಡಲೆಂದು, ನಾವು ಅವರ ನಿರೀಕ್ಷೆ ಹುಸಿ ಮಾಡಬಾರದು. ಅವರ ಕಷ್ಟ ನಿವಾರಿಸಿದರೆ ಅವರು ನೆಮ್ಮದಿ ನಿಟ್ಟುಸಿರು ಬಿಡುತ್ತಾರೆ. ಅದೇ ನಾವು ಮಾಡುವ ಪುಣ್ಯ ಕಾರ್ಯ.
> –ಜಿ.ಡಿ.ಹರೀಶ್‌ಗೌಡ, ಶಾಸಕರು.

ಸಮಸ್ಯೆಯನ್ನು ಹೇಳಿ ಮನವಿಯನ್ನು ಶಾಸಕರಿಗೆ ಸಲ್ಲಿಸಿದರು.

ಇಓ ಮನು, ಬಿಇಓ ರೇವಣ್ಣ, ಉಪ ತಹಸೀಲ್ದಾರ್ ಅರುಣ್ ಕುಮಾರ್, ಎಇಇಗಳಾದ ನರಸಿಂಹಯ್ಯ, ಭೋಜರಾಜ್, ತೋಟಗಾರಿಕಾ ಇಲಾಖೆ ಇಲಾಖೆಯ ಸಹಾಯಕ ನಿರ್ದೇಶಕಿ ನೇತ್ರಾವತಿ, ಕೃಷಿ ಇಲಾಖೆ ವೀರಣ್ಣ, ಗಾವಡಗೆರೆ ಗ್ರಾಪಂ ಅಧ್ಯಕ್ಷೆ ಧನಲಕ್ಷ್ಮಿ, ಮುಳ್ಳೂರು ಗ್ರಾಪಂ ಅಧ್ಯಕ್ಷೆ ಅನುಸೂಯ ಬಾಯಿ, ಜಾಬಗೆರೆ ಗ್ರಾಪಂ ಅಧ್ಯಕ್ಷೆ ಮಂಜುಳ, ಹರವೆ ಗ್ರಾಪಂ ಅಧ್ಯಕ್ಷ ಧನಂಜಯ, ಬಿಳಿಗೆರೆ ಗ್ರಾಪಂ ಅಧ್ಯಕ್ಷೆ ಭಾರತಿ ಸೇರಿದಂತೆ ಸ್ಥಳೀಯ ಮುಖಂಡರು ಹಾಗೂ ಅಧಿಕಾರಿಗಳು ಹಾಗೂ ಸತ್ಯ ಫೌಂಡೇಷನ್ ಅಧ್ಯಕ್ಷ ಸತ್ಯಪ್ಪ, ನಿಂಗರಾಜು ಮಲ್ಲಾಡಿ, ಹೊನ್ನಪ್ಪ ರಾವ್ ಕಾಳಿಂಗೆ, ಹರವೆ ಶ್ರೀಧರ್, ಬಿಳಿಗೆರೆ ಪ್ರಭು ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಮಂಗಳ ವರುಂ(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಘೋಸ್ಟ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಟೈಗರ್–3 (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಜಪಾನ್ (ಇ)	4 ಪ್ರದರ್ಶನಗಳು
ಗಾಯಿತ್ರಿ	
ಲಿಯೋ (ಕ)	2 ಪ್ರದರ್ಶನಗಳು
ರಾಜಕಮಲ್	
ಟೈಗರ್–3 (ಹಿಂದಿ)	4 ಪ್ರದರ್ಶನಗಳು
ಸಂಗಂ	
ಸಪ್ತ ಸಾಗರದಾಚೆ ಎಲ್ಲೋ–ಸೈಡ್ B(ಕ)	4 ಪ್ರದರ್ಶನಗಳು
ಲಿಡೋ	
ಗರಡಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಂಗಳ ವರುಂ (ಕ)	4 ಪ್ರದರ್ಶನಗಳು
ಪ್ರಭಾ	
ನೇತ್ರಂ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಟೈಗರ್ 3(ಹಿಂ): ಬೆ.10.20ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಟಗರುಪಲ್ಯ (ಕ): ಮ.1.20ಕ್ಕೆ.
ಸ್ಕ್ರೀನ್ 2	ದಿ ವೆಕೆಂಟ್ ಹೌಸ್ (ಕ): ಬೆ.11ಕ್ಕೆ, ರಾಜಯೋಗ (ಕ): ಮ.1.15ಕ್ಕೆ, ನೇತ್ರಂ (ಕ): ಸಂ.4.30ಕ್ಕೆ, ಗರಡಿ (ಕ): ರಾ.7.10ಕ್ಕೆ, ಸ್ಪಾರ್ಕ್ ಲೈಫ್ (ತೆ): ರಾ.10ಕ್ಕೆ.
ಸ್ಕ್ರೀನ್ 3	ಟ್ರೋಲ್ಸ್ ಬ್ಯಾಂಡ್ ಟುಗೆದರ್ (3ಡಿ)(ಇಂ): ಬೆ.11ಕ್ಕೆ, ಮ.3.35ಕ್ಕೆ, ಸಂ.5.30ಕ್ಕೆ, ಬೆಂಬಿಡದ ನಾವಿಕ (ಕ): ಮ.1ಕ್ಕೆ, ಶೇಶಮ್ ಮೈಕ್ ಇಲ್ ಫಾತಿಮಾ (ಮ): ರಾ.7.30ಕ್ಕೆ, ದಿ ಹಂಗರ್ ಗೇಮ್ಸ್ (ಇಂ): ರಾ.10.10ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.05ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.9.40ಕ್ಕೆ, ಮ.12.50ಕ್ಕೆ, ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.9ಕ್ಕೆ, ಮ.12.10ಕ್ಕೆ, ಸಂ.3.20ಕ್ಕೆ, ಸಂ.6.30ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 3	ಟೈಗರ್ 3 (ಹಿಂ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 4	ಮಂಗಳವಾರಂ (ತೆ): ಬೆ.9.10ಕ್ಕೆ, ಮ.12.25ಕ್ಕೆ, ಸಂ.6.45ಕ್ಕೆ, ಗರಡಿ (ಕ): ಮ.3.40ಕ್ಕೆ, ಟೈಗರ್ 3 (ಹಿಂ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ದಿ ವೆಕೆಂಟ್ ಹೌಸ್ (ಕ): ಬೆ.11ಕ್ಕೆ, ಸಂ.4.10ಕ್ಕೆ, ರಾಜಯೋಗ (ಕ): ಮ.1.05ಕ್ಕೆ, ಸಂ.6.15ಕ್ಕೆ, ಟಗರುಪಲ್ಯ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10ಕ್ಕೆ, ಮ.1.15ಕ್ಕೆ, ರಾ.7.30ಕ್ಕೆ, ಟೈಗರ್ 3 (ಹಿಂ): ಸಂ.4.20ಕ್ಕೆ.
ಸ್ಕ್ರೀನ್ 3	ಟೈಗರ್ 3(ಹಿಂ): ಬೆ.11ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.3.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಟಗರುಪಲ್ಯ (ಕ): ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.50ಕ್ಕೆ, ಟೈಗರ್ 3 (ಹಿಂ): ಮ.1.05ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್ (ಹಿಂ):** ಮ.3.50ಕ್ಕೆ, **ಭಗವಂತ್ ಕೇಸರಿ (ತೆ):** ರಾ.7.05ಕ್ಕೆ, **ಗಣಪತ್: ಎ ಹೀರೋ (ಹಿಂ):** ಸಂ.4.10ಕ್ಕೆ, **ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ):** ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, **ಲಿಯೋ (ಕ):** ಮ.12.45ಕ್ಕೆ, **ಲಿಯೋ (ತ):** ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, **ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ):** ರಾ.10ಕ್ಕೆ, **ಟಗರುಪಲ್ಯ (ಕ):** ಮ.1ಕ್ಕೆ, ರಾ.7ಕ್ಕೆ, **ತೇಜಸ್ (ಹಿಂ):** ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮಲ್ಕುಂಡಿ ಬಳಿ ಹುಲಿ ದಾಳಿಗೆ ಎತ್ತು ಬಲಿ


ಹುಲಿ ಹಿಡಿಯಲು ಅರಣ್ಯ ಇಲಾಖೆ ವಿಫಲ

ಮಲ್ಕುಂಡಿ, ನ.22– ಬೆಳ್ಳಂ ಬೆಳಗ್ಗೆ ಹುಲಿಯೊಂದು ದಾಳಿ ಮಾಡಿ ಎತ್ತೊಂದನ್ನು ಅರ್ಧಂಬರ್ಧ ತಿಂದು ಬಿಟ್ಟು ಹೋಗಿರುವ ಘಟನೆ ನಂಜನಗೂಡು ತಾಲೂಕಿನ ಒಡೆಯನಪುರ ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ವೆಂಕಟೇಶ್ ಅವರು ತಮ್ಮ ಜಮೀನಿನಲ್ಲಿ ಜಾನುವಾರುಗಳನ್ನು ಮೇಯಿಸುತ್ತಿದ್ದ ವೇಳೆ ಪೊದೆಯಲ್ಲಿದ್ದ ಹುಲಿ ಎತ್ತಿನ ಮೇಲೆ ದಾಳಿ ಮಾಡಿ ತಿಂದು ಹಾಕಿದೆ.

ಅಕ್ಕಪಕ್ಕದಲ್ಲಿದ್ದ ರೈತರು ಕೂಗಾಡಿದ್ದರಿಂದ ಹುಲಿಯು ಎತ್ತನ್ನು ಅರ್ಧಕ್ಕೆ ಬಿಟ್ಟು ಹೋಗಿದೆ. ಇದರಿಂದ ಅಕ್ಕಪಕ್ಕದ ರೈತರು ಭಯಭೀತರಾಗಿದ್ದಾರೆ. ಒಂದು ತಿಂಗಳ ಹಿಂದೆ ಮಹದೇವನಗರದ ವೀರಭದ್ರ ಎಂಬುವರ ಮೇಲೆ ಹುಲಿ ದಾಳಿ ಮಾಡಿತ್ತು ಈಗ ಮತ್ತೆ ದಾಳಿ ಮಾಡಿದೆ. ಹುಲಿ ಆಗಾಗ ದಾಳಿ ನಡೆಸುತ್ತಿದ್ದರೂ ಅರಣ್ಯ ಇಲಾಖೆಯು ಹುಲಿಯನ್ನು ಸೆರೆ ಹಿಡಿಯುವುದರಲ್ಲಿ ಸಂಪೂರ್ಣ ವಿಫಲರಾಗಿದೆ ಎಂದು ಗ್ರಾಮಸ್ಥರು ಆರೋಪಿಸಿದರು.

ಅರಣ್ಯ ಅಧಿಕಾರಿಗಳು ಹುಲಿ ಸೆರೆ ಹಿಡಿ



ಯಲು ಯಾವುದೇ ಬೋನ್ ಇಡದೆ ಬರಿ ಆನೆಗಳನ್ನು ತಂದು ಕೂಬಿಂಗ್ ನಡೆಸುತ್ತಾರೆ. ಹಿಂದೆ ವೀರಭದ್ರಬೋವಿ ಎಂಬ ರೈತನ ಮೇಲೆ ದಾಳಿ ಮಾಡಿ ಅಲ್ಲೇ ಹುಲಿ ಓಡಾಡುತ್ತಿದ್ದರೂ ಅರಣ್ಯ ಇಲಾಖೆ ಹುಲಿ ಸೆರೆ ಹಿಡಿಯಲು ಪ್ರಯತ್ನಿಸಲಿಲ್ಲ. ಈಗಾಗಲೇ ಮಳೆ ಇಲ್ಲದೆ ರೈತರು ಕಂಗಾಲಾಗಿ ತಮ್ಮ ಜಮೀನುಗಳಿಗೆ ಹುರುಳಿ ಹಾಕಿದ್ದಾರೆ. ಆದರೆ ಈ ಹುಲಿ ಕಾಟದಿಂದ ರೈತರು ತಮ್ಮ ಜಮೀನುಗಳಿಗೆ ಹೋಗಿ ಕೆಲಸ ಹಾಗೂ ಜಾನುವಾರುಗಳನ್ನು ಮೇಯಿಸಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ.

ವಿಜಯೇಂದ್ರ ಸಾರಥ್ಯದಲ್ಲಿ ಬಿಜೆಪಿ ಜಯಭೇರಿ

ತಿ.ನರಸೀಪುರ, ನ.22– ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಪುತ್ರ ಬಿ.ವೈ. ವಿಜಯೇಂದ್ರ ಅವರು ನೇಮಕಗೊಂಡಿರುವುದರಿಂದ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ರಾಜ್ಯದ ಎಲ್ಲಾ 28 ಸ್ಥಾನಗಳಲ್ಲಿ ಜಯಭೇರಿ ಬಾರಿಸಲಿದೆ ಎಂದು ಪುರಸಭಾ ಸದಸ್ಯ ಆರ್. ಅರ್ಜುನ್ ರಮೇಶ್ ಭವಿಷ್ಯ ನುಡಿದಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷರಾಗಿ ನೇಮಕಗೊಂಡ ವಿಜಯೇಂದ್ರ ಅವರನ್ನು ತಮ್ಮ ಅಪಾರ ಬೆಂಬಲದೊಂದಿಗೆ ಅಭಿನಂದಿಸಿ, ಮಾತನಾಡಿದ ಅವರು, ವಿಜಯೇಂದ್ರ ಅವರ ನೇಮಕ ಪಕ್ಷದಲ್ಲಿ ನವಚೈತನ್ಯ ಮೂಡಿಸಿದ್ದು, ಯುವ ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿರುವುದರಿಂದ ಪಕ್ಷ ಮುಂಬರುವ ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಚುನಾವಣೆಗಳಲ್ಲೂ ಭರ್ಜರಿ ಗೆಲುವು ಸಾಧಿಸಲಿದೆ ಎಂದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಸಂಕಷ್ಟ ಕಾಲದಲ್ಲಿ ಕಾಲಿಗೆ ಚಕ್ರ ಕಟ್ಟಿಕೊಂಡು ರಾಜ್ಯಾದ್ಯಂತ ಪ್ರವಾಸ ಮಾಡಿ ಪಕ್ಷವನ್ನು ಅಧಿಕಾರಕ್ಕೆ ತಂದಂತೆ ಪುತ್ರ ವಿಜಯೇಂದ್ರ ಕೂಡ ರಾಜ್ಯದಲ್ಲಿ ಪ್ರವಾಸ ಕೈಗೊಂಡು ಬೂತ್ ಮಟ್ಟದಿಂದ ಪಕ್ಷವನ್ನು ಸಂಘಟಿಸಿ ಅಧಿಕಾರಕ್ಕೆ ತರುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ರಮೇಶ್ ನುಡಿದರು. ಬಿಜೆಪಿ ರಾಜ್ಯಾಧ್ಯಕ್ಷರ ಸ್ಥಾನ ಖಾಲಿ ಇರುವ ಬಗ್ಗೆ ಪ್ರತಿಪಕ್ಷಗಳು ವಿನಾಕಾರಣ ಮಾಡುತ್ತಿದ್ದ ಟೀಕೆಗೆ ಪಕ್ಷದ ವರಿಷ್ಠರು ವಿಜಯೇಂದ್ರ ಅವರನ್ನು ನೇಮಕ ಮಾಡುವ ಮೂಲಕ ಸ್ಪಷ್ಟ ಉತ್ತರ ನೀಡಿದೆ ಎಂದ ಅವರು, ನೇಮಕದ ನಂತರ ಕಾಂಗ್ರೆಸ್ ನಾಯಕರು ಲಘುವಾಗಿ ಮಾತನಾಡು



ತ್ತಿರುವುದು ಅವರಿಗಿರುವ ಭಯವನ್ನು ತೋರಿಸುತ್ತಿದೆ ಎಂದರು.

ವಿಜಯೇಂದ್ರ ಅವರಿಗೆ ಲಿಂಗಾಯಿತರು, ಒಕ್ಕಲಿಗರು, ಕುರುಬರು, ಎಸ್ಸಿ, ಎಸ್ಟಿ ಸಮುದಾಯದ ಮತದಾರರು ಸೇರಿದಂತೆ ಎಲ್ಲಾ ಸಮುದಾಯದ ಮುಖಂಡರುಗಳ ಬೆಂಬಲ ನೀಡಿ ಅವರ ಯುವ ನಾಯಕತ್ವವನ್ನು ಬೆಂಬಲಿಸುವ ಲಕ್ಷಣಗಳು ಕಾಣುತ್ತಿದೆ. ಆದ್ದರಿಂದಲೇ ಅವರು ಬೂತ್ ಮಟ್ಟದಿಂದ ಪಕ್ಷವನ್ನು ಸಂಘಟಿಸಲು ಮುಂದಾಗಿರುವುದು. ಇದಕ್ಕೆ ಎಲ್ಲಾ ಮುಖಂಡರು, ಕಾರ್ಯಕರ್ತರು ಕೈಜೋಡಿಸಬೇಕು ಎಂದರಲ್ಲದೆ, ವಿಜಯೇಂದ್ರ ಅವರ ನೇಮಕಕ್ಕೆ ನಮ್ಮ ಸಂಪೂರ್ಣ ಬೆಂಬಲ, ಸಹಕಾರ ಇರುವುದಾಗಿ ತಿಳಿಸಿದರು.

ಪತ್ರಕರ್ತರಿಗೆ ಕರ್ತವ್ಯದೊಂದಿಗೆ ಆರೋಗ್ಯವೂ ಮುಖ್ಯ

ಹೆಚ್.ಡಿ.ಕೋಟೆ, ನ.22– ಸಮಾಜವನ್ನು ತಿದ್ದಿ ಸರಿಯಾದ ದಾರಿಯಲ್ಲಿ ನಡೆಯುವಂತೆ ಮಾಡುವಂತಹ ಪತ್ರಕರ್ತರು ತಮ್ಮ ಆರೋಗ್ಯದತ್ತಲೂ ಸಹ ಗಮನಹರಿಸಬೇಕು ಎಂದು ತಾಲೂಕು ದಂಡಾಧಿಕಾರಿ ಶ್ರೀನಿವಾಸ್ ತಿಳಿಸಿದರು.

ಪಟ್ಟಣದ ತಾಲೂಕು ಆರೋಗ್ಯಾಧಿಕಾರಿ ಕಚೇರಿಯಲ್ಲಿ ಹೆಚ್.ಡಿ. ಕೋಟೆ ರೋಟರಿ ಸಂಸ್ಥೆ, ತಾಲೂಕು ಆರೋಗ್ಯ ಇಲಾಖೆ, ಮೈಸೂರಿನ ಶುಶ್ರೂತಾ ಕಣ್ಣಿನ ಆಸ್ಪತ್ರೆಯ ಸಹಯೋಗದಲ್ಲಿ ಪತ್ರಕರ್ತರು ಮತ್ತು ಅವರ ಕುಟುಂಬದವರಿಗೆ ಆಯೋಜಿಸಿದ್ದ ಕಣ್ಣಿನ ತಪಾಸಣೆ ಹಾಗೂ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತಾಲೂಕು ವೈದ್ಯಾಧಿಕಾರಿ ಟಿ.ರವಿಕುಮಾರ್ ಮಾತನಾಡಿದರು. ಸಾರ್ವಜನಿಕ ಆಸ್ಪತ್ರೆಯ ಕಣ್ಣಿನ ತಜ್ಞರಾದ ರಾಜಶೇಖರ್



ಮಾತನಾಡಿ, ಮಾನವನ ದೇಹದಲ್ಲಿ ಕಣ್ಣು ಸೂಕ್ಷ್ಮ ಭಾಗವಾಗಿದೆ, ಸಣ್ಣ ತೊಂದರೆಯಾದರೂ ವೈದ್ಯರನ್ನು ಸಂಪರ್ಕಿಸಬೇಕು, ಆದರೆ ಸಾರ್ವಜನಿಕರು ಕಣ್ಣಿಗೆ ಸಮಸ್ಯೆಯಾದಾಗ ತಾತ್ಸಾರ ಮನೋಭಾವದಿಂದ ಕಣ್ಣಿಗೆ ಹಾನಿಯಾದ ಎಷ್ಟೋ ದಿನದ ಬಳಿಕ ಬರುತ್ತಾರೆ. ಆದರೆ ಅದಾಗಬಾರದು, ಕಣ್ಣಿಗೆ ಹಾನಿ ಸಂಭವಿಸಿದಾಗ ಕೂಡಲೇ ತಜ್ಞ ವೈದ್ಯರನ್ನು ಭೇಟಿಯಾಗಬೇಕು ಎಂದರು.

ತಪಾಸಣೆಯಲ್ಲಿ ಪತ್ರಕರ್ತರು ಮತ್ತು ಅವರ ಕುಟುಂಬಸ್ಥರು ಭಾಗವಹಿಸಿ ತಪಾಸಣೆಗೊಳಪಟ್ಟರು. ಕಣ್ಣಿನ ತಪಾಸಣೆ ನಡೆಸಿದ 28 ಮಂದಿಗೆ ಕನ್ನಡಕವನ್ನು ಉಚಿತವಾಗಿ ನೀಡಲಾಗುವುದು ಎಂದು ರೋಟರಿ ಕ್ಲಬ್ ಅಧ್ಯಕ್ಷ ಗಂಗಾಧರ್ ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಸೂರಿನ ಶುಶ್ರೂತಾ ಕಣ್ಣಿನ ಆಸ್ಪತ್ರೆಯ ಕುಮಾರ್, ಲೋಕೇಶ್, ಪರಶುರಾಮ್, ಪತ್ರಕರ್ತರ ಸಂಘದ ಅಧ್ಯಕ್ಷ ಬೀಚನಹಳ್ಳಿ ಮಂಜು, ಪ್ರಧಾನ ಕಾರ್ಯದರ್ಶಿ ನಾಗಾರಾಮ, ಉಪಾಧ್ಯಕ್ಷ ಯಡತೊರೆ ಮಹೇಶ್, ಸಹ ಕಾರ್ಯದರ್ಶಿ ದೊಡ್ಡಸಿದ್ದು, ಖಜಾಂಚಿ ಮಂಜು ಕೋಟೆ, ನಿರ್ದೇಶಕರುಗಳಾದ ಪುಟ್ಟರಾಜು, ರಂಗರಾಜು, ರೇಣುಕಾ, ಹಂಪಾಪುರ ನಾಗೇಶ್, ಜಶೀಲಾ, ರವಿ ಆರಾಧ್ಯ, ಜಿ.ರವಿಕುಮಾರ್, ಸದಸ್ಯರುಗಳಾದ ಸತೀಶ್ ಆರಾಧ್ಯ, ಬಸವರಾಜ್, ಪ್ರಮೋದ್, ಪುರುಷೋತ್ತಮ್, ಶ್ರೀನಿಧಿ, ಆನಂದ, ದಾಸೇಗೌಡ, ರೋಟರಿ ಕ್ಲಬ್ ಪ್ರಧಾನ ಕಾರ್ಯದರ್ಶಿ ಸ್ವಾಮಿ, ಆರ್ಮುಗಂ, ಆಸ್ಪತ್ರೆ ಸಿಬ್ಬಂದಿಗಳಾದ ಸರಳ, ರಾಹುಲ್, ಅನ್ನಪೂರ್ಣ, ಪವಿತ್ರ, ರವಿರಾಜ್, ಗಿರೀಶ್, ಆಶಾ ಕಾರ್ಯಕರ್ತರುಗಳು ಹಾಗೂ ಪತ್ರಕರ್ತ ಕುಟುಂಬದವರು ಭಾಗವಹಿಸಿ ಶಿಬಿರವನ್ನು ಸದುಪಯೋಗಪಡಿಸಿಕೊಂಡರು.

ಲಂಚ ಸ್ವೀಕರಿಸುತ್ತಿದ್ದ ಮಹಿಳಾ ಪಿಎಸ್‌ಐ ಲೋಕಾಯುಕ್ತ ಬಲೆಗೆ

ಸಾಲದ ಹಣ ವಸೂಲಿ ಮಾಡಿಕೊಡಲು ಹಣಕ್ಕೆ ಬೇಡಿಕೆ

ಹೆಚ್.ಡಿ.ಕೋಟೆ, ನ.22– ಸಾಲ



ವಸೂಲಿ ಮಾಡಿಕೊಡಲು ಲಂಚ ಸ್ವೀಕರಿಸುತ್ತಿದ್ದ ಮಹಿಳಾ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ರೊಬ್ಬರು ಲೋಕಾಯುಕ್ತ ಬಲೆಗೆ ಸಿಕ್ಕಿಬಿದ್ದಿದ್ದಾರೆ.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪೊಲೀಸ್ ಮಹಿಳಾ ಪಿಎಸ್‌ಐ ಶಕೀಲಾವತಿ ಎಂಬುವರೇ ಲೋಕಾಯುಕ್ತ ಬಲೆಗೆ ಬಿದ್ದವರಾಗಿದ್ದಾರೆ.

ತಾಲೂಕಿನ ಶಂಕಹಳ್ಳಿ ಗ್ರಾಮದ ಕೆಂಡನಾಯಕ ಅವರು ಹ್ಯಾಂಡ್‌ಪೋಸ್ಟ್ ಗ್ರಾಮದ ನಾಗೇಂದ್ರ ಅವರಿಗೆ ಸಾಲವನ್ನು ನೀಡಿದ್ದು, ವಾಪಸ್ ಹಿಂತಿರುಗಿಸಲಿಲ್ಲ. ಈ ಬಗ್ಗೆ ಠಾಣೆಗೆ ದೂರು ನೀಡಲಾಗಿ ಈ ಹಣ ವಸೂಲಿ ಮಾಡಿಕೊಡಲು ಶಕೀಲಾವತಿ ಅವರು 3 ಸಾವಿರ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಇದರಿಂದ ಬೇಸತ್ತ ಕೆಂಡನಾಯಕ ಅವರು ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಲೋಕಾಯುಕ್ತ ಪೊಲೀಸರ ಸೂಚನೆ ಮೇರೆಗೆ ಇಂದು ಸಂಜೆ ಲಂಚದ ಹಣವನ್ನು ಶಕೀಲಾವತಿ ಅವರಿಗೆ ನೀಡಿದರು. ಈ ವೇಳೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು ಹಣದ ಸಮೇತ ಅವರನ್ನು ವಶಕ್ಕೆ ಪಡೆದರು.

ಲೋಕಾಯುಕ್ತ ಡಿವೈಎಸ್ಪಿ ವಿ.ಕೃಷ್ಣಯ್ಯ ನೇತೃತ್ವದಲ್ಲಿ ನಡೆದ ದಾಳಿಯಲ್ಲಿ ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್‌ಗಳಾದ ಜಯರತ್ನ, ಲೋಕೇಶ್, ರವಿಕುಮಾರ್ ಹಾಗೂ ಮೈಸೂರು ಲೋಕಾಯುಕ್ತ ಸಿಬ್ಬಂದಿಗಳು ಹಾಗೂ ಮಡಿಕೇರಿ ಲೋಕಾಯುಕ್ತ ಸಿಬ್ಬಂದಿಗಳು ಭಾಗವಹಿಸಿದ್ದರು.

ವಿರೋಧ ಪಕ್ಷ ನಾಯಕ ಆರ್.ಅಶೋಕ್‌ಗೆ ಅಭಿನಂದನೆ

ಪಿರಿಯಾಪಟ್ಟಣ: ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾದ ಆರ್.ಅಶೋಕ ಅವರಿಗೆ ಮೈಸೂರು ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಹಾಗೂ ಪುರಸಭಾ ಮಾಜಿ ಸದಸ್ಯೆ ನಳಿನಿಗೌಡ ಅಭಿನಂದನೆ ಸಲ್ಲಿಸಿದ್ದಾರೆ.


ಸುಮಾರು ನಾಲ್ಕು ದಶಕಗಳ ಕಾಲ ಸಾಮಾನ್ಯ ಕಾರ್ಯಕರ್ತರಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡ ಅಶೋಕ್ ಅವರನ್ನು ಕೇಂದ್ರ ಹಾಗೂ ರಾಜ್ಯ ಬಿಜೆಪಿ ಮುಖಂಡರು ಆಯ್ಕೆ ಮಾಡಿರುವುದು ಸ್ವಾಗತಾರ್ಹ.

ಆರ್.ಅಶೋಕ ಅವರಿಗೆ ಉಪ ಮುಖ್ಯಮಂತ್ರಿ ಹಾಗೂ 7 ಬಾರಿ ಶಾಸಕರಾಗಿ ಅನುಭವವಿದ್ದು, ಅವರು ವಿಪಕ್ಷ ನಾಯಕರಾಗಿ ಮುಂದಿನ ದಿನಗಳಲ್ಲಿ ಮತ್ತಷ್ಟು ಪಕ್ಷ ಚಟುವಟಿಕೆಯಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಬೆಟ್ಟದಪುರದಲ್ಲಿ ರಥ ನಿರ್ಮಾಣಕ್ಕೆ ಚಾಲನೆ

ಬೆಟ್ಟದಪುರ: ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಇತಿಹಾಸ ಪ್ರಸಿದ್ಧ ಶ್ರೀ ಸಿಡಿಲು ಮಲ್ಲಿಕಾರ್ಜುನಸ್ವಾಮಿಯ ಗಣಪತಿ ಹಾಗೂ ಬೆಳ್ಳಿ ಬಸಪ್ಪನ ರಥಗಳ ನಿರ್ಮಾಣಕ್ಕೆ ಚಾಲನೆ ನೀಡಲಾಯಿತು.

ಕಳೆದ ಬಾರಿ ಮಲ್ಲಿಕಾರ್ಜುನ ಸ್ವಾಮಿಯ ದೊಡ್ಡ ರಥವನ್ನು 25 ಲಕ್ಷರೂ. ವೆಚ್ಚದಲ್ಲಿ ನಿರ್ಮಿಸಲಾಗಿತ್ತು. ಈ ಬಾರಿ ಗಣಪತಿ ಹಾಗೂ ಬೆಳ್ಳಿ ಬಸಪ್ಪನ



ಎರಡು ರಥಗಳ ನಿರ್ಮಾಣಕ್ಕೆ ಅರಕಲಗೂಡು ತಾಲೂಕಿನ ಬೆಮ್ಮತ್ತಿ ಗ್ರಾಮದ ಉದ್ಯಮಿ ಸುರೇಶ್, ಬಸವಣ್ಣ ಹಾಗೂ ದಾನಿಗಳು ಮರ ನೀಡಿದ್ದಾರೆ. ಮುಜರಾಯಿ ಇಲಾಖೆ ನಿರ್ಮಾಣದ ವೆಚ್ಚವನ್ನು ಭರಿಸಲಿದೆ. ಬೆಟ್ಟದಪುರ ಮಠದ ಶ್ರೀ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ, ವೇದಮೂರ್ತಿ ಶ್ರೀಕಂಠ ಆರಾಧ್ಯ, ಅರ್ಚಕ ಶಶಿಧರ್ ನೇತೃತ್ವದಲ್ಲಿ ಚಾಲನೆ ನೀಡಲಾಯಿತು. ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ.ಸಿ.ಗಿರೀಶ್, ಮುಖಂಡ ನಾಗರಾಜ್ ಶೆಟ್ಟಿ, ಉಪ್ಪಾರ ಸಮಾಜದ ರಾಮೇಗೌಡ, ಬೆಟ್ಟದಪುರ ವೀರಶೈವ–ಲಿಂಗಾಯತ ಸಮಾಜದ ಅಧ್ಯಕ್ಷ ಶಿವದೇವಪ್ಪ, ಖಜಾಂಚಿ ಬಿ.ಸಿ.ರಾಜೇಂದ್ರ, ತಾಲೂಕು ಪಂಚಾಯಿತಿ ಮಾಜಿ ಸದಸ್ಯೆ ಅನಿತಾ ತೋಟಪ್ಪಶೆಟ್ಟಿ, ಹಾಲು ಉತ್ಪಾದಕರ ಸಂಘದ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ರೈತ ಮುಖಂಡ ಬಿ.ಜೆ.ದೇವರಾಜು, ಉಪತಹಶೀಲ್ದಾರ್ ಶಶಿಧರ್, ಗ್ರಾಮಲೆಕ್ಕಿಗ ಗುರುನಾಯಕ್, ರಥ ಶಿಲ್ಪಿಗಳು ಹಾಜರಿದ್ದರು.

ನ.30, ಅದ್ದೂರಿ ಕನಕ ಜಯಂತ್ಯುತ್ಸವ

ಹುಣಸೂರು: ನ.30ರಂದು ನಡೆಯುವ ಕನಕ ಜಯಂತ್ಯುತ್ಸವವನ್ನು ಅದ್ದೂರಿಯಾಗಿ ಆಚರಿಸಲು ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಲಾಯಿತು.

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಅಧ್ಯಕ್ಷರು ಹಾಗೂ ತಹಸೀಲ್ದಾರ್ ಮಂಜುನಾಥ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತಾಲೂಕು ಕುರುಬರ ಅಭಿವೃದ್ಧಿ ಸಮಿತಿ ಅಧ್ಯಕ್ಷ ಡಿ.ಕೆ.ಕುನ್ನೇಗೌಡ ಮಾತನಾಡಿ, ನ.30ರಂದು ತಾಲೂಕು ಆಡಳಿತ ವತಿಯಿಂದ ಆಚರಿಸಿ. ನಾವು ತಾಲೂಕಿನ ಎಲ್ಲಾ ಸಮಾಜ ಹಾಗೂ ಸಂಘ ಸಂಸ್ಥೆಗಳಗೂಡಿ ಕಾಗಿನೆಲೆ ಕನಕ ಗುರುಪೀಠದ ಸ್ವಾಮೀಜಿಗಳು ಹಾಗೂ ಮುಖ್ಯಮಂತ್ರಿಗಳನ್ನು ಕರೆ ತಂದು ಮುಂದಿನ ದಿನಗಳಲ್ಲಿ ಅದ್ದೂರಿಯಾಗಿ ಕನಕ ಜಯಂತಿ ಆಚರಿಸುತ್ತೇವೆ ಎಂದರು.

ತಹಸೀಲ್ದಾರ್ ಮಂಜುನಾಥ್ ಮಾತನಾಡಿ, ನಾವು ಸರ್ಕಾರದ ನಿಯಮ ಹಾಗೂ ಆದೇಶದಂತೆ ನ.30ರಂದು ಸರ್ಕಾರದ ಆದೇಶದಂತೆ ಅಂದೇ ಸಾಂಪ್ರದಾಯಿಕವಾಗಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಶಾಸಕ ಜಿ.ಡಿ.ಹರೀಶ್‌ಗೌಡರ ಉಪಸ್ಥಿತಿಯಲ್ಲಿ ವಿಶೇಷ ಸಂಪನ್ಮೂಲ ವ್ಯಕ್ತಿಯೊಬ್ಬರಿಂದ ಕನಕದಾಸರ ಜೀವನ ಚರಿತ್ರೆ ಬಗ್ಗೆ ಮಾಹಿತಿ ನೀಡಲಾಗುವುದೆಂದು ತಿಳಿಸಿ ನೀವೆಲ್ಲರು ಅಂದು ನಡೆಯುವ ಕಾರ್ಯಕ್ರಮದಲ್ಲಿ ತಾಲೂಕಿನ ಎಲ್ಲ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿದರು.

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಸದಸ್ಯ ಎಸ್.ಜಯರಾಮ್, ಕುರುಬ ಸಮಾಜದ ಮುಖಂಡರಾದ ಕಲ್ಕುಣಿಕೆ ಜಯರಾಮ್, ಡೇರಿ ಈಶ್ವರ್, ಉದ್ಯಮಿ ಉಯಿಗೊಂಡನಹಳ್ಳಿ ಅಶೋಕ್, ಕಾಗಾಲ್ ಮಲ್ಲೇಶ್ ಮಾತನಾಡಿದರು.

ಸರ್ಕಾರದಿಂದ ಎನ್.ರಾಚಯ್ಯನವರ ಜಯಂತಿ ಆಚರಿಸಲು ಮನವಿ

ನರಸೀಪುರದ ಜೋಡಿ ರಸ್ತೆಗೆ ರಾಚಯ್ಯನವರ ಹೆಸರಿಡಿ



ತಿ.ನರಸೀಪುರ, ನ.22– ಸ್ವತಂತ್ರ ಭಾರತದ ಮೊದಲ ದಲಿತ ಸಂಸದರು ಹಾಗೂ ಮಾಜಿ ಸಚಿವರೂ ಆಗಿದ್ದ ದಲಿತ ಧ್ವನಿ ದಿವಂಗತ ಎನ್.ರಾಚಯ್ಯನವರ ಜಯಂತಿಯನ್ನು ಸರ್ಕಾರದ ವತಿಯಿಂದ ಆಚರಿಸಬೇಕೆಂದು ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿಯ ವೈದ್ಯಕೀಯ ವಿಭಾಗದ ಅಧ್ಯಕ್ಷ ಡಾ.ಬಿ.ಪ್ರದೀಪ್ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ತಾಲೂಕಿನ ಹುಣಸೂರು ಗ್ರಾಮದಲ್ಲಿ ಆಯೋಜಿಸಲಾಗಿದ್ದ ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿದ್ದ ಮಾಜಿ ಶಾಸಕ ಹಾಗೂ ವರುಣ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷ ಯತೀಂದ್ರ ಸಿದ್ದರಾಮಯ್ಯರವರ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಪತ್ರ ಸಲ್ಲಿಸಿದ ಡಾ.ಪ್ರದೀಪ್ ಸರ್ಕಾರದ ವತಿಯಿಂದಲೇ ದಿವಂಗತ ಎನ್. ರಾಚಯ್ಯನವರ ಜಯಂತಿ ಆಚರಣೆ ಮಾಡಬೇಕು ಹಾಗೂ ತಿರುಮಕೂಡಲು ರಸ್ತೆಯಿಂದ ಗುಂಜಾ ನರಸಿಂಹಸ್ವಾಮಿ ದೇವಸ್ಥಾನದವರೆಗೆ ಇರುವ ರಸ್ತೆಗೆ ಎನ್.ರಾಚಯ್ಯ ರಸ್ತೆ ಎಂದು ನಾಮಕರಣ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯರವರನ್ನು ಒತ್ತಾಯಿಸುವಂತೆ ಮನವಿ ಮಾಡಿದರು.

ಸ್ವತಂತ್ರ ಭಾರತದ ಮೊದಲ ದಲಿತ ಸಚಿವರಾಗಿದ್ದ ಮಾಜಿ ಸಚಿವರಾದ ದಿವಂಗತ ಎನ್.ರಾಚಯ್ಯರವರು ಶೋಷಿತರಿಗೆ ಹಾಗೂ ಬಡ ಸಮುದಾಯಕ್ಕೆ ಅಪಾರವಾದ ಕೊಡುಗೆ ನೀಡಿದ್ದಾರೆ. ಸಮಾಜ ಕಲ್ಯಾಣ ಸಚಿವರಾಗಿ ರಾಜ್ಯಾದ್ಯಂತ ವಸತಿ ಶಾಲೆ ಹಾಗೂ ಅಂಗನವಾಡಿ ಶಾಲೆಗಳನ್ನು ತೆರೆದು ಬಡ ವಿದ್ಯಾರ್ಥಿಗಳಿಗೆ ಸಹಕಾರಿಯಾಗಿದ್ದರು. ಪಶು ವೈದ್ಯಕೀಯ ಆಸ್ಪತ್ರೆ ಹಾಗೂ ಕಾಲೇಜು 20 ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತರುವಲ್ಲಿ ರಾಚಯ್ಯನವರ ಪಾತ್ರ ಅಪಾರವಾಗಿತ್ತು. ಇವರ ದೂರದೃಷ್ಟಿ ನಾಯಕತ್ವವು ಇಂದಿನ ಯುವಪೀಳಿಗೆಗೆ ಮಾದರಿಯಾಗಿದೆ ಎಂದರು.

ದಲಿತರ ಧ್ವನಿಯಾಗಿದ್ದ ಎನ್.ರಾಚಯ್ಯನವರು ತಿ.ನರಸೀಪುರ ತಾಲೂಕಿನ ಗೋಪಾಲಪುರ ಗ್ರಾಮದವರಾಗಿದ್ದು ಇವರ ಕೊಡುಗೆಯನ್ನು ಸ್ಮರಿಸಿ ಮೇ 8 ರಂದು ಸರ್ಕಾರದ ವತಿಯಿಂದಲೇ ಅವರ ಜನ್ಮ ದಿನಾಚರಣೆಯನ್ನು ಆಚರಿಸಬೇಕು ಹಾಗೂ ತಿರುಮಕೂಡಲು ಸರ್ಕಲ್‌ನಿಂದ ಗುಂಜಾ ನರಸಿಂಹಸ್ವಾಮಿ ದೇವಸ್ಥಾನದವರೆಗೆ ಇರುವ ರಸ್ತೆಗೆ ಎನ್.ರಾಚಯ್ಯ ಜೋಡಿರಸ್ತೆ ಎಂದು ನಾಮಕರಣ ಮಾಡಲು ಕ್ರಮ ಕೈಗೊಳ್ಳುವಂತೆ ಪ್ರದೀಪ್ ಮನವಿ ಮಾಡಿದರು.

ಈ ವೇಳೆ ಗ್ರಾ.ಪಂ. ಮಾಜಿ ಉಪಾಧ್ಯಕ್ಷ ಹುಣಸೂರು ನಾಗರಾಜು, ಗ್ರಾ.ಪಂ ಸದಸ್ಯ ಲಿಂಗರಾಜು, ಗಾಂಧಿ ಕೃಷ್ಣ, ಬಿಲಿಗೆರೆ ಹುಂಡಿ ಬಸವರಾಜು ಮತ್ತಿತರರಿದ್ದರು.

ಅಕಾಲಿಕ ಮರಣ: ಪರಿಹಾರ ವಿತರಣೆ



ಸರಗೂರು, ನ.22– ಅಕಾಲಿಕ ಮರಣದಿಂದ ಆಗತ್ತೂರು ಗ್ರಾಮದ ಸೋಮೇಶ್ ಕುಟುಂಬಕ್ಕೆ ಸೋಮೇಶ್ವರ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಹೆಚ್. ರಮೇಶ್ ಸಹಾಯಧನ ನೀಡಿದರು.

ನಂತರ ಮಾತನಾಡಿದ ಅವರು, ಆಗತ್ತೂರು ಗ್ರಾಮದ ಸೋಮೇಶ್ ಬಡ ಕುಟುಂಬದವರಾಗಿದ್ದು, ಪೇಂಟ್ ಕೆಲಸ ಮಾಡಿಕೊಂಡು ತಮ್ಮ ಜೀವನ ಸಾಗಿಸುತ್ತಿದ್ದರು. ಇವರ ಅಕಾಲಿಕ ಮರಣದಿಂದ ಕುಟುಂಬದ ನಿರ್ವಹಣೆ ತುಂಬ ಕಷ್ಟಕರವಾಗಿದ್ದು ಇದನ್ನು ಮನಗೊಂಡು ಇವರ ಕುಟುಂಬಕ್ಕೆ ತೆರಳಿ ಸಂಘದ ವತಿಯಿಂದ 10 ಸಾವಿರ ಸಹಾಯಧನ ನೀಡಲಾಗಿದೆ ಎಂದರು. ಸಂಘದ ಖಜಾಂಚಿ ಆರ್.ಮಣಿ, ಸದಸ್ಯರಾದ ಗೋವಿಂದನಾಯಕ, ರಾಜೇಶ್, ಕಿಚ್ಚ ರಮೇಶ್, ತಿಮ್ಮ, ಲೋಕೇಶ್ ಭಾಗಿಯಾಗಿದ್ದರು.

ಪೊಲೀಸರು ಬಳಸುವ ಶಸ್ತ್ರಾಸ್ತ್ರ-ಸಲಕರಣೆಗಳ ನೋಡುವ ಆಸೆ ನಿಮಗಿದೆಯೇ...! ತ್ವರೆ ಮಾಡಿ..!!





ಮೈಸೂರು, ನ.22(ಎಂಕೆ)– ಒರಿಜಿನಲ್ ಮದ್ದು-ಗುಂಡು, ಪಿಸ್ತೂಲ್, ತರಾವರಿ ಮಿಷನ್ ಗನ್‌ಗಳನ್ನು ನೋಡುವ ಹಾಗೂ ಅವುಗಳ ಬಗ್ಗೆ ತಿಳಿದುಕೊಳ್ಳುವ ಆಸಕ್ತಿ ನಿಮ್ಮಲ್ಲಿದ್ದರೆ! ತ್ವರೆ ಮಾಡಿ...!!

ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಆರಕ್ಷಕರ ರಕ್ಷಣೆ ಜೊತೆಗೆ ಬಂದೋಬಸ್ತಿಗೆ ಬಳಸುವ ಶಸ್ತ್ರಾಸ್ತ್ರ-ಸಲಕರಣೆಗಳ ಅನಾವರಣಗೊಳಿಸಿರುವ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ ಮಳಿಗೆಯನ್ನು ಬುಧವಾರ ಉದ್ಘಾಟಿಸಲಾಯಿತು. ಮಳಿಗೆಯಲ್ಲಿ ಪೊಲೀಸ್ ಇಲಾಖೆಯ ಎಲ್ಲಾ ಬಗೆಯ ಪೊಲೀಸರು (ಕಾನೂನು ಮತ್ತು ಸುವ್ಯವಸ್ಥೆ, ಸಂಚಾರ, ಮೌಂಟೆಡ್ ಇತರೆ) ಬಳಸುವ ಒರಿಜಿನಲ್ ಶಸ್ತ್ರಾಸ್ತ್ರ ಸಲಕರಣೆಗಳನ್ನು ಪ್ರದರ್ಶನಕ್ಕಿಡಲಾಗಿದೆ.

ಮಳಿಗೆಯಲ್ಲಿ '9 ಎಂಎಂ ಗ್ಲೋಕ್ ಪಿಸ್ತೂಲ್(19 ಮೊಡೆಲ್)', 'ಆಟೋ ಪಿಸ್ತೂಲ್', 'ಕಾರ್ಬಿನ್ ಮೆಷಿನ್ ಗನ್', 'ಜಾಯಿಂಟ್ ವೆಂಚುರಿ ಪ್ರೊಟೆಕ್ಟಿವ್ ಕಾರ್ಬಿನ್ ಗನ್', 'ಗ್ಲೋಕ್ ಗನ್', 'ಎಕೆ-47', 'ಟ್ರಿಚಿ ಅಸಾಲ್ಟ್ ರೈಫಲ್', 'ಕ್ಯಾಲಿಬರ್ ರೈಫಲ್', 'ಇನ್ಸಾಸ್ ರೈಫಲ್', 'ಬೋರ್ ಪಂಪ್ ಆಕ್ಷನ್ ಗನ್', 'ತೆರೆ ಗ್ಯಾಸ್ ಗನ್', 'ಬಹು ಉದ್ದೇಶಿತ ಚಾಕುಗಳು', 'ಲೀಡಿಂಗ್ ಚೈನ್', 'ಹ್ಯಾಂಡ್ ಕಫ್', ವಿವಿಧ ಗಾತ್ರದ ಬುಲೆಟ್‌ಗಳು ಸೇರಿದಂತೆ ಹಲವು ರಕ್ಷಣಾ ಸಲಕರಣೆಗಳನ್ನು ನೋಡಬಹುದಾಗಿದೆ.

'ವಾಕಿಟಾಕ್', 'ಬಾಂಬ್ ಪರಿಶೀಲನಾ ಯಂತ್ರಗಳು', ಸಂಚಾರ ಪೊಲೀಸ್ ಸಂಬಂಧಿಸಿದಂತೆ 'ನೋ ಪಾರ್ಕಿಂಗ್ ಬೋರ್ಡ್', 'ಡಿವೈಡರ್', 'ರೌಡ್ ಕಾನ್ವೆಕ್ಸ್ ಮಿರರ್', 'ವ್ಹೀಲ್ ಲಾಕರ್' ಮತ್ತಿತರ ವಸ್ತುಗಳ ಜೊತೆಗೆ ಪೊಲೀಸ್ ಬ್ಯಾಂಡ್‌ನಲ್ಲಿ ಬಳಸುವ ಸಂಗೀತ ಸಲಕರಣೆಗಳು ಸೆಳೆಯುತ್ತಿವೆ.

ಅರಿವು: ಸಾರ್ವಜನಿಕರು ತುರ್ತು ಸಂದರ್ಭದಲ್ಲಿ '112' ಟೋಲ್ ಫ್ರೀ ನಂಬರ್‌ಗೆ ಕರೆ ಮಾಡುವುದು, ಸೈಬರ್ ವಂಚನೆಗೆ ಒಳಗಾದರೆ ದೂ.ಸಂ.1930 ಹಾಗೂ ಮಕ್ಕಳ ಸಹಾಯವಾಣಿ 1098 ನಂಬರ್‌ಗೆ ಕರೆ ಮಾಡುವುದು ಸೇರಿದಂತೆ ಸಂಚಾರ ನಿಯಮಗಳ ಕುರಿತು ಅರಿವು ಮೂಡಿಸಲಾಗುವುದು. ಹಾಗೆಯೇ ಸೈಬರ್ ಕ್ರೈಂಗೆ ಸಂಬಂಧಿ ಅಪರಾಧಗಳು ಕುರಿತು ವಿಡಿಯೋ ತುಣುಕುಗಳನ್ನು ಪ್ರಸಾರ ಮಾಡುವ ಮೂಲಕ ಸೈಬರ್ ಕ್ರೈಂ ಬಗ್ಗೆ ಜಾಗೃತಿ ಮೂಡಿಸ ಲಾಗುವುದು.

ಬ್ಯಾಂಡ್ ಆಕರ್ಷಣೆ: ದಸರಾ ವಸ್ತುಪ್ರದರ್ಶನದಲ್ಲಿನ ರಾಜ್ಯ ಪೊಲೀಸ್ ಇಲಾಖೆ ಮಳಿಗೆಯತ್ತ ಪ್ರವಾಸಿಗರು ಹಾಗೂ ಸಾರ್ವಜನಿಕರನ್ನು ಸೆಳೆಯಲು ವಿಶೇಷ ಸಂಗೀತ ಆಕರ್ಷಣೆ ಏರ್ಪಡಿಸಲಾಗಿದೆ. ಪ್ರತಿನಿತ್ಯ ಸಂಜೆ 6 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಪೊಲೀಸ್ ಬ್ಯಾಂಡ್ ಸಂಗೀತ ಸವಿಯುವುದರ ಜೊತೆಗೆ ಮೌಂಟೆಡ್ ಕುದುರೆಗಳನ್ನು ನೋಡುವ ಸದವಕಾಶ ಮಾಡಿಕೊಡಲಾಗಿದೆ. ರಕ್ಷಣಾತ್ಮಕ ಸಲಕರಣೆಗಳ ಮಾಹಿತಿ ಪಡೆಯುವುದರ ಜೊತೆಗೆ ಸಂಗೀತ ಸವಿಯಬಹುದಾಗಿದೆ.



ಪೊಲೀಸ್ ಇಲಾಖೆಯಲ್ಲಿ ಬಳಸುವ ಭದ್ರತಾ ಸಲಕರಣೆಗಳ ಮಾಹಿತಿ ಮಳಿಗೆ...



ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಬಳಸುವ ಪ್ರತಿಯೊಂದು ಸಲಕರಣೆಗಳ ಕುರಿತು ಮಾಹಿತಿ ತಿಳಿಸುವ ಹಾಗೂ ಅಪರಾಧ ನಿಯಂತ್ರಣ ಸಂಬಂಧ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಮಳಿಗೆ ಇದಾಗಿದೆ ಎಂದು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೊತ್ ತಿಳಿಸಿದರು. ಮಳಿಗೆ ಉದ್ಘಾಟಿಸಿದ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ದಸರಾ ವಸ್ತುಪ್ರದರ್ಶನದಲ್ಲಿ ಈ ಬಾರಿ ವಿಶೇಷವಾಗಿ ಪೊಲೀಸ್ ಇಲಾಖೆಗೆ ಮಳಿಗೆ ನಿರ್ಮಿಸಲಾಗಿದೆ. ಮಳಿಗೆಯಲ್ಲಿ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಬಗೆಯ ರಕ್ಷಣಾ ಸಲಕರಣೆಗಳನ್ನು ಅನಾವರಣಗೊಳಿಸಲಾಗಿದೆ ಎಂದರು.

ಪೊಲೀಸ್ ಇಲಾಖೆಯಲ್ಲಿ ಬಳಸುವ ಸಲಕರಣೆಗಳ ಬಗ್ಗೆ ಸಾರ್ವಜನಿಕರಲ್ಲಿ ಹಾಗೂ ಶಾಲಾ-ಕಾಲೇಜು ಮಕ್ಕಳಲ್ಲಿ ಜಾಗೃತಿ ಮೂಡಿಸುವುದು ಮಳಿಗೆ ಮುಖ್ಯ ಉದ್ದೇಶವಾಗಿದೆ. ಇದಕ್ಕಾಗಿ ಪ್ರತಿನಿತ್ಯ ಶಾಲಾ-ಕಾಲೇಜು ವಿದ್ಯಾರ್ಥಿಗಳು ಮಳಿಗೆಗೆ ಭೇಟಿ ನೀಡಲು ಅವಕಾಶ ಮಾಡಿಕೊಡಲಾಗುತ್ತಿದೆ. ಸಲಕರಣೆಗಳ ಜೊತೆಗೆ ಸಂಚಾರ ನಿಯಮಗಳು ಹಾಗೂ ಸೈಬರ್ ಕ್ರೈಂ ಬಗ್ಗೆಯೂ ತಿಳಿಸಲಾಗುವುದು ಎಂದು ಹೇಳಿದರು. ಪ್ರತಿ ದಿನ ಸಂಜೆ ಪೊಲೀಸ್ ಬ್ಯಾಂಡ್‌ನಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ. ಮಳಿಗೆ ಎದುರು ಮೌಂಟೆಡ್ ಪೊಲೀಸರು ಮಳಿಗೆ ವೀಕ್ಷಣೆಗೆ ಬರುವವರನ್ನು ಸ್ವಾಗತಿಸಲಿದ್ದಾರೆ. ಒರಿಜಿನಲ್ ಸಲಕರಣೆಗಳನ್ನೇ ಪ್ರದರ್ಶನಕ್ಕಿಡಲಾಗಿದೆ. ಆದ್ದರಿಂದ ಅವುಗಳನ್ನು ಜೋಪಾನ ಮಾಡುವುದು ಕೂಡ ಮುಖ್ಯವಾಗಿದ್ದು, ಪ್ರದರ್ಶನ ಮುಗಿದ ಬಳಿಕ ತೆಗೆದುಕೊಂಡು ಹೋಗಿ, ಮತ್ತೆ ತಂದು ಜೋಡಿಸಲಾಗುವುದು ಎಂದು ತಿಳಿಸಿದರು. ಡಿಸಿಪಿಗಳಾದ ಮುತ್ತುರಾಜ್, ಜಾಹ್ನವಿ, ಸಂಚಾರ ಪೊಲೀಸ್ ವಿಭಾಗದ ಎಸಿಪಿ ಹೆಚ್.ಪರಶುರಾಮಪ್ಪ, ವಸ್ತುಪ್ರದರ್ಶನ ಪ್ರಾಧಿಕಾರದ ಸಿಇಓ ರಾಜೇಶ್ ಜಿ.ಗೌಡ, ವಿವಿಧ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಕೊಡಗು ಉಸ್ತುವಾರಿ ಸಚಿವರ ಆಪ್ತ ಸಹಾಯಕನೆಂದು ಹೇಳಿ ಕಂದಾಯ ನಿರೀಕ್ಷಕನಿಂದ 20 ಸಾವಿರ ರೂ. ಸುಲಿಗೆ





ಕುಶಾಲನಗರ ಪೊಲೀಸರಿಂದ ಮೈಸೂರಿನ ಇಬ್ಬರ ಸೆರೆ

ಮಡಿಕೇರಿ, ನ.22– ಕೊಡಗು ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಸಹಾಯಕರು ಎಂದು ಹೇಳಿಕೊಂಡು ಕುಶಾಲನಗರ ತಾಲೂಕು ಕಂದಾಯ ನಿರೀಕ್ಷಕರಿಂದ 20 ಸಾವಿರ ರೂ. ವಸೂಲಿ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರು ಮೂಲದ ಇಬ್ಬರು ಆರೋಪಿಗಳನ್ನು ಕುಶಾಲನಗರ ಪಟ್ಟಣ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮೈಸೂರಿನ ರಾಮೇನಹಳ್ಳಿಯ ರಘುನಾಥ್(34) ಮತ್ತು ದಟ್ಟಗಳ್ಳಿಯ ಶಿವಮೂರ್ತಿ(35) ಬಂಧಿತ ಆರೋಪಿಗಳು.

ಪ್ರಕರಣದ ಹಿನ್ನೆಲೆ: ಕುಶಾಲನಗರ ತಾಲೂಕಿನ ಕಂದಾಯ ನಿರೀಕ್ಷಕರಾದ ಸಂತೋಷ್ ಅವರಿಗೆ ನ.19ರ ರಾತ್ರಿ 9 ಗಂಟೆಯ ವೇಳೆಗೆ ಅಪರಿಚಿತ ವ್ಯಕ್ತಿ ಕರೆ ಮಾಡಿ ತನ್ನನ್ನು ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಸಹಾಯಕ ಎಂದು ಹೇಳಿಕೊಂಡಿದ್ದ. ಮಾತ್ರವಲ್ಲದೇ ತುರ್ತಾಗಿ 20 ಸಾವಿರ ರೂ. ಹಣದ ಅವಶ್ಯಕತೆ ಇದ್ದು, 'ಗೂಗಲ್ ಪೇ' ಮಾಡುವಂತೆ ಹೇಳಿದ್ದ. ಹಣವನ್ನು ಆದಷ್ಟು ಶೀಘ್ರವಾಗಿ ಮರು ಪಾವತಿ ಮಾಡುವುದಾಗಿಯೂ ಭರವಸೆ ನೀಡಿದ್ದ. ಈ ಹಿನ್ನೆಲೆಯಲ್ಲಿ ಸಂತೋಷ್ ಅವರು 20 ಸಾವಿರ ರೂ.ಗಳನ್ನು ಕಳುಹಿಸಿದ್ದರು. ಕಂದಾಯ ನಿರೀಕ್ಷಕ ಸಂತೋಷ್ ಅವರು ನ.20ರಂದು ಜಿಲ್ಲಾ ಉಸ್ತುವಾರಿ ಸಚಿವರ ಕಚೇರಿಯಲ್ಲಿ ವಿಚಾರಿಸಿದ ಸಂದರ್ಭ ಹಣ ಕೇಳಿದ ವ್ಯಕ್ತಿ ಮತ್ತು ಆ ಮೊಬೈಲ್ ಸಂಖ್ಯೆಯ ಯಾವುದೇ ಮಾಹಿತಿ ಇಲ್ಲ ಎಂದು ಅಲ್ಲಿನ ಸಿಬ್ಬಂದಿ ಹೇಳಿದ್ದರು. ಈ ಹಿನ್ನೆಲೆಯಲ್ಲಿ ವಂಚನೆಗೆ ಒಳಗಾದ ಸಂತೋಷ್ ಅವರು ಕುಶಾಲನಗರ ಪಟ್ಟಣ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ಮಾಹಿತಿ ಮತ್ತು ಸಾಕ್ಷ್ಯಾಧಾರಗಳನ್ನು ಕಲೆ ಹಾಕಿದ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸೋಮವಾರಪೇಟೆ ಡಿವೈಎಸ್‌ಪಿ ಆರ್.ವಿ. ಗಂಗಾಧರಪ್ಪ, ಕುಶಾಲನಗರ ಪಟ್ಟಣ ಠಾಣೆಯ ವೃತ್ತ ನಿರೀಕ್ಷಕ ಬಿ.ಜಿ. ಪ್ರಕಾಶ್, ಠಾಣಾಧಿಕಾರಿ ಗೀತಾ, ಸಂಚಾರಿ ಠಾಣೆಯ ಠಾಣಾಧಿಕಾರಿ ಕಾಶಿನಾಥ ಬಗಲಿ ಮತ್ತು ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದರು.

ತಾತ್ಕಾಲಿಕ ಹುದ್ದೆಗಳಿಗೆ ಅರ್ಜಿ ಆಹ್ವಾನ

ಮೈಸೂರು, ನ.22– ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿರುವ ಕಾನೂನು ಅಭಿರಕ್ಷಕರ ಕಛೇರಿ ವತಿಯಿಂದ Office assistant/Clerks ಹಾಗೂ Receptionist-com-Data entry Operator(Typist) ತಲಾ 1 ತಾತ್ಕಾಲಿಕ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಡಿಸೆಂಬರ್ 4 ಕೊನೆಯ ದಿನಾಂಕವಾಗಿದ್ದು, ಆಸಕ್ತರು ತಮ್ಮ ವೈಯಕ್ತಿಕ ವಿವರಗಳೊಂದಿಗೆ ಸ್ವ ಅಕ್ಷರದಿಂದ ಭರ್ತಿ ಮಾಡಿದ ಅರ್ಜಿಯನ್ನು ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಎ.ಡಿ.ಆರ್ ಸೆಂಟರ್, ಮಳಲವಾಡಿ, ಜಯನಗರ 5ನೇ ಕ್ರಾಸ್, ಮೈಸೂರು ಇವರಿಗೆ ಸಲ್ಲಿಸಬಹುದು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನ.25, ಮಾಂಸ ಮಾರಾಟ ನಿಷೇಧ

ಮೈಸೂರು, ನ.22– ನವೆಂಬರ್ 25ರಂದು ಸೈಂಟ್ ಟಿ.ಎಲ್ ವಾಸವಾನಿ ಜಯಂತಿ ಪ್ರಯುಕ್ತ ಮೈಸೂರು ಮಹಾನಗರ ಪಾಲಿಕೆಗೆ ಸೇರಿದ ಕುರಿ ಮೇಕೆಗಳ ಕಸಾಯಿಖಾನೆ ಮತ್ತು ಇತರೆ ಎಲ್ಲಾ ಮಾಂಸದ ಅಂಗಡಿಗಳನ್ನು ಮುಚ್ಚಲಾಗುತ್ತದೆ ಹಾಗೂ (ಕುರಿ, ಮೇಕೆ, ಕೋಳಿ ಮಾಂಸ, ಹಂದಿ ಮಾಂಸ ಮತ್ತು ಮೀನು) ವ್ಯಾಪಾರವನ್ನು ನಗರದಲ್ಲಿ ಕಡ್ಡಾಯವಾಗಿ ನಿಷೇಧಿಸಿರುತ್ತದೆ ಆದುದರಿಂದ ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ವಿವಿಧ ಮಾಂಸದ ಅಂಗಡಿಗಳನ್ನು ಮುಚ್ಚಲು ಆದೇಶ ನೀಡಲಾಗಿರುತ್ತದೆ ಎಂದು ಮೈಸೂರು ಮಹಾನಗರ ಪಾಲಿಕೆಯ ಆರೋಗ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆದಾಯ ತೆರಿಗೆ ಅಧಿಕಾರಿಗಳ ಸೋಗಿನಲ್ಲಿ ವೈದ್ಯನ ಮನೆ ಮೇಲೆ ದಾಳಿ

ಆಂಬುಲೆನ್ಸ್‌ನಲ್ಲಿ 200 ಕೋಟಿ ರೂ. ಬಂದಿದೆ ಎಂದು ಹೇಳಿ ಜಾಲಾಡಿದರು: ನಾಲ್ವರ ಬಂಧನ, ಮತ್ತೊಬ್ಬ ಪರಾರಿ

ಮಡಿಕೇರಿ, ನ.22– ಆದಾಯ ತೆರಿಗೆ ಅಧಿಕಾರಿಗಳು ಎಂದು ಹೇಳಿಕೊಂಡು ದಂತ ವೈದ್ಯರೊಬ್ಬರ ಮನೆಗೆ ದಾಳಿ ನಡೆಸಿದ ಐವರು ಮನೆಯಿಡೀ ಜಾಲಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕುಶಾಲನಗರ ಪಟ್ಟಣ ಠಾಣೆ ಪೊಲೀಸರು ನಾಲ್ವರು ನಕಲಿ ಆದಾಯ ತೆರಿಗೆ ಅಧಿಕಾರಿಗಳನ್ನು ಬಂಧಿಸಿದ್ದಾರೆ.

ವಿರಾಜಪೇಟೆ ಬಿಟ್ಟಂಗಾಲದ ಟೀನಾ ನಂಜಪ್ಪ (37), ಬೇತು ಗ್ರಾಮದ ಕಾರ್ಯಪ್ಪ(42), ಪೊನ್ನಂಪೇಟೆ ತಾಲೂಕಿನ ನೀತಾ ಮಿಳಿಂದ್(45) ಮತ್ತು ದೇವನಹಳ್ಳಿಯ ಹರೀಶ್(33) ಬಂಧಿತ ಆರೋಪಿಗಳು. ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊರ್ವ ಆರೋಪಿ ತಲೆಮರೆಸಿಕೊಂಡಿದ್ದಾನೆ.

ಪ್ರಕರಣದ ಹಿನ್ನೆಲೆ: ಕುಶಾಲನಗರ ಗುಮ್ಮನಕೊಲ್ಲಿ ನಿವಾಸಿಯಾಗಿರುವ ಪ್ರವೀಣ್ ದೇವರಗುಂಡ ಸೋಮಪ್ಪ ಅವರು ವೃತ್ತಿಯಲ್ಲಿ ದಂತ ವೈದ್ಯರಾಗಿದ್ದಾರೆ. ನ.9ರ ಬೆಳಗ್ಗೆ 7.30ರ ಸಮಯದಲ್ಲಿ ಐವರು ಅಪರಿಚಿತರು, ತಾವು ಆದಾಯ ತೆರಿಗೆ ಅಧಿಕಾರಿಗಳು ಎಂದು ಹೇಳಿಕೊಂಡು ಪ್ರವೀಣ್ ಮನೆಗೆ ದಾಳಿ ನಡೆಸಿದ್ದಾರೆ. ನಿಮ್ಮ ಮನೆಗೆ ಆಂಬುಲೆನ್ಸ್ ವಾಹನದಲ್ಲಿ 200 ಕೋಟಿ ರೂ. ಬಂದಿರುವ ಮಾಹಿತಿ ಇದೆ. ಹೀಗಾಗಿ ಮನೆಯನ್ನು ಪರಿಶೀಲನೆ ನಡೆಸಬೇಕಿದೆ ಎಂದು ಹೇಳಿದ್ದಾರೆ.

ಮಾತ್ರವಲ್ಲದೇ ಮನೆ ಮಂದಿಯನ್ನು ಒಂದು ಕಡೆ ಕುಳಿತುಕೊಳ್ಳುವಂತೆ ಹೇಳಿ ಎಲ್ಲರ ಮೊಬೈಲ್ ಫೋನ್‌ಗಳನ್ನು ಸ್ವಿಚ್ ಆಫ್ ಮಾಡಿಸಿದ್ದಾರೆ. ಬಳಿಕ 8.45 ಗಂಟೆಯವರೆಗೂ ಮನೆಯಲ್ಲಿ ಹುಡುಕಾಟ ನಡೆಸಿದ್ದರು. ಈ ಕುರಿತು ಅನುಮಾನ ವ್ಯಕ್ತಪಡಿಸಿದ್ದ ವೈದ್ಯ ಪ್ರವೀಣ್ ದೇವರಗುಂಡ ಸೋಮಪ್ಪ ಅವರು ಕುಶಾಲನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಪೊಲೀಸರು ನಾಲ್ವರು ಆರೋಪಿಗಳನ್ನು ಬಂಧಿಸಿ ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ಸೋಮವಾರಪೇಟೆ ಡಿವೈಎಸ್‌ಪಿ ಆರ್.ವಿ. ಗಂಗಾಧರಪ್ಪ, ಕುಶಾಲನಗರ ಪಟ್ಟಣ ಠಾಣೆಯ ವೃತ್ತ ನಿರೀಕ್ಷಕ ಬಿ.ಜಿ. ಪ್ರಕಾಶ್, ಠಾಣಾಧಿಕಾರಿ ಗೀತಾ, ಸಂಚಾರಿ ಠಾಣೆಯ ಠಾಣಾಧಿಕಾರಿ ಕಾಶಿನಾಥ ಬಗಲಿ ಮತ್ತು ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಅಪರಿಚಿತ ವ್ಯಕ್ತಿಗಳು ಮನೆಗೆ ನುಗ್ಗಿ ನಾವು ಆದಾಯ ತೆರಿಗೆ ಇಲ್ಲವೆ ಇನ್ನಿತರೆ ಇಲಾಖೆ ಅಧಿಕಾರಿಗಳು ಎಂದು ಹೇಳಿಕೊಂಡು ಮನೆ ಅಥವಾ ಕಚೇರಿ ಪರಿಶೀಲನೆ ನಡೆಸಲು ಮುಂದಾದರೆ ಪೊಲೀಸ್ ಸಹಾಯವಾಣಿ 112 ಕ್ಕೆ ಕರೆ ಮಾಡಿ ಮಾಹಿತಿ ನೀಡುವಂತೆ ಪೊಲೀಸ್ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

PUBLIC NOTICE

This is to notify to the General Public that our client is intending to purchase the property more fully described in the schedule below from its owner SRI. D. C. CHANDRAKUMAR, son of Sri.D. K. Chikkaramegowda, aged about 59 years, Residing at #336, A1 Block, 11th Cross, 3rd main, Vijayanagar, Mysuru - 570 018.

If anyone is having any right, title or interest or charge or mortgage or any encumbrance, Court attachment, right of maintenance etc., over the schedule property, they may file their written objections before the undersigned within 15 days failing which our client will proceed further to purchase the schedule property from its owners.

SCHEDULE: All that piece and parcel of the residential site property bearing no. 5041 measuring East to West 9 Meters and North to South 12 Meters in total measuring 108 Sq. Meters situated at 2nd Phase, 4th stage, Vijayanagara, Devaraja Mohalla, Mysuru City and bounded on: East by : Site No.5042, West by : Site No.5040, North by : Site No.5022, South by : Road

Sd/- Sri. P.K Ponnaiah, Sri. B.P.Vignesh Sri. Naveen Ponnaiah
Advocate P.K.P. Law Associates
No.1662/1A, First floor Radha madhav Connect, Narayana Shastry Road, Beside Secure Hospital, Mysore - 570 004.
Mob- 96325 38866, 9448773611

PUBLIC NOTICE

Notice is given on behalf of my client Sri. SATHYANARAYANA.K.R son of Late.K.V.Ramaswamy, aged about 62 years residing at No.905/85, 5th Cross, 4th Main, Vidyaranyapuram, Khille Mohalla, Mysuru, that the property as more particularly described in the schedule hereunder belongs to Sri.JAYARAM son of Late.Javaregowda, aged about 49 years, residing at Maratikyathanahalli Village, Jayapura Hobli, Mysuru Taluka and District and the said Jayaram has executed an Memorandum of Understanding in favour of my client on 26.3.2018 for the development of the schedule property into residential sites.

In default of performance of the lawful obligation set under the aforesaid Memorandum of Understanding, my client has also instituted a Suit against aforesaid Jayaram in Original Suit bearing No. 1651 of 2020 on the file of the Hon'ble XI Additional I Civil Judge and JMFC at Mysuru and Commercial Original Suit bearing No. 174 of 2022 on the file of the Principal District and Sessions Court at Mysuru and both the matter is still pending.

In the meantime, my client has learnt that the aforesaid Jayaram colluding himself with one M/s Value Space Infra Projects LLP Represented by its Designated Partner Sri. Pradeep Kantamani is trying to develop and alienate the schedule property without bringing it to the notice of my client. Therefore, the general public is hereby cautioned and informed not to enter into any agreement / understanding for the purpose of Sale, Exchange, Mortgage, Charge, Gift, possession, Lease, Tenancy, Sub tenancy, Lien, License, Hypothecation, Transfer of title or other, disposition in respect to the schedule property against Sri. Jayaram and M/s Value Space Infra Projects. In spite of this notice, is any person/s, agency, institution or corporation enters into any agreeinent' of understating, the same shall be deemed to be void and it shall not bind on my client.

SCHEDULE:

All that piece and Parcel of the Property bearing Sy.No. 28/2 (measuring an extent of 1 Acre 28 Guntas), Sy. No 28/3 (Measuring an Extent of 28 Guntas) and Sy.No 28/4 measuring (Measuring an extent of 27 Guntas) all Sy.No's totally measuring an extent of 3 Acres 3 Guntas situated at Martikyathanahalli Village, Jayapura Hobli, Mysuru Taluka and District bounded by:
North: Property bearing Sy.No 28/1 and 27, East: Property bearing Sy.No 27 and 29, West: Property bearing Sy.No 20, South: Property bearing Sy.No 29 and 9

Sd/- **SRINIDHI**,
Advocate and Law Consultant,
Office at No. 1037, CH 5/1, Devaparthiva Road, Chamarajapuram, Mysuru 570005, +91 9482584824

Dated: 21st November 2023,
Place: Mysuru

ಕರ್ನಾಟಕ ಸರ್ಕಾರ – ಹಿಂದೂ ಧಾರ್ಮಿಕ ದತ್ತಿ ಇಲಾಖೆ
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು.
ಚಿಕ್ಕಜಾತ್ರಾ ಮಹೋತ್ಸವ–2023

ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ 2023ರ ಶ್ರೀ ಚಿಕ್ಕಜಾತ್ರಾ ಮಹೋತ್ಸವದ ಪ್ರಯುಕ್ತ ಜರುಗುವ ಪ್ರಮುಖ ಧಾರ್ಮಿಕ ಕಾರ್ಯಕ್ರಮಗಳು:

1	ದಿ.25.11.2023 ಶನಿವಾರ	ಸಂಜೆ 7.00 ಗಂಟೆಗೆ	" ಶ್ರೀ ಶ್ರೀಕಂಠಮುಡಿ ಉತ್ಸವ"
2	ದಿ.26.11.2023 ಭಾನುವಾರ	ಸಂಜೆ 7.00 ಗಂಟೆಗೆ	" ಶ್ರೀ ಶಿವದೀಪೋತ್ಸವ"
3	ದಿ.28.11.2023 ಮಂಗಳವಾರ	ಬೆಳಗ್ಗೆ 10.45 ರಿಂದ 11.45 ಗಂಟೆಯೊಳಗೆ	" ಶ್ರೀ ಮನ್ಮಹಾರಥಾರೋಹಣ"
4	ದಿ.30.11.2023 ಗುರುವಾರ	ಸಂಜೆ 7.00 ಗಂಟೆಗೆ	" ಕಪಿಲಾ ನದಿಯಲ್ಲಿ ತೆಪ್ಪೋತ್ಸವ"

ಚಿಕ್ಕಜಾತ್ರಾ ಮಹೋತ್ಸವಂಗಳಿಗೆ ನೀವು ಮತ್ತು ನಿಮ್ಮ ಪುತ್ರ, ಮಿತ್ರ, ಕಳತ್ರ ಬಂಧು ಜನ ಸಮೇತರಾಗಿ ಬಂದು ಶ್ರೀ ಶ್ರೀಯವರ ಸೇವೆಯಂ ಮಾಡಿ ಕೃತಾರ್ಥರಾಗಲು ವಿನಂತಿಸುತ್ತೇವೆ.

ವಿಶೇಷ ಮನವಿ: ದೇವಾಲಯದ ವತಿಯಿಂದ ಪ್ರತಿ ದಿನ ನಡೆಸಲ್ಪಡುತ್ತಿರುವ ಅನ್ನದಾಸೋಹಕ್ಕೆ ಸೇವಾರ್ಥ ರೂಪದಲ್ಲಿ ದವಸ ಧಾನ್ಯ ಮತ್ತು ಇತರೇ ಪದಾರ್ಥಗಳು ಹಾಗೂ ನಗದು ಕಾಣಿಕೆಯನ್ನು ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸಲಾಗುವುದು.

ಜಿ.ನಾಗಚಂದ್ರ ದೀಕ್ಷಿತ್,
ಆಗಮಿಕರು, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು.

ಎಂ. ಜಗದೀಶ್ ಕುಮಾರ್,
ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು.

ಆರ್. ಲೋಕನಾಥ್,
ಕ.ಆ.ಸೇ.(ಆಯ್ಕೆ ಶ್ರೇಣಿ) ಆಡಳಿತಾಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು.

ಡಾ.ರಾಜೇಂದ್ರ ಕೆ.ವಿ. ಐ.ಎ.ಎಸ್
ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು.